ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕ

ಎಚ್.ಎಂ.ಬಸವರಾಜ

ಮಾರ್ಗದರ್ಶಕರು

ಡಾ.ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೨

78

78

ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್.ಪ್ರಬಂಧ)

ಸಂಶೋಧಕ

ಎಚ್.ಎಂ.ಬಸವರಾಜ

ಮಾರ್ಗದರ್ಶಕರು

ಡಾ.ವಿರೂಪಾಕ್ಷಿ ಪೂಜಾರಹಳ್ಳಿ

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೨

ಸಂಶೋಧಕನ ಪ್ರಮಾಣ ಪತ್ರ

ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ ಎಂಬ ಪ್ರಬಂಧವನ್ನು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು. ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

H.M. Basavaraj

ಎಚ್.ಎಂ. ಬಸವರಾಜ
ಸಂಶೋಧಕ, ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 7/5/2002

ಮಾರ್ಗದರ್ಶಕರ ಪ್ರಮಾಣಪತ್ರ

ಗುಡೇಕೋಟೆ : ಒಂದು ಚಾರಿತ್ರಿಕ ಅಧ್ಯಯನ ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶ್ರೀ ಎಚ್.ಎಂ.ಬಸವರಾಜ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

(ಡಾ. ವಿರೂಪಾಕ್ಷ ಪೂಜಾರಹಳ್ಳಿ)
ಮಾರ್ಗದರ್ಶಕರು ಮತ್ತು ಅಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 7/5/2002

ಕೃತಜ್ಞತೆಗಳು

ಗುಡೇಗೋಟೆ : ಒಂದು ಚಾರಿತ್ರಿಕ ಅಧ್ಯಯನ ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ ಒಪ್ಪಿಸಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡ, ಮಾನ್ಯ ಕುಲಸಚಿವರಾದ ಡಾ.ಕೆ.ವಿ.ನಾರಾಯಣ ಅವರುಗಳಿಗೆ,

ಅಧ್ಯಯನಾಂಗದ ನಿರ್ದೇಶಕರಾದ ಡಾ. ಹಿ.ಚಿ.ಬೋರಲಿಂಗಯ್ಯ ಹಾಗೂ ಚರಿತ್ರೆ ವಿಭಾಗದ ಅಂದಿನ ಮುಖ್ಯಸ್ಥರಾದ ಪ್ರೊ.ಲಕ್ಷ್ಮಣ್ ತೆಲಗಾವಿ ಹಾಗೂ ಈಗಿನ ಮುಖ್ಯಸ್ಥರಾದ ಡಾ.ಟಿ.ಪಿ.ವಿಜಯ್ ಅವರುಗಳಿಗೆ,

ನನಗೆ ಪ್ರಬಂಧದ ವಿಷಯ ಸೂಚಿಸಿ ಅಧ್ಯಯನದುದ್ದಕ್ಕೂ ತಾಳ್ಮೆಯಿಂದ ಮಾರ್ಗದರ್ಶನ ನೀಡಿದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರಿಗೆ ಮತ್ತು ನನ್ನ ಅಧ್ಯಯನ ಸಂದರ್ಭದಲ್ಲಿ ಸಲಹೆ ಸೂಚನೆಗಳನ್ನು ನೀಡಿದ ಡಾ.ಸಿ.ಆರ್.ಗೋವಿಂದರಾಜು, ಡಾ.ಎನ್.ಚಿನ್ನಸ್ವಾಮಿ ಸೋಸಲೆ, ಶ್ರೀ ಮೋಹನ್‌ಕೃಷ್ಣ ರೈ, ಪ್ರೊ.ಎಚ್.ಎಂ.ಮರುಳಸಿದ್ದಯ್ಯ, ಡಾ. ಕೆ.ಎಂ.ಸುರೇಶ್, ಶ್ರೀ ತಾರಕೇಶ್ವರ, ಡಾ. ಬಿ.ಎಂ.ಪುಟ್ಟಯ್ಯ, ಶ್ರೀ ಹರಿಶ್ಚಂದ್ರ ದಿಗ್ಸಂಗಿಕರ್ ಅವರುಗಳಿಗೆ, ಗುಡೇಕೋಟೆ ಪಾಳೆಯಗಾರರ ವಂಶಸ್ಥರಾದ ಶ್ರೀ ಕೃಷ್ಣವರ್ಮರಾಜ, ಜರ್ಮಲಿ ಪಾಳೆಯಗಾರರ ವಂಶಸ್ಥರಾದ ಶ್ರೀ ಸಿದ್ಧಪ್ಪನಾಯಕ ಅವರುಗಳಿಗೆ,

ಅಧ್ಯಯನ ಸಂದರ್ಭದಲ್ಲಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಪ್ರಬಂಧ ಸಿದ್ಧಗೊಳಿಸುವಲ್ಲಿ ಮುಕ್ತವಾದ ಸಲಹೆಗಳನ್ನು ನೀಡಿದ ಎ.ಚನ್ನಪ್ಪ, ಕರಿಸಿದ್ದನಗೌಡ ಪಾಟೀಲ, ಯು.ಜಯಣ್ಣ, ಎಂ.ಎರ್ರಿಸ್ವಾಮಿ, ಆರ್.ಜಿ.ರಾಜಕುಮಾರ ಅವರುಗಳಿಗೆ,

ಸ್ನೇಹಿತರಾಗಿ ನನ್ನ ಏಳ್ಗೆಯನ್ನು ಬಯಸುತ್ತಿರುವ ಸುಭಾಸ್‌ಚಂದ್ರ ದೊಡ್ಡಮನಿ, ಗಂಗಾಧರ, ಕೆ.ಮಹೇಶ, ಸುರೇಶ ಬಡಿಗೇರ, ಪ್ರಕಾಶ ಹುಗ್ಗಿ, ಸುರ್ದಶನ, ಪಿ.ವೀರೇಶ, ಪಿ.ಕೆ.ಶ್ರೀನಿವಾಸ, ಜಿ.ನಿಸ್ಸಾರ ಅಹ್ಮದ್ ಅವರುಗಳಿಗೆ,

ಮಾಹಿತಿ ಸಂಗ್ರಹಿಸುವ ಅವಧಿಯಲ್ಲಿ ಸಹಕರಿಸಿದ ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಮದ್ರಾಸ್ ಪತ್ರಗಾರ ಇಲಾಖೆಯವರಿಗೂ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಸಿಬ್ಬಂದಿವರ್ಗದವರಿಗೂ, ಪುಸ್ತಕ ಸೌಲಭ್ಯವನ್ನು ಒದಗಿಸಿಕೊಟ್ಟು ಕನ್ನಡ ವಿಶ್ವವಿದ್ಯಾಲಯದ

ಗ್ರಂಥಾಲಯದ ಅಧಿಕಾರಿಗಳಿಗೂ ಮತ್ತು ಸಿಬ್ಬಂದಿ ವರ್ಗದವರಿಗೂ ಹಾಗೂ ಚರಿತ್ರೆ ವಿಭಾಗದ ಬೋಧಕೇತರ ಸಿಬ್ಬಂದಿಯವರಾದ ಶ್ರೀ ಮರಿಸ್ವಾಮಿ, ಶ್ರೀ ವಿಜಯಕುಮಾರ್, ಶ್ರೀ ಓಬಯ್ಯ, ಶ್ರೀ ಅಬ್ದುಲ್‌ನಬಿ ಅವರುಗಳಿಗೆ,

ಮಗನ ಓದುವಿಗೆ ಮತ್ತು ಏಳ್ಗೆಯನ್ನು ಬಯಸುತ್ತಿರುವ ತಂದೆ ತಾಯಿಗಳಿಗೆ ಪ್ರಣಾಮಗಳು. ನನ್ನ ಶ್ರೇಯಸ್ಸನ್ನು ಬಯಸುತ್ತಿರುವ ಅಕ್ಕನವರಾದ ಕೆ.ಎಂ.ಅನುಸೂಯ, ಕೆ.ಎಂ.ಕೂಟ್ರಮ್ಮ ಮಾವನವರಾದ ಕೆ.ಎಂ.ರಾಜಶೇಖರಯ್ಯ, ಕೆ.ಎಂ.ಕೊಟ್ರಯ್ಯ ಹಾಗೂ ಕುಟುಂಬವರ್ಗದವರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಹಾಗೂ ಅಂದವಾಗಿ ಛಾಯಾಚಿತ್ರಗಳನ್ನು ತೆಗೆದುಕೊಟ್ಟ ಬಿ.ರಮೇಶ ಅವರಿಗೆ, ಅಕ್ಕರೆಯಿಂದ ಅಕ್ಷರ ಸಂಯೋಜಿಸಿಕೊಟ್ಟ ಶ್ರೀ ಎ.ಎಂ.ಕೃಪಾಶಂಕರ್ ಅವರಿಗೆ

ತುಂಬು ಹೃದಯದ ಕೃತಜ್ಞತೆಗಳು.

ಎಚ್. ಎಂ. ಬಸವರಾಜು

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪ

ಆಧುನಿಕ ಜಗತ್ತಿನಲ್ಲಿ ವೈಜ್ಞಾನಿಕ, ವೈಚಾರಿಕ ಹಾಗೂ ಜಾಗತೀಕರಣದಂತಹ ವಿಷಯಗಳು ಪ್ರಮುಖವಾಗಿ ಚರ್ಚೆಗೆ ಒಳಪಡುತ್ತವೆ. ಇಂಥ ಪ್ರಕ್ರಿಯೆಗಳಿಂದ ಚರಿತ್ರೆಯನ್ನು ನಿರೂಪಿಸುವ ಜನಜೀವನವನ್ನು ಚಿತ್ರಿಸುವ, ಸಾಂಸ್ಕೃತಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಐತಿಹಾಸಿಕ ವಿಚಾರಗಳು ಇಂದು ಕ್ರಮೇಣವಾಗಿ ತಮ್ಮ ಮಹತ್ವವನ್ನು ಕಳೆದುಕೊಳ್ಳುತ್ತಿವೆ.

ಈಗಾಲೇ ಬಹಳಷ್ಟು ಪ್ರಚಾರದಲ್ಲಿರುವ ರಾಜಮನೆತನಗಳ ಲಿಖಿತ ಚರಿತ್ರೆಯನ್ನು ಮಾತ್ರ ಇತಿಹಾಸವೆಂದು ಭಾವಿಸಲಾಗಿತ್ತು. ಇಂಥಾ ಮರೆಯಾದ ಚಾರಿತ್ರಿಕ ಸಂಗತಿಗಳ ವಿಶೇಷವಾದ ಆಸಕ್ತಿಯನ್ನು ವಹಿಸಿ ಚರ್ಚೆ, ವಿಶ್ಲೇಷಣೆ, ವಿವರಣೆ ಹಾಗೂ ಸಂಶೋಧನೆಗಳು ಇತ್ತೀಚೆಗೆ ನಡೆಯುತ್ತವೆ. ಈ ಹಿಂದೆ ಪ್ರಮುಖ ರಾಜಮನೆತನಗಳ ಶ್ರೇಯೋಭಿವೃದ್ಧಿಗೆ ಬಲವಾದ ಅಡಿಪಾಯವನ್ನು ಹಾಕಿ ಮತ್ತು ಅವುಗಳ ರಕ್ಷಣೆಗೆ ಸದಾ ಕಂಕಣಬದ್ಧರಾಗಿ ಟೊಂಕಕಟ್ಟಿ ಹೋರಾಡಿದ ಸೈನಿಕರ, ಸಾಮಂತರ, ಮಾಂಡಳೀಕರ, ಪಾಳೆಯಗಾರರ ಕುರಿತಾದ ಚರಿತ್ರೆಯನ್ನು ಹುಡುಕಿಕೊಳ್ಳುವಲ್ಲಿ ಅನೇಕರು ಅನಾಸಕ್ತಿಯನ್ನು ತಾಳಿದ್ದುಂಟು ಅಷ್ಟಲ್ಲದೆ ಈ ವಿಷಯಗಳು ಅಷ್ಟೊಂದು ಪ್ರಮುಖವಾದುವೇನಲ್ಲ ಎಂಬ ಅವಸರದ ತೀರ್ಮಾನಕ್ಕೂ ಸಾಧ್ಯತೆಯಿತ್ತು. ಇದರಿಂದಾಗಿ ತಳಮಟ್ಟದ ಚರಿತ್ರೆಯು ಕಣ್ಮರೆಯಾಗಿ ಮೇಲ್ಪಟ್ಟದ ರಾಜ ವೈಭೋಗವು ಇತಿಹಾಸದಲ್ಲಿ ಇಂದ್ರಚಂದ್ರರೆಂದು ಸುವರ್ಣಯುಗವೆಂದು ಗುರುತಿಸಲ್ಪಡುತ್ತದೆ.

ಈವರೆಗೆ ನಡೆದಂಥಹ ಸಂಶೋಧನೆಗಳು ತಲಸ್ಪರ್ಶಿ ಅಧ್ಯಯನಗಳಾದರೂ ತಳಮಟ್ಟದ ಚರಿತ್ರೆಯನ್ನು ಬೆಳಕಿಗೆ ತರುವಲ್ಲಿ ವಿಫಲವಾಗಿವೆ ಎನಿಸುತ್ತದೆ. ಅಷ್ಟೊಂದು ವಿಶಾಲವಾಗಿದೆ ಈ ಚರಿತ್ರೆ ಕ್ಷೇತ್ರ. ಒಂದು ಗ್ರಾಮ, ಒಬ್ಬರಾಜ, ಒಂದು ಕಾಲ, ಒಂದು ಕೋಟೆ ಮತ್ತು ದೇವಾಲಯವನ್ನು ಕುರಿತು ಸಮಗ್ರವಾಗಿ ಸಂಶೋಧನೆ ಕೈಗೊಂಡು ಅವುಗಳ ಮಹತ್ವವನ್ನು ತಿಳಿಸಲು ಪ್ರಯತ್ನಿಸಿದರೂ ಮರೆಯಾದ ಸಂಗತಿಗಳು ಹಾಗೆಯೇ ಸುಪ್ತವಾಗಿರುವುದುಂಟು.

ಪ್ರಸ್ತುತ ಅಧ್ಯಯನವು ಪ್ರಾದೇಶಿಕ, ಸ್ಥಳೀಯ ಚರಿತ್ರೆ ಕುರಿತಂಥದ್ದು. ಗುಡೇಕೋಟೆ ಪ್ರದೇಶದಲ್ಲಿ ಕಣ್ಮರೆಯಾಗಿರುವ ಚಾರಿತ್ರಿಕ ಅಂಶಗಳನ್ನು ಗುರುತಿಸುವ ಹಾಗೂ ವಿಶ್ಲೇಷಿಸುವ ಪ್ರಯತ್ನವಿದೆ. ಹೀಗೆ ಮಹತ್ವದ ಉದ್ದೇಶವನ್ನು ಇಟ್ಟುಕೊಂಡು 'ಗುಡೇಕೋಟೆ ಒಂದು ಚಾರಿತ್ರಿಕ ಅಧ್ಯಯನ' ಎಂಬ ಶೀರ್ಷಿಕೆಯನ್ನು ಈ ಪ್ರಬಂಧಕ್ಕೆ ನೀಡಲಾಗಿದೆ. ಪ್ರಸ್ತುತ ಅಧ್ಯಯನವನ್ನು ಇಲ್ಲಿಯ ಪಾಳೆಯಗಾರರ ಮೇಲೆ ಕೇಂದ್ರೀಕರಿಸಿ ವಿಷಯ ಸಂಗ್ರಹಣೆಯನ್ನು ಕ್ಷೇತ್ರಕಾರ್ಯದಿಂದ ದೊರೆತ ಆಕರಗಳಿಂದ ಇಲ್ಲಿನ ಚರಿತ್ರೆ ಮತ್ತು ಸಂಸ್ಕೃತಿಯನ್ನು ತಿಳಿಸುವ ಗುರಿಯಿದೆ. ಗುಡೇಕೋಟೆ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಸಂಗತಿಗಳನ್ನು ಮಾತ್ರ ಈ ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಉಳಿದಂತೆ ಗುಡೇಕೋಟೆಯ ಸುತ್ತಮುತ್ತಲಿನ ಹಳ್ಳಿಗಳ ಚರಿತ್ರೆಯನ್ನಾಗಲಿ, ಸಂಸ್ಕೃತಿಯನ್ನಾಗಲಿ ಶೋಧಿಸುವ ಪ್ರಯತ್ನ ಮಾಡಿರುವುದಿಲ್ಲ ಏಕೆಂದರೆ ನನ್ನ ವಿಷಯ ವ್ಯಾಪ್ತಿಗೆ ಅನುಗುಣವಾಗಿ ಇವುಗಳನ್ನು ಬಿಟ್ಟಿದ್ದೇನೆ.

ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಹೋಬಳಿ ಕೇಂದ್ರವಾಗಿರುವ ಗುಡೇಕೋಟೆಯು ಬಹುಪುರಾತನ ಕಾಲದ ಅವಶೇಷಗಳನ್ನು ಒಳಗೊಂಡಿದೆ. ಇಲ್ಲಿ ಕಂಡುಬರುವ ಕೋಟೆ, ದೇವಾಲಯ, ಉಪ್ಪರಿಗೆ, ಬಾವಿ ಹಾಗೂ ಕೆರೆಕಟ್ಟೆಗಳು ಗ್ರಾಮದ ಚರಿತ್ರೆಯನ್ನು ಸಾರುವ ಪ್ರತೀಕಗಳಾಗಿವೆ. ಇಂಥ ಸ್ಮಾರಕಗಳ ಭವ್ಯ ಚರಿತ್ರೆಯನ್ನು ಈವರೆಗೆ ಬೆಳಕಿಗೆ ತಾರದಿರುವುದು ವಿಷಾದನೀಯ. ಇತ್ತೀಚೆಗೆ ಇಂಥ ಪ್ರಯತ್ನ ನಡೆಯುತ್ತಿದೆ. ಇಲ್ಲಿಯ ಇತಿಹಾಸವನ್ನು ಗುರುತಿಸುವ ಕಾರ್ಯದಲ್ಲಿ ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಎಸ್.ಎಂ.ನಾಗಭೂಷಣ ಗುಡೇಕೋಟೆ ಕಿರುಚಿತ್ರಣವನ್ನು ತಮ್ಮ ಪತ್ರಿಕ ಲೇಖನದಲ್ಲಿ ನೀಡಿದ್ದಾರೆ. ಅದೇ ರೀತಿ ಕುಂ.ಬಾ. ಸದಾಶಿವಪ್ಪ ಬಳ್ಳಾರಿ ಜಿಲ್ಲಾ ಸಂಸ್ಕೃತಿ ತಾಲೂಕು ದರ್ಶನ ಎಂಬ ಪುಸ್ತಕದಲ್ಲಿ ಗುಡೇಕೋಟೆ ಪರಿಚಯ ಮಾಡಿಕೊಡುತ್ತಾರೆಯೇ ಹೊರತು ಯಾರು ದಾಖಲೆಗಳನ್ನು ಆಧರಿಸಿ ಗುಡೇಕೋಟೆಯ ನಿಖರವಾದ ಚರಿತ್ರೆಯನ್ನು ದಾಖಲಿಸಿರುವುದಿಲ್ಲ. ಹೀಗಾಗಿ ಅಲ್ಲಿಯ ದಾಖಲೆಗಳನ್ನು ಶೋಧಿಸಿ ಗುಡೇಕೋಟೆಯ ಇತಿಹಾಸವನ್ನು ಹಾಗೂ ಪಾಳೆಯಗಾರರ ಚರಿತ್ರೆಯನ್ನು ಕಟ್ಟುವ ಕಿರು ಪ್ರಯತ್ನ ಈ ಪ್ರಬಂಧದಲ್ಲಿದೆ. ಪ್ರಸ್ತುತ ಪ್ರಬಂಧದ ಸ್ವರೂಪವು ಒಟ್ಟು ಆರು ಅಧ್ಯಾಯಗಳನ್ನು ಒಳಗೊಂಡಿದೆ.

[illegible]

ಮೊದಲನೆಯ ಅಧ್ಯಾಯ ಉದ್ದೇಶ ಮಹತ್ವ, ಇದುವರೆಗೂ ಗುಡೇಕೋಟೆ ಮೇಲೆ ನಡೆದ ಅಧ್ಯಯನವನ್ನು ಪರಿಚಯಿಸುವುದಾಗಿದೆ.

ಅಧ್ಯಾಯ ಎರಡರಲ್ಲಿ ಗುಡೇಕೋಟೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆಯ ವಿವರಣೆಯನ್ನು ನೀಡಲಾಗಿದೆ. ಅಲ್ಲಿರುವ ದೊರೆಗಳ ಬೆಟ್ಟ, ಸೋಮೇಶ್ವರ ಗುಡ್ಡ, ಹರಿಜನಕೇರಿ ಗುಡ್ಡ, ಕರಡಿಗುಡ್ಡ ಹಾಗೂ ಪ್ರಸ್ತುತ ಗ್ರಾಮದಲ್ಲಿರುವ ಎಲ್ಲಾ ಕೇರಿಗಳ ಪರಿಚಯವನ್ನು ಮಾಡಿಕೊಡುವುದರ ಜೊತೆಯಲ್ಲಿ ಗುಡೇಕೋಟೆ ಗ್ರಾಮದ ಸ್ಥಳನಾಮ ಬಗ್ಗೆ ಚರ್ಚಿಸಲಾಗಿದೆ. ಈ ಗ್ರಾಮದ ಬಗ್ಗೆ ಪ್ರಚಲಿತದಲ್ಲಿರುವ ಪುರಾಣ, ದಂತಕಥೆ, ಜನರವಾಡಿಕೆಗಳನ್ನು ಗಮನಿಸಲಾಗಿದೆ. ಗಡಿಯಾಂಕ ಭೀಮನಪಟ್ಟಣ, ಬಾಣಾಸುರ ಪಟ್ಟಣ ಎಂದು ಕರೆಯಿಸಿಕೊಳ್ಳುವ ಹೆಸರುಗಳ ಹಿಂದೆ ಇರುವ ಕಥೆಗಳನ್ನು ಈ ಅಧ್ಯಾಯದಲ್ಲಿ ನಿರೂಪಿಸಲಾಗಿದೆ. ಅಲ್ಲದೆ ಗುಡೇಕೋಟೆ ಭಾಗದಲ್ಲಿ ದೊರೆಯುವ ಪ್ರಾಗೈತಿಹಾಸಿಕ ನೆಲೆಗಳ ಪರಿಚಯವನ್ನು ಸೂಕ್ಷ್ಮಶಿಲಾಯುಗ, ನೂತನಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗಗಳ ಕುರುಹುಗಳನ್ನು ಗುರುತಿಸಲಾಗಿದೆ. ತದನಂತರ ಗುಡೇಕೋಟೆಯ ರಾಜಕೀಯ ಚರಿತ್ರೆಯನ್ನು ಮೌರ್ಯ ಶಾತವಾಹನರ, ಕದಂಬ, ಬಾದಾಮಿ, ಚಾಲುಕ್ಯರ ರಾಷ್ಟ್ರಕೂಟರ ಹೊಯ್ಸಳರು, ಹೊಸಮಲೆ ದುರ್ಗದ ಅರಸರು ಹಾಗೂ ವಿಜಯನಗರ ಸಾಮ್ರಾಜ್ಯಗಳ ಆಡಳಿತಕ್ಕೆ ಒಳಪಟ್ಟಿದ್ದನ್ನು ಜೊತೆಗೆ ಆ ಪ್ರದೇಶವು ಬ್ರಿಟಿಷರ ಕಾಲದಲ್ಲಿ ಯಾವ ರೀತಿ ಅವರ ಸಾಮ್ರಾಜ್ಯ ದಾಹಿತತ್ವಕ್ಕೆ ಒಳಗಾಗಿತ್ತು ಎಂಬುದನ್ನು ವಿವರಿಸಲಾಗಿದೆ.

ಪ್ರಬಂಧದ ಮುಖ್ಯ ಭಾಗವಾದ ಅಧ್ಯಾಯ ಮೂರರಲ್ಲಿ ಗುಡೇಕೋಟೆಯ ಪಾಳೆಯಗಾರರ ರಾಜಕೀಯ ಪರಿಸರವನ್ನು ಹಾಗೂ ಆ ಪಾಳೆಯಪಟ್ಟು ಸ್ಥಾಪನೆಯಾಗಲು ಕಾರಣವಾದ ಘಟನೆಯೊಂದನ್ನು ಕೈಫಿಯತ್ತು ಹಾಗೂ ಕೈಬರಹದ ದಾಖಲೆಗಳನ್ನು ಅಧ್ಯಯನ ಮಾಡುವ ಮುಖಾಂತರ ಸತ್ಯ, ಅಸತ್ಯತೆಯನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ, ಗುಡೇಕೋಟೆ ಪಾಳೆಯಗಾರಿಕೆಯ ವಂಶಸ್ಥರೆಂದು ಹೇಳಿಕೊಳ್ಳುವ ಬೊಮ್ಮಂತ ರಾಜನಿಂದ ಸಂಸ್ಥಾನವು ಆರಂಭಗೊಂಡ ಬಗ್ಗೆ ಹಾಗೂ ತನ್ನ ಮಕ್ಕಳಾದ ಹಿರೇ ಬೊಮ್ಮಂತ ರಾಜನಿಗೆ ಕುಡತಿನಿ, ಬಿಸಾಳನಾಯಕನಿಗೆ ಸಂಡೂರು, ರಾಜಪ್ಪನಾಯಕನಿಗೆ ಬಾಣರಾವಿ, ಹೀರೇ ಮಲ್ಲಿಕಾರ್ಜುನ ನಾಯಕನಿಗೆ ಜರಿಮಲೆ, ವೀರಪ್ಪನಾಯಕನಿಗೆ ಉಜ್ಜನಿ, ಯಿಮ್ಮಡಿ ನಾಯಕನಿಗೆ ಗುಡೇಕೋಟೆ, ಚಿನ್ನಯ್ಯನಾಯಕನಿಗೆ ವಡ್ಡು, ದರೋಜಿಯನ್ನು ಬಿಟ್ಟುಕೊಡುವ ಬಗ್ಗೆ ಕೈಫಿಯತ್ತನ ಆಧಾರದಿಂದ ವಿವರಿಸಲಾಗಿದೆ. ಕೈ ಬರಹದ ದಾಖಲೆಯಲ್ಲಿ ದೊರೆತಿರುವಂತೆ ಗುಡೇಕೋಟೆಯ ಪಾಳೆಯಗಾರರ ಹಾಗೂ ಅವರ ವಂಶಾವಳಿಯಲ್ಲಿ ಚಿತ್ರಿತವಾಗಿರುವ ರಾಮಪ್ಪನಾಯಕ ನಿಂದ ಇಮ್ಮಡಿ ಸದಾಶಿವರಾಜರಿಗೆ ಆಳಿದ ಗುಡೇಕೋಟೆ ಪಾಳೆಯಗಾರರನ್ನು ಗುರುತಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಪಾಳೆಯಗಾರರ ಸಂಸ್ಕೃತಿಯು ಅವರ ಆಡಳಿತದಲ್ಲಿ ಇವರು ಸೀಮೆಗಳನ್ನಾಗಿ ವಿಂಗಡಿಸಿದ್ದರು. ಏಕರೂಪ ಆಡಳಿತ ವ್ಯವಸ್ಥೆ ಹೊಂದಿದ್ದು ಏಕರೂಪದ ತೆರಿಗೆ ಪದ್ಧತಿಯನ್ನು ಹೊಂದಿದ್ದು, ಧಾರ್ಮಿಕವಾಗಿ ಸಮಾನತೆ ದೃಷ್ಟಿಯಿಂದ ಕಂಡು ಎಲ್ಲಾ ಧರ್ಮದವರಿಗೂ ದಾನದತ್ತಿ ನೀಡಿರುವುದನ್ನು ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

ಅಧ್ಯಾಯ ಐದರಲ್ಲಿ ಗುಡೇಕೋಟೆ ಗ್ರಾಮದಲ್ಲಿ ಕುಂಡುಬರುವ ದೇವಾಲಯಗಳು, ಮಠಗಳು, ಉಪ್ಪರಿಗೆ, ಕೋಟೆ, ರಾಗಿಕಣಜ, ತುಪ್ಪದ ಕಣಜ ಮುಂತಾದ ಸ್ಮಾರಕಗಳ ವಿವರಣೆಯನ್ನು ಈ ಅಧ್ಯಾಯದಲ್ಲಿ ನೀಡಲಾಗಿದೆ. ಅಧ್ಯಾಯದ ಕೊನೆಯಲ್ಲಿ ಒಟ್ಟಾರೆಯಾಗಿ ಅಧ್ಯಯನ ಫಲಶೃತಿಯನ್ನು ಸಮಾರೋಪ ಭಾಗದಲ್ಲಿ ಕಂಡುಕೊಳ್ಳಲಾಗಿದೆ. ಹೀಗೆ ಗುಡೇಕೋಟೆಯ ಸಮಗ್ರವಾದ ಸಾಂಸ್ಕೃತಿಕ ಚಿತ್ರಣದ ಜೊತೆಗೆ ಅಲ್ಲಿಯ ಪಾಳೆಯಗಾರರ ಚರಿತ್ರೆಯನ್ನು ನಿರೂಪಿಸುವಲ್ಲಿ ಈ ಕಿರುಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ. ಆಕರಗಳ ಲಭ್ಯತೆಗೆ ತಕ್ಕಂತೆ ಇಲ್ಲಿ ಚಾರಿತ್ರಿಕೆ ಅಧ್ಯಯನವನ್ನು ಮಾಡಲಾಗಿದೆ. ಮರೆಯಾದ ಅನೇಕ ಚಾರಿತ್ರಿಕ ಸಂಗತಿಗಳ ಇನ್ನೂ ಸಂಶೋಧನೆ ನಡೆಯಬೇಕಾಗಿರುವುದು ಅಗತ್ಯವೆಂದು ತೋರುತ್ತದೆ.

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

ಅಧ್ಯಾಯ ೨

ಗುಡೇಕೋಟೆಯ ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಚಯ

ಒಂದು ದೇಶ, ಪ್ರದೇಶ, ಪಟ್ಟಣ ಹಾಗೂ ಗ್ರಾಮಗಳ ಇತಿಹಾಸ ತಿಳಿಯುವುದಕ್ಕಿಂತ ಮೊದಲು ಅಲ್ಲಿನ ಭೌಗೋಳಿಕ ಸನ್ನಿವೇಶದ ವಿವರ ತಿಳಿದುಕೊಳ್ಳುವುದು ಒಳಿತು. ಇಲ್ಲವಾದಲ್ಲಿ ಅಲ್ಲಿನ ಚರಿತ್ರೆ ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಒಂದು ಪ್ರದೇಶ, ಜನಾಂಗದ ಜೀವನ ವಿಧಾನವನ್ನು ಈ ಭೌಗೋಳಿಕ ಲಕ್ಷಣಗಳು ರೂಪಿಸುತ್ತವೆ. ಈ ಅಂಶಗಳು ಸಂಸ್ಕೃತಿಯ ಬೆಳವಣಿಗೆಗೂ ಸಹ ಕಾರಣವಾಗುತ್ತವೆ.

ಪ್ರಾಚೀನ ಸಂಸ್ಕೃತಿಗಳ ಉಗಮ ನದಿ ದಂಡೆಯ ಮೇಲೆ ಆಗಿರುವುದನ್ನು ಗಮನಿಸಿದಾಗ, ಭೌಗೋಳಿಕ ಹಿನ್ನೆಲೆ ಪ್ರಾಮುಖ್ಯತೆ ಪಡೆದಿರುತ್ತದೆ ಎಂದು ತಿಳಿದುಬರುವುದು. ಗ್ರೀಕ್ ದೇಶವು ಯುರೋಪಿನ ದಕ್ಷಿಣ ಭಾಗದಲ್ಲಿರುವ ಪರ್ಯಾಯ ದ್ವೀಪ. ಇಲ್ಲಿ ಬೆಟ್ಟಗುಡ್ಡಗಳಿವೆ. ಉತ್ತರದಿಂದ ದಕ್ಷಿಣಕ್ಕೆ ಪರ್ವತ ಸಾಲಿದೆ. ಇದರಿಂದಾಗಿ ಸ್ವತಂತ್ರನಗರ ಬೆಳೆಯಲು ಕಾರಣವಾಯಿತು. ಇಲ್ಲಿ ವ್ಯವಸಾಯಕ್ಕೆ ಅಷ್ಟು ಅನುಕೂಲಕರವಾದ ವಾತಾವರಣ ಇಲ್ಲದೇ ಇದ್ದುದರಿಂದ ಆಹಾರಕ್ಕಾಗಿ ಪರಕೀಯರನ್ನು ಆಶ್ರಯಿಸಬೇಕಾಯಿತು. ಇದರಿಂದಾಗಿ ವ್ಯಾಪಾರ, ವಾಣಿಜ್ಯ, ಪ್ರಗತಿ, ವಸಾಹತುಗಳ ನಿರ್ಮಾಣಕ್ಕೆ, ವ್ಯಕ್ತಿ ಸ್ವಾತಂತ್ರ್ಯ ಪ್ರಿಯತೆಗೆ, ನಗರ ರಾಷ್ಟ್ರಗಳ ಬೆಳವಣಿಗೆಗೆ, ಪರ್ವತ ಪಾಶ್ಚಾತ್ಯ ದೇಶಗಳ ಸಂಸ್ಕೃತಿಯ ವಿನಿಮಯಕ್ಕೆ ಅಲ್ಲಿನ ಭೌಗೋಳಿಕ ಲಕ್ಷಣಗಳು ಕಾರಣವಾಗಿವೆ. ಅದೇ ರೀತಿಯಾಗಿ ಭಾರತದಲ್ಲಿ ಸಿಂಧೂನದಿಯ ಸಂಸ್ಕೃತಿಯನ್ನು ಗಮನಿಸಬಹುದು. ಗಂಗಾ, ಯಮುನಾ,

ಕಾವೇರಿ, ಕೃಷ್ಣಾ, ತುಂಗಭದ್ರಾ ಮೊದಲಾದ ನದಿಬಯಲುಗಳಲ್ಲಿ ಅನೇಕ ಪ್ರಸಿದ್ಧ ರಾಜಮನೆತನಗಳು ಆಳ್ವಿಕೆ ನಡೆಸಿರುತ್ತವೆ. ಈ ಬಗ್ಗೆ ಅಲ್ಲಿನ ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂಸ್ಕೃತಿಯು ಉಚ್ಛ್ರಾಯ ಸ್ಥಿತಿಯಲ್ಲಿದ್ದುದು ಭೌಗೋಳಿಕ ಅಂಶಗಳಿಂದ ತಿಳಿದುಬರುತ್ತದೆ.

ಗುಡೇಕೋಟೆ ಪ್ರದೇಶದ ಚರಿತ್ರೆ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ತೊಡಗುವ ಮೊದಲು ಆ ಪ್ರದೇಶದ ಭೌಗೋಳಿಕ ವಿವರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಒಂದು ಪ್ರದೇಶದ ಸಂಸ್ಕೃತಿಯ ಉಗಮ ಮತ್ತು ವಿಕಾಸವು ಅಲ್ಲಿನ ಭೂ ಪ್ರದೇಶದ ನದಿ, ಬೆಟ್ಟ, ಗ್ರಾಮ, ಕಾಡು, ಮತ್ತು ಅರಣ್ಯಗಳಿಂದ ಪ್ರಭಾವಿತವಾಗಿರುತ್ತದೆ. ಆ ಮೂಲಕ ಭಾಷೆಯು ಸಾಮಾಜಿಕ, ಶೈಕ್ಷಣಿಕ ಅಂಶಗಳನ್ನು ಅವಲಂಬಿಸಿಕೊಂಡಿರುತ್ತದೆ. ಈ ದೃಷ್ಟಿಕೋನದಿಂದ ಭೌಗೋಳಿಕ ಅಂಶಗಳ ಮೂಲಕ ಅಧ್ಯಯನದ ಸ್ವರೂಪವನ್ನು ರೂಪಿಸಿಕೊಳ್ಳಬೇಕಾಗುತ್ತದೆ.

ಗುಡೇಕೋಟೆ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿರುವ ಒಂದು ಹೋಬಳಿ ಕೇಂದ್ರ. ಇಂದು ಗುಡೇಕೋಟೆ ಹೋಬಳಿಗೆ ೭೫ ಗ್ರಾಮಗಳು ಸೇರಿದ್ದು,[೧] ಈ ಸ್ಥಳ ಕೂಡ್ಲಿಗಿಯಿಂದ ೨೮ ಕಿ.ಮೀ. ದೂರದಲ್ಲಿದೆ. ಜಿಲ್ಲಾ ಕೇಂದ್ರ ಸ್ಥಳವಾದ ಬಳ್ಳಾರಿಯಿಂದ ೬೫ ಕಿ.ಮೀ ದೂರದಲ್ಲಿದೆ. ಜನಗಣತಿ ಪ್ರಕಾರ ಗುಡೇಕೋಟೆಯಲ್ಲಿ ಐದು ಸಾವಿರ ಜನಸಂಖ್ಯೆಯಿದೆ.[೨]

ಗುಡೇಕೋಟೆ ಗ್ರಾಮದ ಪೂರ್ವಕ್ಕೆ ಮೊಳಕಾಲ್ಮೂರು ತಾಲೂಕು ಗಡಿಪ್ರದೇಶವಿದೆ(ಚಿತ್ರದುರ್ಗ ಜಿಲ್ಲೆ). ಪಶ್ಚಿಮಕ್ಕೆ ತಾಲೂಕು ಕೇಂದ್ರ ಸ್ಥಳವಾದ ಕೂಡ್ಲಿಗಿ ಇದೆ. ದಕ್ಷಿಣಕ್ಕೆ ಕಾನಹೊಸಹಳ್ಳಿ ಹೋಬಳಿ ಪ್ರದೇಶವಿದೆ. ಉತ್ತರಕ್ಕೆ ಸಂಡೂರು ತಾಲೂಕಿನ ಗಡಿ ಪ್ರದೇಶವಿದೆ. ಗುಡೇಕೋಟೆ ಗ್ರಾಮವು ಸುತ್ತಲೂ ಬೆಟ್ಟಗುಡ್ಡಗಳಿಂದ, ಕುರುಚಲ ಕಾಡುಗಳಿಂದ ಸುತ್ತುವರಿದಿದೆ. ಇದು ನಾಲ್ಕು ಗುಡ್ಡಗಳ ಮಧ್ಯದಲ್ಲಿದ್ದು ಆ ಗುಡ್ಡಗಳ ಹೆಸರುಗಳು ಈ ರೀತಿಯಿವೆ.

೧. ದೊರೆಗಳ ಗುಡ್ಡ, ೨. ಸೋಮೇಶ್ವರಗುಡ್ಡ(ಅಗಸರ ಗುಡ್ಡ), ೩. ಹರಿಜನಕೇರಿ ಗುಡ್ಡ, ೪. ಕರಡಿಗುಡ್ಡ

೧. ದೊರೆಗಳ ಗುಡ್ಡ : ದೊರೆಗಳ ಗುಡ್ಡ ಈ ಗ್ರಾಮದ ಉತ್ತರಕ್ಕಿದ್ದು, ಕೂಡ್ಲಿಗಿ ರಸ್ತೆಯ ಪಕ್ಕದಲ್ಲಿದೆ. ಈ ಗುಡ್ಡದ ಮೇಲೆ ಪಾಳೆಯಗಾರರ ಆಡಳಿತ ಅವಧಿಯಲ್ಲಿ ಕಟ್ಟಿಸಿದ ಕೋಟೆಯಿದೆ. ಈ ಕೋಟೆಯೊಳಗೆ ಪ್ರಾಗೈತಿಹಾಸಕ್ಕೆ ಸಂಬಂಧಿಸಿದ ಗವಿ ವರ್ಣಚಿತ್ರಗಳಿವೆ. ಸೈನಿಕರ ನಿವೇಶನ, ಪಾಳೆಯಗಾರರ ಮನೆತನಕ್ಕೆ ಸೇರಿದ ಮನೆಗಳಿವೆ. ಆಂಜನೇಯ ದೇವಸ್ಥಾನ, ಮಲ್ಲಯಮ್ಮ ದೇವಸ್ಥಾನ, ತಂಪುಬಾವಿಗಳು, ರಾಗಿ ಕಣಜ, ತುಪ್ಪದ ಕಣಜ, ಹಾಳುಬಿದ್ದಿರುವ ಬುರುಜುಗಳಿವೆ.

೧೯ನೇ ಶತಮಾನದಲ್ಲಿ ಆಂಗ್ಲ ಸಂಶೋಧಕ ಬ್ರೂಸ್‌ಫೂಟ್ ಈ ಕೋಟೆಯನ್ನು ವೀಕ್ಷಿಸಿ ಈ ರೀತಿ ಉದ್ಗರಿಸಿದ್ದಾನೆ. ಈ ಕೋಟೆಯನ್ನು ಕಟ್ಟಲು ಉಪಯೋಗಿಸಿದಂತಹ ಕಲ್ಲುಗಳನ್ನು ದಕ್ಷಿಣ ಭಾರತದಲ್ಲಿ ಯಾರೂ ಉಪಯೋಗಿಸಿಲ್ಲ.[೩] ಈ ಕೋಟೆಯೊಳಗೆ ಒಳಗೆ ಹೊರಗೆ ಹೋಗಲು ಅನೇಕ ಗುಪ್ತ ಮಾರ್ಗಗಳಿವೆ. ಈ ಗುಡ್ಡದ ಎದುರಗಡೆ ಶಿಥಿಲ ವ್ಯವಸ್ಥೆಯಲ್ಲಿರುವ ನಾಗದೇವತೆಗಳ ಮೂರ್ತಿಗಳನ್ನು ಕಾಣಬಹುದು. ಈ ದೊರೆಗಳ ಗುಡ್ಡದ ಪಕ್ಕವೇ ಬೊಮ್ಮಲಿಂಗನ ಕೆರೆಯಿದೆ. ಈ ದೊರೆಗಳ ಗುಡ್ಡದ ಇನ್ನೊಂದು ವಿಶೇಷತೆ ಎಂದರೆ ಪಾಳೆಯಗಾರರ ಆಡಳಿತ ಅವಧಿಯಲ್ಲಿ ಈ ಗುಡ್ಡದ ಮೇಲಿಂದ ಚಪ್ಪಾಳೆ ತಟ್ಟಿದರೆ ಚಿತ್ರದುರ್ಗದ ಕೋಟೆಗೆ ಕೇಳಿಸುತ್ತಿದ್ದಿತಂತೆ ಎಂಬ ಐತಿಹ್ಯವಿದೆ. ಇದೇ ರೀತಿಯಾಗಿ ನಾವು ಜರ್ಮಲಿ ಮತ್ತು ಹರಪನಹಳ್ಳಿ ಪಾಳೇಯಗಾರರ ಆಡಳಿತದ ಅವಧಿಯಲ್ಲಿದ್ದ ಐತಿಹ್ಯಗಳು ಇಂದಿಗೂ ಪ್ರಚಲಿತದಲ್ಲಿದ್ದು, ಪ್ರಸ್ತುತವಾಗಿರುತ್ತವೆ.

೨. ಸೋಮೇಶ್ವರ ಗುಡ್ಡ ಅಥವಾ ಅಗಸರ ಗುಡ್ಡ : ಸೋಮೇಶ್ವರ ಗುಡ್ಡ ಗ್ರಾಮದ ಪಕ್ಕದಲ್ಲಿದ್ದು, ದೊರೆಗಳ ಗುಡ್ಡದ ಎಡಗಡೆ ಇದೆ. ಈ ಗುಡ್ಡವು ಕೂಡ್ಲಿಗಿ-ರಾಯದುರ್ಗ ರಸ್ತೆಯ ಪಕ್ಕದಲ್ಲಿದೆ. ಈ ಗುಡ್ಡದ ಒಂದು ಕಡೆ ಸರ್ವೋದಯ ಗ್ರಾಮ ಶಾಲೆಯಿದೆ. ಈ ಗುಡ್ಡದ ಮೇಲಗಡೆ ದೊಡ್ಡ ಬಾವಿಯಿದೆ. ಬಾವಿಯಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ. ಬೇಸಿಗೆಯಲ್ಲಿ ಬತ್ತಿರುತ್ತದೆ. ಇಲ್ಲಿ ಅನೇಕ ಬುರುಜುಗಳಿವೆ. ಗುಡ್ಡದ ಬಂಡೆಯ ಮೇಲೆ ಒಂದು ಚಿತ್ರವಿದ್ದು, ಒಬ್ಬ ವ್ಯಕ್ತಿ ಕುದುರೆಯ ಮೇಲೆ ಕುಳಿತಿದ್ದಾನೆ. ಕುದುರೆಯ ಹಿಂಭಾಗದಲ್ಲಿ ಒಬ್ಬ ವ್ಯಕ್ತಿ ಚಾಮರವನ್ನು ಎತ್ತಿ ಹಿಡಿದಿದ್ದಾನೆ. ಇನ್ನೊಬ್ಬ ವ್ಯಕ್ತಿ ಕುದುರೆಯ ಜೀನನ್ನು ಹಿಡಿದಿದ್ದಾನೆ. ಕುದುರೆಯ ಮೇಲೆ ಇರುವ ವ್ಯಕ್ತಿ ಒಬ್ಬ ದೊರೆಯಾಗಿರಬೇಕು. ಈತನ ಹೆಸರು ಸೋಮೇಶ್ವರ ಆಗಿರಬಹುದೆಂದು ಈ ಗುಡ್ಡದ ಹೆಸರಿಂದ ತಿಳಿಯಬಹುದು.

ಈ ಗುಡ್ಡದ ಕೆಳಗಡೆ ಮಡಿವಾಳ ಜನಾಂಗಕ್ಕೆ ಸೇರಿದ ಜನರು ವಾಸಿಸುತ್ತಿದ್ದಾರೆ. ಅದಕ್ಕಾಗಿ ಈ ಗುಡ್ಡಕ್ಕೆ ಪ್ರಚಲಿತವಿರುವ ಹೆಸರು 'ಅಗಸರ ಗುಡ್ಡ' ಎಂದು. ಇದರ ಪಕ್ಕಕ್ಕೆ ಅಗಸರ ಕೆರೆ ಇದ್ದು, ಸೀತಾಫಲಗಿಡಗಳು ಸಾಕಷ್ಟಿವೆ. ಇಲ್ಲಿನ ನಿವಾಸಿಗಳು ಈ ಗುಡ್ಡದಲ್ಲಿ ಕರಡಿ, ಚಿರತೆಗಳಿದ್ದವೆಂದು ಹೇಳುತ್ತಾರೆ.

೩. ಹರಿಜನಕೇರಿ ಗುಡ್ಡ (ಕಂಚಿಮಲ್ಲನ ಗುಡ್ಡ) : ಹರಿಜನಕೇರಿ ಗುಡ್ಡ ಎಂಬುವುದು ಈ ಗ್ರಾಮದ ಪಕ್ಕದಲ್ಲಿದ್ದು, ದಕ್ಷಿಣಕ್ಕೆ ಕೂಡ್ಲಿಗಿ-ರಾಯದುರ್ಗ ರಸ್ತೆಯಲ್ಲಿದೆ. ಇದಕ್ಕೆ ಪೂರ್ವದ ಹೆಸರು ಕಂಚಿಮಲ್ಲನಗುಡ್ಡ. ಈ ಗುಡ್ಡದ ಹತ್ತಿರ ಹಿಂದುಳಿದ ವರ್ಗಕ್ಕೆ ಸೇರಿದ ಹರಿಜನರು ವಾಸ ಮಾಡುತ್ತಿದ್ದಾರೆ. ಈ ಕಾರಣದಿಂದ ಈ ಪ್ರಚಲಿತವಿರುವ ಹೆಸರು 'ಹರಿಜನಕೇರಿ ಗುಡ್ಡ' ಎಂಬುದು.

ಈ ಗುಡ್ಡದ ಹಿಂದೆ ಕಾಲ್ಪನಿಕ ಆಂಜನೇಯ ಗುಡಿ ಇದೆ. ಇದರ ಹತ್ತಿರ ಗುಡೇಕೋಟೆ ಗ್ರಾಮದ ಪ್ರಾಚೀನ ವಸತಿಯ ಅವಶೇಷಗಳಿವೆ. ಇಲ್ಲಿ ಹಾಳು ಬಿದ್ದ ಚಿಕ್ಕ ಗಾತ್ರದ ಕೋಟೆಯನ್ನು ನೋಡಬಹುದು. ಕಾಲ್ಪನಿಕ ಆಂಜನೇಯ ಗುಡಿಯ ಪೂರ್ವಕ್ಕೆ ಮೌರ್ಯರ (ಮೊರರು) ಮನೆ ಎಂದು ಕರೆಯಲ್ಪಡುವ ಹಾಳುಬಿದ್ದಿರುವ ಅವಶೇಷಗಳಿವೆ. ಇಲ್ಲಿನ ಜನಾಭಿಪ್ರಾಯದಂತೆ ಇಲ್ಲಿ ಕುಬ್ಜ ಜನರು ವಾಸಿಸುತ್ತಿದ್ದರು ಎಂದು ಹೇಳುತ್ತಾರೆ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಮತ್ತು ಇಲ್ಲಿನ ಸುತ್ತಮುತ್ತಲಿನ ಪ್ರದೇಶಗಳಾದ ಬ್ರಹ್ಮಗಿರಿ, ಅಶೋಕ ಸಿದ್ದಾಪುರ ಚಿತ್ರದುರ್ಗ ಜಿಲ್ಲೆಗಳಲ್ಲಿ ಮೊರರ ಮನೆಗಳನ್ನು ಮೌರ್ಯರ ಮನೆಗಳೆಂದು ಗುರುತಿಸಿದ್ದಾರೆ.[೪]

೪. ಕರಡಿಗುಡ್ಡ : ಕರಡಿಗುಡ್ಡವು ಗುಡೇಕೋಟೆ ಗ್ರಾಮದ ಪೂರ್ವಕ್ಕೆ ರಾಯದುರ್ಗ ರಸ್ತೆಯಲ್ಲಿದೆ. ಇಲ್ಲಿ ಕರಡಿಗಳು ಹೆಚ್ಚಾಗಿ ವಾಸಮಾಡುವುದರಿಂದ ಈ ಗುಡ್ಡಕ್ಕೆ ಕರಡಿಗುಡ್ಡ ಎಂದು ಕರೆಯುತ್ತಾರೆ. ಗುಡೇಕೋಟೆ ಒಟ್ಟು ಗ್ರಾಮವು ಈ ನಾಲ್ಕು ಗುಡ್ಡಗಳ ಮಧ್ಯದಲ್ಲಿದೆ. ಈ ನಾಲ್ಕು ಗುಡ್ಡಗಳಿಗೆ ಹೊಂದಿಕೊಂಡಂತೆ ನಾಲ್ಕು ಕೇರಿಗಳಿವೆ. ಅವುಗಳ ಹೆಸರುಗಳು ಕೆಳಗಿನಂತಿದೆ.

೧. ಹರಿಜನ ಕೇರಿ, ೨. ಮುಸ್ಲಿಂ ಕೇರಿ, ೩. ನಾಯಕರ ಕೇರಿ ೪. ಅಗಸರ ಕೇರಿ

೧. ಹರಿಜನ ಕೇರಿ : ಈ ಕೇರಿಯಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಮಾದಿಗರು ಮತ್ತು ಚಲವಾದಿ ಜನಾಂಗಕ್ಕೆ ಸೇರಿದ ಜನರು ವಾಸಿಸುತ್ತಿದ್ದಾರೆ.

೨. ಮುಸ್ಲಿಂಕೇರಿ : ಮುಸ್ಲಿಂ ಜನಾಂಗಕ್ಕೆ ಸೇರಿದ ಜನರು ಮತ್ತು ಇತರೆ ಜನಾಂಗಕ್ಕೆ ಸೇರಿದ ಜನರು ಇಲ್ಲಿ ವಾಸ ಮಾಡುತ್ತಿದ್ದಾರೆ. ಈ ಕೇರಿಯು ಹರಿಜನಕೇರಿಯ ಪಕ್ಕದಲ್ಲಿದೆ. ಈ ಕೇರಿಯಲ್ಲಿ ಮಸೀದಿ ಇದೆ.

೩. ನಾಯಕರ ಕೇರಿ : ಗುಡೇಕೋಟೆ ಗ್ರಾಮದಲ್ಲಿ ನಾಯಕ ಬೇಡ ಜನಾಂಗಕ್ಕೆ ಸೇರಿದ ಜನರು ಬಹುಸಂಖ್ಯೆಯಲ್ಲಿದ್ದಾರೆ. ಇವರಲ್ಲಿ ೧. ಊರುಬೇಡರು, ೨. ಮ್ಯಾಸ ಬೇಡರು ಎಂಬ ಎರಡು ಪಂಗಡಗಳಿವೆ. ಈ ಕೇರಿಯಲ್ಲಿ ರಾಮಲಿಂಗೇಶ್ವರ, ಬನ್ನಿ ಮಹಾಕಾಳಮ್ಮ ದೇವಸ್ಥಾನಗಳಲ್ಲದೆ ಪಾಳೆಯಗಾರರ ಮನೆಯಿದೆ.

೪. ಅಗಸರ ಕೇರಿ : ಈ ಕೇರಿಯು ನಾಯಕ ಕೇರಿಯ ಪಕ್ಕದಲ್ಲಿದೆ. ಈ ಕೇರಿಯಲ್ಲಿ ಹೆಚ್ಚಾಗಿ ಮಡಿವಾಳ ಜನಾಂಗಕ್ಕೆ ಸೇರಿದ ಜನರು ವಾಸ ಮಾಡುತ್ತಿರುವುದರಿಂದ ಅಗಸರಕೇರಿ ಎಂದು ಕರೆಯುತ್ತಾರೆ.

ಗುಡೇಕೋಟೆ ಗ್ರಾಮದಲ್ಲಿ ಮೇಲೆ ತಿಳಿಸಿದ ಜನಾಂಗಕ್ಕೆ ಸೇರಿದ ಜನರ ಜೊತೆಗೆ ಇತರೆ ಜನಾಂಗಕ್ಕೆ ಸೇರಿದ, ಲಿಂಗಾಯತರು, ಜಂಗಮರು, ಬ್ರಾಹ್ಮಣರು, ಶೆಟ್ಟರು, ಈಡಿಗರು, ವಿಶ್ವಕರ್ಮ, ಕುರುಬರು

[illegible]

ಮೊದಲಾದವರು ವಾಸಮಾಡುತ್ತಿದ್ದಾರೆ. ಆದರೆ ಇಲ್ಲಿ ಬಹುಸಂಖ್ಯಾತರು ಬೇಡ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಗ್ರಾಮದ ಮೇಲ್ಮೈ ಲಕ್ಷಣಗಳು : ದಖ್ಖನ್ ಪ್ರಸ್ಥಭೂಮಿಯ ದಕ್ಷಿಣಕ್ಕಿರುವ ಕರ್ನಾಟಕದ ಮಧ್ಯಭಾಗದ ಬಯಲು ಸೀಮೆಯಲ್ಲಿ ನೆಲೆಗೊಂಡಿರುವ ಈ ಗುಡೇಕೋಟೆ ಸುತ್ತಮುತ್ತ ಕಲ್ಲುಗುಡ್ಡಗಳಿವೆ. ಈ ಗ್ರಾಮದ ಸುತ್ತಮುತ್ತ ಅಷ್ಟೇನೂ ದಟ್ಟವಲ್ಲದ ಅರಣ್ಯ ಪ್ರದೇಶವೂ ಇದೆ. ಮಳೆಯ ಪ್ರಮಾಣವು ಕಡಿಮೆ ಇರುವುದರಿಂದ ನೀರಿನ ಸೌಲಭ್ಯಕ್ಕಾಗಿ ಈ ಗ್ರಾಮದಲ್ಲಿ ಪಾಳೆಯಗಾರರ ಆಡಳಿತಾವಧಿಯ ಕಾಲದಲ್ಲಿ ಬೊಮ್ಮಲಿಂಗನ ಕೆರೆಯನ್ನು ಕಟ್ಟಿಸಿದ್ದಾರೆ.

ಮಣ್ಣಿನ ಸ್ವರೂಪದ ಬಗ್ಗೆ ಹೇಳುವುದಾದರೆ ಸ್ವಲ್ಪ ಎರೆ ಮಣ್ಣು ಕಂಡುಬರುತ್ತದೆ. ಉಳಿದೆಲ್ಲ ಕಡೆಗೆ ಕಲ್ಲಮರಳು ಮಿಶ್ರಿತ ಕೆಂಪು ಮಣ್ಣು ಅಥವಾ ಮಸಾರಿಯೇ ಹೆಚ್ಚು. ಮಳೆಯ ಮೇಲೆ ರೈತರು ಹೆಚ್ಚಾಗಿ ಅವಲಂಬಿಸಿದ್ದಾರೆ. ಹಿಂದೆ ಕೆರೆ ಮಾಗಾಣಿಗಳು ಹೆಚ್ಚಿನ ಮಳೆಯಿಂದ ಚೆನ್ನಾಗಿ ಸಾಗುವಳಿ ಆಗುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಮಳೆ ಕಡಿಮೆಯಾಗಿ ಭೂಮ್ಯಾಂತರ ನೀರಿನ ಮಟ್ಟ ಇಳಿದು ಹೋಗಿದೆ. ತೋಡಿದ ಬಾವಿಗಳಲ್ಲಿ ನೀರೆ ಇಲ್ಲ. ಕೊಳವೆ ಬಾವಿಗಳಿಂದ ಮಾತ್ರ ನೀರು ಪಡೆದು ನೀರಾವರಿ ಮಾಡಿಕೊಂಡಿರುವುದು ಕಂಡುಬರುತ್ತದೆ. ಮಳೆ ಚೆನ್ನಾಗಿ ಆಗಿ, ಕೆರೆ ತುಂಬಿದರೆ ಇಲ್ಲಿನ ರೈತರು ಭತ್ತವನ್ನು ಬೆಳೆಯುತ್ತಾರೆ. ಜೋಳ, ಸಜ್ಜೆ, ರಾಗಿ, ಶೇಂಗಾ, ಸೂರ್ಯಕಾಂತಿ, ದ್ವಿದಳ ಧಾನ್ಯಗಳು ಒಣ ಭೂಮಿಯ ಮುಖ್ಯ ಬೆಳೆಗಳಾಗಿವೆ. ಭತ್ತ, ಹತ್ತಿ ಮಂತಾದವು ನೀರಾವರಿ ಸೌಕರ್ಯ ಇರುವಲ್ಲಿ ಮುಖ್ಯವಾಗಿ ಕಂಡುಬರುತ್ತವೆ. ತೋಟಗಾರಿಕೆಯ ಬೆಳೆಗಳಿಗೆ ಯೋಗ್ಯ ಮಣ್ಣಿನ ಅನುಕೂಲವಿದೆ.

ಈ ಗ್ರಾಮದ ಸುತ್ತಮುತ್ತ ಯಾವುದೇ ಖನಿಜ ಸಂಪತ್ತು ಕಂಡುಬರುವುದಿಲ್ಲ. ಆದರೆ ಇಲ್ಲಿ ಯಥೇಚ್ಛವಾಗಿ ಕಂಡುಬರುವ ಕಲ್ಲು ಬಂಡೆಗಳನ್ನು ಒಡೆದು ಕಟ್ಟಡಕಟ್ಟಲು, ತಂತಿ ಬೇಲಿ ಹಾಕಲು ಉಪಯೋಗಿಸುತ್ತಾರೆ. ಅದಲ್ಲದೆ ಇಲ್ಲಿಯ ಜನರಿಗೆ ವ್ಯವಸಾಯವೇ ಪ್ರಧಾನ ವೃತ್ತಿಯಾಗಿದೆ. ಗೃಹಕೈಗಾರಿಕೆಗಳಲ್ಲಿ ಖಾದಿಬಟ್ಟೆ ತಯಾರಿಕೆ, ಈಚಲ ಪುಟ್ಟಿ ಸಿದ್ಧಪಡಿಸುವುದು ಮುಖ್ಯ ಕಸುಬುಗಳಾಗಿವೆ. ಈ ಗ್ರಾಮದಲ್ಲಿ ಜಾತಿವಾರು ದೃಷ್ಟಿಯಿಂದ ನೋಡಿದರೆ ಬೇಡ ಜನಾಂಗಕ್ಕೆ ಸೇರಿದ ನಾಯಕರು ಹೆಚ್ಚಾಗಿದ್ದಾರೆ. ಇವರಲ್ಲದೆ ಜಂಗಮ, ಲಿಂಗಾಯತ, ಬ್ರಾಹ್ಮಣ, ಮುಸ್ಲಿಂ, ಹರಿಜನ, ಈಡಿಗ, ಮಡಿವಾಳರು ಇನ್ನು ಮೊದಲಾದ ಜಾತಿಗೆ ಸೇರಿದ ಜನರು ಇದ್ದಾರೆ. ಹೀಗೆ ಸಾಮಾಜಿಕ ರಚನೆ ಸಂಕೀರ್ಣವಾಗಿಯೂ ವೈವಿಧ್ಯಮಯವಾಗಿಯೂ ಇದೆ. ಗೌಡಿಕೆ ಸ್ಥಾನದಲ್ಲಿ ಲಿಂಗಾಯತರಿದ್ದಾರೆ.

ಜಾನಪದ ಕಲೆಗಳು ಪ್ರಾಚೀನ ಕಾಲದಿಂದಲೂ ಈ ಗ್ರಾಮದಲ್ಲಿ ಬೆಳೆದು ಬಂದಿವೆ. ಹಿಂದುಳಿದ ವರ್ಗಗಳೇ ಅಧಿಕವಾಗಿರುವ ಈ ಗ್ರಾಮದಲ್ಲಿ ಜಾನಪದ ಸಂಸ್ಕೃತಿಯೊಡನೆ ಶಿಷ್ಟ ಸಂಸ್ಕೃತಿ ಎದ್ದು ಕಾಣುತ್ತದೆ. ಈ ಗ್ರಾಮದ ಜನರು ಎಲ್ಲಾ ದೃಷ್ಟಿಯಿಂದ ಹಿಂದುಳಿದವರಾದರೂ ಅವರ ಬದುಕಿನ ರೀತಿನೀತಿಗಳು, ಆದರ್ಶ ಮೌಲ್ಯಗಳು ಯಾರಿಗೂ ಕಡಿಮೆಯಿಲ್ಲದಂತೆ ಬೆಳೆದು ಬಂದಿವೆ. ಸಾಮಾನ್ಯ ಲಕ್ಷಣಗಳಾದ ದಾರಿದ್ರ್ಯ ಮತ್ತು ಮೌಢ್ಯತೆಗಳು ಈ ಗ್ರಾಮದಲ್ಲಿಯೂ ಇವೆ.

ಜಾಗತೀಕರಣ ಪ್ರಭಾವಗಳು ಎಲ್ಲಾ ಕಡೆಯಂತೆ ಈ ಗ್ರಾಮದಲ್ಲಿ ಕೂಡ ಆಗಿವೆ. ಈ ಗ್ರಾಮದಲ್ಲಿ ಪ್ರತಿಭಾನ್ವಿತ ವ್ಯಕ್ತಿಗಳುಂಟು. ರಾಜ್ಯ ಮತ್ತು ದೇಶೀಯ ಮಟ್ಟದಲ್ಲಿ ಬೆಳೆದಿದ್ದಾರೆ. ಹಿಂದುಳಿದ ವರ್ಗಗಳಲ್ಲಿ ಬಹಳಷ್ಟು ಸುಧಾರಣೆಗಳಾಗಿವೆ. ಜೊತೆಯಲ್ಲಿಯೇ ಹಿಂದಿನ ಜಾನಪದೀಯ ಸತ್ವಗಳು ಗ್ರಾಮೀಣ ವ್ಯವಸ್ಥೆಯ ಮೌಲ್ಯಗಳು ಕಣ್ಮರೆಯಾಗುತ್ತಿವೆ. ಶಿಷ್ಟಸಂಸ್ಕೃತಿಯ ಪ್ರಭಾವವು ಉಳಿದ ಸಂಸ್ಕೃತಿಗಳ ಮೇಲೆ ಪರಿಣಾಮಕಾರಿಯಾಗುತ್ತಿದೆ. ಭೂಮಿಗಳನ್ನು ಹೊಂದಿದ ಹಲವಾರು ಬೇಸಾಯಗಾರರಾಗಿದ್ದಾರೆ. ಇಲ್ಲಿನ ಜನರು ಸರ್ಕಾರಿ ಸೌಲಭ್ಯಗಳನ್ನು ಪಡೆದಿದ್ದಾರೆ.

ಈ ಗ್ರಾಮದ ಜನರ ಸಂಸ್ಕೃತಿಯು ಬಹಳ ಪ್ರಾಚೀನ ಕಾಲದಿಂದ ಬೆಳೆದು ಬಂದಿರುವುದಾಗಿದೆ. ಬುಡಕಟ್ಟು ಜನಾಂಗದವರ ಪಳೆಯುಳಿಕೆಗಳಾದ ಕೋಡಿದುರ್ಗಮ್ಮ, ಮಲಿಯಮ್ಮ ಮುಂತಾದ ಗ್ರಾಮದೇವತೆಗಳ ಆರಾಧನೆ ಈ ಗ್ರಾಮದಲ್ಲಿ ಕಂಡುಬರುತ್ತದೆ. ಹಿಂದುಳಿದವರ ಧರ್ಮಾಚರಣೆ ಇಂಥಾ ಗ್ರಾಮದೇವತೆಗಳ ಸುತ್ತ ಬೆಳೆದುಬಂದಿದೆ. ಈ ಸಂಸ್ಕೃತಿಯೊಡನೆ ಚರಿತ್ರೆಯ ಕಾಲದ ಪ್ರಭಾವಗಳಲ್ಲಿ ಶಿವನ ಆರಾಧನೆ ಪ್ರಧಾನವಾಗಿ ಉಳಿದು ಬಂದಿದೆ. ವೈಷ್ಣವ ಮತದ ಪ್ರಭಾವ ಸ್ವಲ್ಪ ಕಡಿಮೆ ಇದೆ. ವೈಷ್ಣವ ಅಂಶವೆನ್ನಬಹುದಾದ ಆಂಜನೇಯ ಗುಡಿಗಳು ಈ ಗ್ರಾಮದ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿವೆ. ಆಂಜನೇಯ ಸ್ವಾಮಿಯು ಈ ಗ್ರಾಮವನ್ನು ಕಾಯುತ್ತಿರುತ್ತಾನೆ ಎಂದು ಜನರ ನಂಬಿಕೆಯಿದೆ.

ಈ ಗ್ರಾಮದ ಪಾಳೆಯಗಾರ ಮನೆತನವು ಕಳೆದ ಕೆಲವು ಶತಮಾನಗಳಿಂದ ಕೋಟೆಗಳನ್ನು ಕಟ್ಟಿಕೊಂಡು ವೈಭವಪೂರ್ಣವಾಗಿ ಆಳಿ ನಾಡಿನ ರಾಜಕೀಯ ಚರಿತ್ರೆಯೊಡನೆ ಬೆರತುಕೊಂಡು ತನ್ನ ಪಾತ್ರ ನಿರ್ವಹಿಸಿದೆ. ಈ ಗುಡೇಕೋಟೆ ಗ್ರಾಮದಲ್ಲಿ ಇಂದು ವೈಭವದ ಕುರುಹಿನ ಆಳಿ ಉಳಿದ ಅವಶೇಷಗಳು ಸಾಕಷ್ಟು ಇವೆ. ಇಂದಿಗೂ ಅವು ರಕ್ಷಣೆಯಿಲ್ಲದೆ ಅನಾಥವಾಗಿವೆ.

೨.೨. ದಂತಕಥೆ, ಗುಡೇಕೋಟೆ ಅರ್ಥ, ಸ್ಥಳನಾಮಗಳ ಉಲ್ಲೇಖ, ಇತ್ಯಾದಿ

ಮೌರ್ಯ, ಶಾತವಾಹನ ಕಾಲದಿಂದ ಚಾಲುಕ್ಯರ ಕಾಲದವರೆಗಿನ ಅವಧಿಯ ಯಾವುದೇ ಚಾರಿತ್ರಿಕ ವಿವರ ಸಿಗುವುದು ವಿರಳ. ಜಾನಪದ ಗೀತೆಗಳಾಗಲಿ, ಕಥೆಗಳಾಗಲಿ ಉಳಿದು ಬಂದಿಲ್ಲ. ಆದರೆ ಕೆಲವು ಐತಿಹಾಸಿಕ ಸತ್ಯಗಳನ್ನು ಒಳಗೊಂಡ ಸಾಮಾನ್ಯ ಸ್ಥಳೀಯ ಕಥೆಗಳು ಪರಂಪರಾಗತವಾಗಿ ಬಂದಿವೆ. ಅದರಂತೆ ಈ ಗ್ರಾಮದ ಬಗ್ಗೆ ಕೂಡ ದಂತಕಥೆ ಇದೆ.

ಒಂದು ತಲೆಮಾರಿನಿಂದ ಮುಂದಿನ ತಲೆಮಾರಿಗೆ ಬಾಯಿಮಾತಿನಲ್ಲಿ ಮುಂದುವರಿದು ಬರುವ ಕೆಲವು ಘಟನೆಗಳ ನಿರೂಪಣೆ ಅಥವಾ ಕಥೆಗಳೇ ಐತಿಹ್ಯಗಳು. ಅವು ಸಾಧು ಸಂತರು, ಋಷಿಗಳು ಅಥವಾ ಮಹಾಪುರಷನ್ನು ಕುರಿತ ಕಾಲ್ಪನಿಕ ಕಥೆಗಳಾ ಅಥವಾ ಪ್ರೇರಣ ಕಥೆಗಳು ಆಗಿರಬಹುದು. ಇವುಗಳ ಬಗ್ಗೆ ಮ್ಯಾಕ್ ಮುಲ್ಲರ್ ಹೇಳಿರುವಂತೆ 'ಸಂವಾದ ವಿಧಾನ'ದಿಂದ ಬೆಳೆದು ಬರುತ್ತವೆ.[೫]

ಸಾಮಾನ್ಯವಾಗಿ ಇವು ಮಹಾಪುರುಷರ ಅದ್ಭುತ ಸಾಮರ್ಥ್ಯಗಳನ್ನು ಕುರಿತವುಗಳಾಗಿದ್ದು, ಜನರಲ್ಲಿ ಅವರ ಪ್ರಸಿದ್ಧಕೀರ್ತಿಗಳನ್ನು ಹೆಚ್ಚಿಸುತ್ತವೆ. ಪುರಾಣ ಕಥೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಸತ್ಯದಕಣಗಳನ್ನು ಕಾಣಬಹುದಾದರೂ, ಇತಿಹಾಸದ ರಚನೆಯಲ್ಲಾಗಲಿ, ವ್ಯಾಖ್ಯಾನದಲ್ಲಾಗಲಿ ಅವು ಸಂಪೂರ್ಣ ವಿಶ್ವಾಸರ್ಹವಾಗಲಾರವು. ಆದಿಕಾಲದ ಭಾರತೀಯ ಇತಿಹಾಸದಲ್ಲಿ ಹಲವು ಐತಿಹ್ಯಗಳ ಮತ್ತು ಪುರಾಣ ಕಥೆಗಳ ಉಲ್ಲೇಖವಿದೆ. ಸಾಕ್ಷ್ಯಧಾರಗಳಿಲ್ಲದಿರುವ ಕಡೆಗಳಲ್ಲಿ ಇವುಗಳಿಂದ ಅಲ್ಪಸ್ವಲ್ಪ ಸಹಾಯವಾಗಬಹುದು. ಐತಿಹ್ಯಗಳ ಚಾರಿತ್ರಿಕ ಸತ್ಯ ಏನೇ ಇರಲಿ, ಜನರ ಜೀವನ ಮತ್ತು ನಡೆನುಡಿಗಳನ್ನು ರೂಪಿಸುವಲ್ಲಿ ಅವು ಪ್ರಮುಖ ಪಾತ್ರವಹಿಸಿವೆಂಬುದನ್ನು ಅಲ್ಲಗಳೆಯುವಂತಿಲ್ಲ. ವೇದೋಕ್ತವಾದ ಮತ್ತು ಮಹಾಕಾವ್ಯಗಳಲ್ಲಿ ನಿರೂಪಿತವಾದ ಐತಿಹ್ಯಗಳು ತಲೆತಲಾಂತರಗಳಿಂದ ಸತತವಾಗಿ ಜನರಲ್ಲಿ ಜೀವನ, ಶ್ರದ್ಧೆ ಮತ್ತು ಚೈತನ್ಯಗಳನ್ನು ತುಂಬುತ್ತ ಬಂದಿವೆ. ಈ ಪ್ರದೇಶದಲ್ಲಿ ಪ್ರಚಲಿತವಾಗಿರುವ ಜನಪದ ಸಾಹಿತ್ಯ ಮತ್ತು ಸ್ಥಲ ಪುರಾಣಗಳ ಅಧ್ಯಯನದಿಂದ ಜನರ ಜೀವನದಲ್ಲಿನ ಶ್ರೇಷ್ಠ ಸಾಂಸ್ಕೃತಿಕ ಅಂಶಗಳ ಹೊಂದಾಣಿಕೆಯನ್ನು ಮನಗಾಣಬಹುದು.

ಇಂದಿನ ಗುಡೇಕೋಟೆ ಗ್ರಾಮಕ್ಕೆ ಹಿಂದೇ ಬಾಣಾಸುರಪಟ್ಟಣವೆಂದು ಕರೆಯುತ್ತಿದ್ದರು. ಸ್ಥಳೀಯರ ವಾಡಿಕೆಯಂತೆ ಸುಮಾರು ವರ್ಷಗಳ ಹಿಂದೆ ಬಾಣಾಸುರ ಎಂಬ ಅರಸನು ಆಳುತ್ತಿದ್ದನಂತೆ. ಇವನು ಶಿವ ಪಾರ್ವತಿಯರ ಪರಮಭಕ್ತ. ಈತನ ಭಕ್ತಿಗೆ ಮೆಚ್ಚಿದ ದೇವ ದಂಪತಿಗಳು ಈ ಪಟ್ಟಣದ ಮಹಾದ್ವಾರವನ್ನು ಸದಾಕಾಲ ಕಾಯುತ್ತಿರುವುದಾಗಿ ಅಭಯ ನೀಡದ್ದರೆಂಬ ಪ್ರತೀತಿ ಇದೆ. ಈ ಗ್ರಾಮವು ಅರಸನ ಕಾಲದಲ್ಲಿ ಪಟ್ಟಣದಷ್ಟು ದೊಡ್ಡದಾಗಿದ್ದು, ಅರಸನ ಹೆಸರನ್ನೇ ಈ ಗ್ರಾಮವು ಹೊಂದಿತು.

ಒಂದು ಪ್ರದೇಶಕ್ಕೆ ಆ ಹೆಸರು ಬರಲು ಅಲ್ಲಿನ ಭೌಗೋಳಿಕ ಮತ್ತು ಭಾಷಿಕ ನೆಲೆಗಳು ಕಾರಣವಾಗುತ್ತವೆ. ಸುತ್ತಲೂ ಗುಡ್ಡಗಳು ಇರುವುದರಿಂದ ಗುಡ್ಡದ ಮೇಲೆ ಕೋಟೆ ಇರುವುದರಿಂದ ಸ್ಥಳೀಯರು ಗುಡೇಕೋಟೆ ಎಂದು ಕರೆಯುತ್ತಾರೆ. ಈ ಗ್ರಾಮದ ಬಗ್ಗೆ ಸ್ಥಳನಾಮದ ಬಗ್ಗೆ ಒಮ್ಮತಾಭಿಪ್ರಾಯವಿಲ್ಲ. ಗುಡ್ಡದ ಕೋಟೆ-ಗುಡ್ಡೆಕೋಟೆ-ಗುಡೇಕೋಟೆಯಾಗಿರಬೇಕೆಂಬುದು ಕೆಲವರ ಅಭಿಪ್ರಾಯ.

ಗುಡಿಯಕೋಟೆ-ಗುಡಿಗಳ ಕೋಟೆ-ಗುಡೇಕೋಟೆ ಎಂದು ಗುಡಿಗೋಪುರಗಳು ಹೆಚ್ಚಾಗಿರುವುದರಿಂದಲೂ ಗುಡ್ಡದ ಮೇಲೆ ಕೋಟೆ ನಿರ್ಮಿಸಿರುವುದರಿಂದಲೂ ಇದಕ್ಕೆ ಗುಡೇಕೋಟೆ ಎಂಬ ಹೆಸರು ಬಂದಿರಬಹುದು. ನಾಯಕ ಜನಾಂಗವೇ ಹೆಚ್ಚಾಗಿರುವ ಈ ಗ್ರಾಮದಲ್ಲಿ ಅವರ ಬೆಡಗುಗಳಲ್ಲೊಂದಾದ 'ಗುಡಿಕಟ್ಟಿನವರು' ಎಂಬುದು ಈ ಸ್ಥಳವನ್ನು ಸಂಕೇತಿಸುತ್ತದೆ.[೬] ಸಿ.ಡಿ.ಮ್ಯಾಕಲಿನ್ ಅವರು ತಮ್ಮ ಕೃತಿಯಲ್ಲಿ Goodicottah Gudikota-tal from (Gudi tal, temple+Kota, tal Fort) ಎಂದು ತಿಳಿಸಿದ್ದಾನೆ.[೭]

ಶಾಸನದಲ್ಲಿ ಗುಡೇಕೋಟೆ : ಚೋರುನೂರು, ನಾರಾಯಣದೇವರಕೆರೆ(ಹಗರಿಬೊಮ್ಮನಹಳ್ಳಿ ತಾಲೂಕು) ಶಾಸನಗಳಲ್ಲಿ ಗುಡೇಕೋಟೆ ಹೆಸರನ್ನು ಗುಡಿಯ ಕೋಟೆ ಎಂದು ಉಲ್ಲೇಖಿಸಲಾಗಿದೆ.[೮]

ಕೈಫಿಯತ್ತುಗಳಲ್ಲಿ ಗುಡೇಕೋಟೆ : ಗುಡೇಕೋಟೆ ಎಂಬ ಹೆಸರನ್ನು ಕೈಫಿಯತ್ತುಗಳಲ್ಲಿ 'ಗುಡಿಕೋಟೆ' ಎಂದು ನಮೂದಿಸಿದ್ದಾರೆ.[೯]

ಜನಪದರ ವಾಡಿಕೆಯಂತೆ, ಪೌರಾಣಿಕ ಪ್ರಸಂಗವೊಂದರಲ್ಲಿ ಬರುವ ವಿವರಣೆಗಳು ಈ ಊರನ್ನು ಬಾಣಾಸೂರಪಟ್ಟಣ, ಗಡಿಯಾಂಕ ಭೀಮನ ಪಟ್ಟಣ, ಗುಡಿಕೋಟೆ, ಗುಡಿಯ ಕೋಟೆ ಎಂದು ತಿಳಿದುಬರುತ್ತದೆ. ಆದರೆ ಕನ್ನಡ ನಿಘಂಟುಗಳಲ್ಲಿ ಬರುವ ಗುಡೇ ಎಂಬುದರ ಶಾಬ್ದಿಕ ಅರ್ಥವು, ರಾಶಿ, ಸಮೂಹ, ಗುಂಪು ಎಂಬ ಪದಗಳನ್ನು ನಿರ್ದೇಶಿಸುತ್ತಿದ್ದು, ಈಗಲೂ ಗುಡೇಕೋಟೆ ಊರಿನ ಸುತ್ತಲೂ ಅನೇಕ ಗುಡ್ಡಗಳು ರಾಶಿರಾಶಿಯಾಗಿ ಹಬ್ಬಿರುವುದನ್ನು ಕಂಡಾಗ ಅಲ್ಲಿಯ ಕೋಟೆಯನ್ನು ಸೂಚಿಸಲು ಅನ್ವರ್ಥಕವಾಗಿ ಗುಡೇ ಎಂಬ ವಿಶೇಷಣವನ್ನು ಸೇರಿಸಿಕೊಂಡಿರಬೇಕು. ಹೀಗಾಗಿ ಈ ಊರಿಗೆ ಗುಡೇಕೋಟೆ ಎಂಬ ಹೆಸರು ಪ್ರಾಪ್ತವಾಗಿರಬೇಕು.

ಈ ಪ್ರದೇಶದ ಮಹತ್ವ : ಈ ಪ್ರದೇಶವು ಪುರಾಣದಿಂದಲೂ ಪ್ರಸಿದ್ಧಿಪಡೆದಿದೆ. ಇದು ಪಂಪಾಕ್ಷೇತ್ರ, ಕಿಷ್ಕಿಂಧಾದ ಒಂದು ಭಾಗವಾಗಿದೆ. ಜಟ್ಟಿಂಗಿರಾಮೇಶ್ವರ(ಜಟಾಯು) ಸಹಾ ಈ ಪ್ರದೇಶದ ಹತ್ತಿರದಲ್ಲಿದೆ. ಹಿಂದೆ ರಾಮಾಯಣ ಕಾಲದಲ್ಲಿ ಶ್ರೀರಾಮಚಂದ್ರನು ಸೀತೆ ಹಾಗೂ ಲಕ್ಷ್ಮಣರೊಂದಿಗೆ

ಪಂಚವಟಿಗೆ ವನವಾಸಕ್ಕೆ ಬಂದಿದ್ದಾಗ ರಾವಣನು ಸೀತೆಯನ್ನು ಪುಷ್ಪಕ ವಿಮಾನದಲ್ಲಿ ಕದ್ದೊಯ್ಯುತ್ತಾನೆ. ಆಗ ಜಟಾಯವು ರಾವಣನನ್ನು ತಡೆದು ಕಾದಾಡಿ ಮಡಿದ ಸ್ಥಳವೇ ಈ ಜಟ್ಟಂಗಿ ಪರ್ವತ. ಈ ಸ್ಥಳದಲ್ಲಿ ಶ್ರೀರಾಮನು ಜಟಾಯುವಿಗೆ ಅಗ್ನಿ ಸಂಸ್ಕಾರ ಮಾಡಿ ಲಿಂಗ ಪ್ರತಿಷ್ಠೆ ಮಾಡಿದ್ದರಿಂದ ಈಶ್ವರನಿಗೆ ಮುಂದೆ ಜಟ್ಟಂಗಿರಾಮೇಶ್ವರ ಲಿಂಗವೆಂದೇ ಹೆಸರಾಯಿತು. ಜಟ್ಟಂಗಿ ರಾಮೇಶ್ವರ ಗುಡೇಕೋಟೆ ಪಾಳೆಯಗಾರರ ಕುಲದೇವರು.

ಶತಮಾನಗಳ ಪ್ರಸಿದ್ಧ ಪಾರ್ವತಿ ಮತ್ತು ಕಾರ್ತಿಕೇಯ ದೇವಾಲಯಗಳುಳ್ಳ ಕುಮಾರಸ್ವಾಮಿ ಬೆಟ್ಟವೇ ಕಾರ್ತಿಕೇಯ ವನವೆಂಬುದು ಅಲ್ಲಿಯ ಮತ್ತು ಸಮೀಪದ ಕುಡತಿನಿಯ ಶಾಸನಗಳಿಂದಲೂ ಸ್ಪಷ್ಟವಾಗಿದೆ.[೧೦]

ರಾಮಾಯಣದ ಕಿಷ್ಕಿಂಧಾ ಕಾಂಡದಲ್ಲಿ ಹೇಳಿದಂತೆ ರಾಮ ಲಕ್ಷ್ಮಣರು ಋಷಿಗಳ ಮಾತಿನಂತೆ ಕಾರ್ತಿಕೇಯ ದೇವಾಲಯಕ್ಕೆ ಬಂದು ದೇವರನ್ನು ದರ್ಶನ ಮಾಡಿದಾ, ಕಾರ್ತಿಕೇಯಸ್ವಾಮಿಯ ಕೃಪೆಯಿಂದ ಆ ಸ್ಥಳದಲ್ಲಿ ಸಿದ್ದವಾಗುವ ಅತ್ಯಂತ ಶ್ರೇಷ್ಠಮಟ್ಟದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಕೊಳ್ಳಬೇಕೆಂದು ಅವುಗಳಿಂದ ಮಾತ್ರ ಪ್ರಬಲ ಶಸ್ತ್ರಾಸ್ತ್ರಗಳನ್ನುಳ್ಳ ಲಂಕಾಧಿಪತಿ ರಾವಣನನ್ನು ಎದುರಿಸಲು ಸಾಧ್ಯವಾಗುವುದೆಂದು ಸಂಗ್ರಹಕಾರ್ಯದಲ್ಲಿ ನಿರತರಾದಂತೆ. ಈ ಕಾರ್ತಿಕೇಯ ವನ ಗುಡೇಕೋಟೆಯ ಪರಿಸರಕ್ಕೆ ಹತ್ತಿರದಲ್ಲಿದೆ.

ಮಹಾಭಾರತದಲ್ಲಿ ಬರುವ ಏಕಚಕ್ರನಗರವು ಇಂದಿನ ಗುಣಸಾಗರ ಗ್ರಾಮವು ಆಗಿದೆ.[೧೧] ಈ ಪ್ರದೇಶವು ಕೂಡ ಗ್ರಾಮ ಪ್ರದೇಶದ ಪರಿಸರದ ಹತ್ತಿರದಲ್ಲಿದೆ. ಮೇಲಿನ ಅಂಶಗಳಿಂದ ಗುಡೇಕೋಟೆ ಗ್ರಾಮ ಪ್ರದೇಶದ ಪರಿಸರವೂ ಪುರಾಣದಿಂದಲೂ ಖ್ಯಾತಿ ಪಡೆದಿದೆ ಎಂದು ಹೇಳಬಹುದು.

೨.೩. ಪ್ರಾಗಿತಿಹಾಸಿಕ ಕಾಲದಲ್ಲಿ ಗುಡೇಕೋಟೆ

ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ್ದ ಹಂತ ಅಥವಾ ಪ್ರಾಗಿತಿಹಾಸ. ಎರಡನೆಯದು ಅಕ್ಷರ ಜ್ಞಾನವಿದ್ದಂತ ಅಥವಾ ರಾಜಮಹಾರಾಜರ ಕಾಲ ಅಥವಾ ಇತಿಹಾಸ ಕಾಲವೆಂದು ಹೇಳಬಹುದು. ಇವುಗಳಲ್ಲಿ ಪ್ರಾಗಿತಿಹಾಸ ಕಾಲ ಸುಧೀರ್ಘವಾದುದಾಗಿದೆ. ಇಂದಿಗೆ ಸುಮಾರು ೫ ಲಕ್ಷ ವರ್ಷಗಳಿಂದ ಕ್ರಿಸ್ತಶಕ ಆರಂಭದವರೆಗೂ ಅದು ರೂಢಿಯಲ್ಲಿದ್ದಿತೆಂದು ತಿಳಿಯುತ್ತದೆ.[೧೨] ಈ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹ ಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಮಾನವನು ಪ್ರಾಗಿತಿಹಾಸ ಕಾಲದಿಂದಲೂ ಶಿಲೆಯೊಡನೆ ನಿಕಟ

ಸಂಬಂಧವನ್ನು ಹೊಂದಿದ್ದಾನೆ. ಪ್ರಕೃತಿ ಮಾನವನಿಗೆ ಮೊದಲು ನೀಡಿದ ಕೊಡುಗೆಗಳಲ್ಲಿ ಶಿಲೆಯೂ ಒಂದು. ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವನಿಗೆ ಗೆಡ್ಡೆ ಗೆಣಸುಗಳನ್ನು, ಕುಂಟೆಗಳನ್ನು ಅಗೆದು ತೆಗೆಯಲು ಗಿಡಗಳನ್ನು ಕಡಿಯಲು ಬೇಟೆಯಾಡಲು, ಬೇಟೆಯಾಡಿದ ಪ್ರಾಣಿಮಾಂಸವನ್ನು ತುಂಡು ಮಾಡಲು ಮೃತ ಪ್ರಾಣಿಗಳನ್ನು ಚರ್ಮವನ್ನು ಬೇರ್ಪಡಿಸಲು ಬೇಕಾಗುವ ಆಯುಧಗಳನ್ನು ತಯಾರಿಸಲು ಶಿಲೆ ಮಾನವನಿಗೆ ವರವಾಗಿತ್ತು. ಒಟ್ಟಿನಲ್ಲಿ ಅಂದು ಮಾನವನ ಜೀವನದ ಒಂದು ಭಾಗವಾಗಿ ಶಿಲೆ ಬಳಕೆಯಾಗುತ್ತಿತ್ತು. ಅಂದರೆ ಲೋಹದ ಬಳಕೆ ಆರಂಭವಾಗುವವರೆಗೆ ಮಾನವ ಶಿಲೆಯನ್ನು ಅವಲಂಬಿಸಿದ್ದ ಈ ಕಾಲಾವಧಿಯನ್ನು ಶಿಲಾಯುಗ (Stone Age) ಎಂದು ಕರೆಯುತ್ತಾರೆ.[೧೩]

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಬೆಳವಣಿಗೆ ಮತ್ತು ಕುಶಲತೆಯನ್ನುನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ, ಸೂಕ್ಷ್ಮ ಶಿಲಾಯುಗ ಸಂಸ್ಕೃತಿ, ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ.ಹಳೆಯ ಶಿಲಾಯುಗವನ್ನು ಮತ್ತೆ ಮೂರು ಗುಂಪುಗಳಾಗಿ ವಿಭಾಗಿಸಿ, ಆದಿ ಹಳೆಯ ಸಂಸ್ಕೃತಿ, ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿ ಎಂದು ವಿಭಾಗಿಸಲಾಗಿದೆ.

ಲೋಹಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯೂ ಇದ್ದುದು ತಿಳಿಯುತ್ತದೆ. ಹಾಗಾಗಿ ಮೊದಲ ಹಂತವನ್ನು ಶಿಲಾತಾಮ್ರಯುಗ ಸಂಸ್ಕೃತಿ ಎನ್ನುವರು. ನಂತರ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲುಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದರಿಂದ ಈ ಹಂತವನ್ನು ಕಬ್ಬಿಣ ಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ.

ಭಾರತದ ಪ್ರಾಗಿತಿಹಾಸ ಅಧ್ಯಯನ ಆರಂಭ ಕರ್ನಾಟಕ ಪ್ರದೇಶದಿಂದಲೇ ಆಗಿದೆ ಎಂಬುದು ಒಂದು ಪ್ರಮುಖ ಸಂಗತಿಯಾಗಿದೆ. ಬ್ರಿಟಿಷ್ ಅಧಿಕಾರಿ ಕ್ಯಾಬೋಲ್ಡ್ ೧೮೩೬ ರಲ್ಲಿ ಮಾಡಿದ ಶೋಧನೆ ಕುಡತಿನಿ ಮತ್ತು ಕಪ್ಪುಗಲ್ಲಿನ ಬೂದಿದಿಬ್ಬ ನೆಲೆಗಳಲ್ಲಿ ಪ್ರಪ್ರಥಮವಾದುದು.ಇದೇ ರೀತಿಯಾಗಿ ೧೮೩೬ರಲ್ಲಿ ಬ್ರೂಸ್ ಫೂಟ್ ರವರ ಆದಿ ಹಳೆಯ ಶಿಲಾಯುಗದ ಉಪಕರಣಗಳ ಶೋಧವು ಭಾರತದ ಪುರಾತತ್ವ ನೆಲೆಗಳ ಶೋಧನೆಯ ಮೈಲುಗಲ್ಲಾಗಿದೆ. ಹಾಗಾಗಿ ರಾಬರ್ಟ್ ಬ್ರೂಸ್‌ಫೂಟರವರನ್ನು ಭಾರತದ ಪ್ರಾಗಿತಿಹಾಸದ ಪಿತಾಮಹ ಎಂದು ಕರೆದಿದ್ದಾರೆ.

ಗುಡೇಕೋಟೆ ಪ್ರಾಚೀನತೆಯನ್ನು ಪ್ರಾಗಿತಿಹಾಸ ಕಾಲದವರೆಗೆ ತಲುಪಿಸುವ ಅವಶೇಷಗಳು ಈ ಗ್ರಾಮದಲ್ಲಿ ಮತ್ತು ಸುತ್ತಮುತ್ತಲಿನ ಪರಿಸರದಲ್ಲಿ ಸಿಗುತ್ತವೆ. ಗುಡೇಕೋಟೆ ಗ್ರಾಮವು ಮತ್ತು

ಗ್ರಾಮದ ಸುತ್ತಮುತ್ತಲಿನ ಪರಿಸರವು ಭೌಗೋಳಿಕವಾಗಿ ಸಮೃದ್ಧವಾದದು. ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಬಂಡೆಗಳನ್ನು ಹೊತ್ತ ಬೆಟ್ಟಗಳು, ಬೆಟ್ಟಗುಡ್ಡಗಳಲ್ಲಿರುವ ಕೂಡಿದ ನೈಸರ್ಗಿಕ ಗುಹೆಗಳು, ಹಳ್ಳ ತೊರೆಗಳಿಂದ ಕೂಡಿದ ನೆಲೆಗಳು, ಅದಿರು ನಿಕ್ಷೇಪಗಳು, ಫಲವತ್ತಾದ ಭೂಭಾಗಗಳು ಪ್ರಾಗಿತಿಹಾಸ ಕಾಲದಿಂದಲೂ ಮಾನವನ ತಾಣವಾಗಿ ಬೆಳೆದು ಬರಲು ಸಹಕಾರಿಯಾಗಿವೆ.

ಗುಡೇಕೋಟೆ ಪರಿಸರದ ಸುತ್ತಮುತ್ತಲಿನ ಪ್ರದೇಶಗಳಾದ ಅಪ್ಪಯ್ಯನಹಳ್ಳಿ, ಪಂಚಲಿಂಗೇಶ್ವರ, ಜರ್ಮಲಿ, ಸಿಡೇಗಲ್ಲು ಬೆಳಗಟ್ಟ, ರಾಮದುರ್ಗ, ಜುಮ್ಮೋಬನಹಳ್ಳಿ, ಸಂಡೂರು, ಹುಲಿಕುಂಟೆ, ಬ್ರಹ್ಮಗಿರಿ, ಜಟ್ಟಂಗಿ ರಾಮೇಶ್ವರ (ಚಿತ್ರದುರ್ಗ ಜಿಲ್ಲೆ) ಇನ್ನು ಮುಂತಾದ ಪ್ರದೇಶಗಳಲ್ಲಿ ಬಂಡೆಯ ಬದಿಯಲ್ಲಿ, ಕಲ್ಲಾಸರೆ ಗವಿಗಳಲ್ಲಿ, ಬಂಡೆಗಲ್ಲುಗಳ ಮೇಲೆ ಹಳೆಯ ಶಿಲಾಯುಗಕ್ಕೆ ಸೇರಿದ ಆಯುಧಗಳು ಸೂಕ್ಷ್ಮ ಶಿಲಾಯುಗ, ತಾಮ್ರ ಶಿಲಾಯುಗ, ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗ ಹೀಗೆ ವಿವಿಧ ಕಾಲಮಾನಕ್ಕೆ ಸೇರಿದ ಮನುಷ್ಯಾ ಕೃತಿಯ ಚಿತ್ರಗಳು ದೈವ ಚಿಹ್ನೆಗಳು. ಪ್ರಾಣಿಗಳ ರೇಖಾಚಿತ್ರಗಳು, ಆ ಕಾಲದಲ್ಲಿ ಬಳಕೆಯಲ್ಲಿದ್ದ ವಿವಿಧ ವಸ್ತುಗಳು ಗುಡೇಕೋಟೆ ಪರಿಸರದಲ್ಲಿ ಸಾಕಷ್ಟು ದೊರೆಯುತ್ತವೆ. ಇವುಗಳು ಗುಡೇಕೋಟೆ ಪರಿಸರದ ಪ್ರಾಚೀನತೆಯನ್ನು ತೋರಿಸುತ್ತವೆ.

ಭಾರತದಲ್ಲಿ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ೧೮೬೩ರಲ್ಲಿ ಬೆಳಕು ಕಂಡಿದ್ದು, ಈ ಹಂತದ ಹಲವು ನೆಲೆಗಳಾದ ಮಲಪ್ರಭಾ ನದಿಕೊಳ್ಳ, ತುಂಗಾಭದ್ರಾ ನದಿಯ ದಡದಲ್ಲಿರುವ ನಿಟ್ಟೂರು, ಕಮಲಾಪುರ, ದರೋಜಿ, ಕುರೆಕುಪ್ಪೆ, ಗಾದಿಗನೂರು ಇನ್ನು ಮುಂತಾದ ನೆಲೆಗಳನ್ನು ಭೂವೈಜ್ಞಾನಿಕ ದೃಷ್ಟಿಕೋನದಲ್ಲಿ ಅಧ್ಯಯನ ನಡೆಸಿ ಸ್ತರ ವಿವರಗಳೊಂದಿಗೆ ಶಿಲೋಪಕರಣಗಳನ್ನು ಸಂಗ್ರಹಿಸಿ ಜನರ ಜೀವನ ಕ್ರಮವನ್ನು ಅರಿಯುವುದರ ಜೊತೆಗೆ ಆಗಿನ ಪ್ರಾಕೃತಿಕ ಮತ್ತು ಭೌಗೋಳಿಕ ಸಂಪತ್ತಿನ ವಿವರಗಳನ್ನು ತಿಳಿಯಲು ಪ್ರಯತ್ನಗಳನ್ನು ನಡೆಸಲಾಗಿದೆ.

ಇಂತಹ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಈ ಗ್ರಾಮದ ಪರಿಸರ ಪ್ರದೇಶದ ಹತ್ತಿರವಿರುವ ಜುಮ್ಮೋಬನಹಳ್ಳಿಯಲ್ಲಿ ದೊರೆತಿವೆ. ಜುಮ್ಮೋಬನಹಳ್ಳಿ ಗ್ರಾಮದ ವಾಯುವ್ಯ ಭಾಗದಲ್ಲಿನ ಐಕಪ್ ಹಳ್ಳದ ಬಳಿಯ ದಂಡೆಯ ಮೇಲಿನ ಜಮೀನೊಂದರಲ್ಲಿ ಆದಿಹಳೆ ಶಿಲಾಯುಗ ಕಾಲಕ್ಕೆ ಸೇರಿದ ಶಿಲಾ ಕೊಡಲೆ ದೊರೆತಿದೆ. ಇದನ್ನು ನೀಸ್ ಜಾತಿಯ ಶಿಲೆಯಿಂದ ಅಶ್ಯೂಲ್ ಮಾದರಿಯಲ್ಲಿ ತಯಾರಿಸಲಾಗಿದೆ. ಈ ಕೊಡಲಿಯ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ಚಕ್ಕೆಗಳನ್ನು ಎಬ್ಬಿಸಲಾಗಿದ್ದು, ಆಯುಧದ ಎರಡು ಬದಿ ಹಾಗೂ ಬಾಯಿ ಭಾಗ ಹರಿತವಾಗಿರುವಂತೆ

ತಯಾರಿಸಲಾಗಿದೆ. ಆದರೆ ನನ್ನ ಅನ್ವೇಷಣಾ ಸಮಯದಲ್ಲಿ ಈ ಗುಡೇಕೋಟೆ ಗ್ರಾಮದ ಪರಿಸರದಲ್ಲಿ ಇಂತಹ ಆದಿ ಹಳೆಯ ಶಿಲಾಯುಗಕ್ಕೆ ಸೇರಿದ ಯಾವುದೇ ಆಯುಧಗಳು ಅಥವಾ ಅವಶೇಷಗಳು ದೊರೆತಿಲ್ಲ. ಆದರೆ ಇಲ್ಲಿಯ ಭೂಗೋಳ ಪ್ರದೇಶವನ್ನು ಗಮನಿಸಿದರೆ, ಹಳೆಯ ಶಿಲಾಯುಗಕ್ಕೆ ಸೇರಿದ ಅವಶೇಷಗಳು ಸಿಗುವ ಸಂಭವವಿದೆ. ಆದರೆ ಇದಕ್ಕೆ ಹೆಚ್ಚಿನ ಸಂಶೋಧನೆಯ ಅಗತ್ಯವಿದೆ.

ಸೂಕ್ಷ್ಮ ಶಿಲಾಯುಗ:ಕರ್ನಾಟದಲ್ಲಿ ಸೂಕ್ಷ್ಮ ಶಿಲಾಯುಗ ನಿವೇಶನಗಳು ೧೯೩೯ರಲ್ಲಿ ಬೆಳಕಿಗೆ ಬಂದಿದ್ದರೂ ಕೂಡ ಅಲ್ಲಿ ದೊರೆತ ಉಪಕರಣಗಳ ವೈಜ್ಞಾನಿಕ ಅಧ್ಯಯನ ೧೯೫೩ರಲ್ಲಿ ಆರಂಭವಾಯಿತು. ಸೂಕ್ಷ್ಮ ಶಿಲಾಯುಗ ಸಂಸ್ಕೃತಿಗೆ ಅವಶೇಷಗಳು, ತೋರಣಗಲ್ಲು, ಕುಡಿತಿನಿ, ಸಂಗನಕಲ್ಲು ಸಿಡೇಗಲ್ಲು, ಬ್ರಹ್ಮಗಿರಿಯಲ್ಲಿ ದೊರೆತಿವೆ. ಇದರಿಂದ ಅವಶೇಷಗಳು ಗುಡೇಕೋಟೆ ಗ್ರಾಮದ ಪ್ರದೇಶದಲ್ಲಿ ಕಂಡು ಬರದಿದ್ದರೂ, ಈ ಗ್ರಾಮ ಪರಿಸರದಲ್ಲಿ ಬರುವ ಸಿಡೇಗಲ್ಲು, ಬ್ರಹ್ಮಗಿರಿಯಲ್ಲಿ ದೊರೆತಿವೆ. ಈ ಗ್ರಾಮದಿಂದ ೩ ಕಿ.ಮೀ.ದೂರದಲ್ಲಿರುವ ಸಿಡೇಗಲ್ಲಿನ ಗುಹೆಯೊಂದರಲ್ಲಿ ಬೂದುಬಣ್ಣದ, ಕೆಲವು ಕಪ್ಪುಬಣ್ಣದ ಮಡಿಕೆ ಚೂರುಗಳು ದೊರೆತಿವೆ.ಇಲ್ಲಿನ ಹಿರೇಹಳ್ಳದ ದಂಡೆಯಲ್ಲಿ ಸಂಸ್ಕೃತಿ ಕಾಲಕ್ಕೆ ಸೇರಿದ ಚಾರ್ಟ್ ಕಲ್ಲಿನಿಂದ ತಯಾರಿಸಲ್ಪಟ್ಟ ಬ್ಲೇಡ್, ಬರೀನ್, ಲುನೇಟ್ ರೀತಿಯ ಚಿಕ್ಕಚಿಕ್ಕ ಆಯುಧೋಪಕರಣಗಳು ದೊರೆತಿವೆ. ಇವುಗಳಲ್ಲಿ ಕೆಲವು ಉಪಕರಣಗಳಲ್ಲಿ ಒಂದು ತುದಿಯು ಚೂಪಾಗಿದ್ದು ಎರಡು ಬದಿಯಲ್ಲೂ ಹರಿತವಾಗಿವೆ. ಈ ಉಪಕರಣಗಳನ್ನು ಕೊರೆಯಲು ಇಲ್ಲವೇ ಕೊಯ್ಯಲು ಉಪಯೋಗಿಸುತ್ತಿದ್ದಿರಬಹುದು.

ನೂತನ ಶಿಲಾಯುಗ : ಕರ್ನಾಟಕದಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಶೋಧನೆಗಳು ಪ್ರಥಮವಾಗಿ ೧೮೭೨ರಲ್ಲಿ ಬೆಳಕಿಗೆ ಬಂದವು. ಬಳ್ಳಾರಿ ಜಿಲ್ಲೆಯ ಕಪ್ಪಗಲ್ಲು ಬೆಟ್ಟದಲ್ಲಿ ನೂತನ ಪೀಠೋಪಕರಣ ಹಾಗೂ ವಾಸ್ತವ್ಯದ ನೆಲೆಯೊಂದನ್ನು ಗುರುತಿಸಿದವರು ರಾಬರ್ಟ್ ಬ್ರೂಸ್ ಫ್ಯೂಟ್‌ರವರು. ಈ ಶಿಲಾಯುಗದ ಸಂಸ್ಕೃತಿಗೆ ಸಂಬಂಧಿಸಿದ ಅವಶೇಷಗಳು, ಗುಡೇಕೋಟೆ ಗ್ರಾಮ ಪ್ರದೇಶದಲ್ಲಿ ಹಾಗೂ ಈ ಗ್ರಾಮದ ಪರಿಸರದ ಪ್ರದೇಶದಲ್ಲಿ ದೊರೆತಿವೆ. ಈ ಗ್ರಾಮ ಪರಿಸರ ಪ್ರದೇಶದಲ್ಲಿ ಬರುವ ಬೆಳಗಟ್ಟಿ, ರಾಮದುರ್ಗ, ಜಟ್ಟಂಗಿ ರಾಮೇಶ್ವರ, ಬ್ರಹ್ಮಗಿರಿ, ಅಪ್ಪಯ್ಯನಹಳ್ಳಿ ಜರ್ಮಲಿ ಪ್ರದೇಶಗಳಲ್ಲಿ ಈ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ದೊರೆತಿವೆ.

೧೯೧೬ರಲ್ಲಿ ರಾಬರ್ಟ್ ಬ್ರೂಸ್ ಫ್ಯೂಟ್‌ವರು ಕರ್ನಾಟದಲ್ಲಿ ಇಂತಹ ಹಲವು ನೆಲೆಗಳನ್ನು ಶೋಧಿಸಿದ್ದಾರೆ. ಅವುಗಳಲ್ಲಿ ಆದರಲ್ಲಿ ರಾಮದುರ್ಗ, ಜರ್ಮಲಿ, ಅಪ್ಪಯ್ಯನಹಳ್ಳಿ ಬೆಳಗಟ್ಟಿ ಪ್ರದೇಶವು ಒಂದಾಗಿದೆ. ಈ ಪ್ರದೇಶವು ಗ್ರಾಮದ ಹತ್ತಿರದಲ್ಲಿದೆ. ಈ ಒಂದು ಪ್ರದೇಶದಲ್ಲಿರುವ ರಾಮದುರ್ಗದಲ್ಲಿ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ವಿಜೃಂಭಣೆಗೊಳಿಸಿದ ಕಲ್ಲಿನ ಕೊಡಲಿ

ದೊರೆತಿದೆ.[೧೫] ಬೆಳಗಟ್ಟದಲ್ಲಿ ಕೊಡಲಿ, ಬೀಸುವ ಕಲ್ಲು ಹೆರೆಚುಕ್ಕೆ ಮತ್ತು ಶಂಖುಪಿನ ಆಭರಣಗಳು ದೊರೆತಿವೆ. ಜರ್ಮಲಿಯಲ್ಲಿ ಬಾಗೇಶ್ವರ ದೇವಾಲಯದ ಬಳಿ ಸಂಸ್ಕೃತಿಗೆ ಸಂಬಂಧಿಸಿದ ಈ ಕಾಲಕ್ಕೆ ಸೇರಿದ ಡೈಕ್ ಶಿಲೆಯಿಂದ ತಯಾರಿಸಲಾದ ಕೊಡಲಿ, ತ್ರುಟಿತ ಕೊಡಲಿಗಳು ದೊರೆತಿವೆ.[೧೬] ಅಪ್ಪಯ್ಯನಹಳ್ಳಿಯಲ್ಲಿ ನೂತನ ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ವರ್ಣಚಿತ್ರಗಳನ್ನು ಎಂ.ಎಸ್. ನಾಗರಾಜರಾವ್ ಮತ್ತು ರು.ಮ.ಷಡಕ್ಷರಯ್ಯ ಶೋಧನೆ ಮಾಡಿದ್ದಾರೆ.

ಗುಡೇಕೋಟೆ ಗ್ರಾಮ ಪ್ರದೇಶದಲ್ಲಿ ನೂತ ಶಿಲಾಯುಗಕ್ಕೆ ಸಂಬಂಧಿಸಿದಂತೆ ಯಾವುದೇ ಅಯುಧಗಳು ಅಧ್ಯಯನ ಕ್ಷೇತ್ರದಲ್ಲಿ ದೊರೆತಿಲ್ಲ. ಆದರೆ ಈ ಯುಗ ಸಂಸ್ಕೃತಿಗೆ ಸಂಬಂಧಿಸಿದ ವರ್ಣಚಿತ್ರಗಳನ್ನು ನೋಡಬಹುದು. ಅವು ಈ ಗ್ರಾಮದ ಕೋಟೆಯೊಳಗಡೆ, ಹೊರಗಡೆ ಇವೆ. ಈ ಗ್ರಾಮದ ಪ್ರದೇಶದಲ್ಲಿ ಎರಡು ವಿಧವಾದ ವರ್ಣಚಿತ್ರಗಳು ನೋಡಲು ಸಿಗುತ್ತವೆ. ೧. ಗವಿಯೊಳಗೆ ಅಥವಾ ಕಲ್ಲಿನ ಒಳಬದಿಯಲ್ಲಿ ಬಿಡಿಸಿದ ವರ್ಣಚಿತ್ರಗಳು. ಈ ಚಿತ್ರಗಳು ಬಿಳಿ ಬಣ್ಣದಲ್ಲಿ, ಕೆಮ್ಮಣ್ಣಿನ ಬಣ್ಣದಲ್ಲಿ ಬಿಡಿಸಲ್ಪಟ್ಟಿವೆ. ಚಿತ್ರಗಳು ಹಾಗೂ ೨. ಬಯಲು ಬಂಡೆಯ ಮೇಲೆ ಕುಟ್ಟಿ ಅಥವಾ ಚೂಪಾದ ಸಾಧನದಿಂದ ಸ್ವಲ್ಪ ಗೆರೆಗಳನ್ನು ಮೂಡಿಸಿ ಬಿಡಿಸಿದ ಚಿತ್ರಗಳು. ಇಂತಹ ಗವಿ ವರ್ಣಚಿತ್ರಗಳ ಮತ್ತು ಬಂಡೆ ಚಿತ್ರಗಳ ಶೋಧನೆ ಭಾರತದೇಶದಲ್ಲಿ ೧೮೩೦ ರಿಂದ ಪ್ರಾರಂಭವಾಯಿತೆನ್ನ ಬಹುದು. ಈ ಗ್ರಾಮ ಪ್ರದೇಶದಲ್ಲಿ ಇಂತ ವರ್ಣಚಿತ್ರಗಳು ಸಾಕಷ್ಟು ಇವೆ. ಈ ಗ್ರಾಮದ ಕೋಟೆಯನ್ನು ಹತ್ತುವ ಹಾದಿಯಲ್ಲಿ ಇಂಥ ವರ್ಣ ಚಿತ್ರಗಳು ನೋಡಲು ಸಿಗುತ್ತವೆ. ಈ ವರ್ಣ ಚಿತ್ರಗಳಲ್ಲಿ ಮನುಷ್ಯಾಕೃತಿ, ಪ್ರಾಣಿಗಳ ಚಿತ್ರ, ದೈವ ಚಿಹ್ನೆಗಳಾದ ಸೂರ್ಯ, ಚಂದ್ರ ಇನ್ನೂ ಮುಂತಾದ ಕೆತ್ತನೆಯ ಚಿತ್ರಗಳನ್ನು ಬಿಡಿಸಲಾಗಿದೆ.

ಶಿಲಾ-ತಾಮ್ರಯುಗ ಸಂಸ್ಕೃತಿ : ನೂತನ ಶಿಲಾಯುಗ ಸಂಸ್ಕೃತಿಯ ನಂತರ ವಿಕಸನಗೊಂಡ ಹಂತವಿದು. ತಾಮ್ರದ ಅದುರಿನ ಜ್ಞಾನ ಲೋಹವಾಗಿ ಪರಿವರ್ತನೆಯಾಗಿ ನೀಳ ಚೆಕ್ಕೆಗಳ ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಸುಟ್ಟ ಮಣ್ಣಿನ ಪಾತ್ರೆಗಳ ಬಳಕೆ, ಸುಧಾರಿಸಿದ ಬೇಸಾಯ ಪದ್ಧತಿ ಮೊದಲಾದ ಮುಖ್ಯ ಲಕ್ಷಣಗಳನ್ನು ಗುರುತಿಸಿಕೊಂಡ ಸಾಂಸ್ಕೃತಿಕ ಹಂತವಾಗಿದೆ.ಈ ಯುಗದ ಸಂಸ್ಕೃತಿಯ ನೆಲೆಗಳಾದ ಕುಡಿತಿನಿ, ಕಪ್ಪುಗಲ್ಲು, ಸಂಗನಕಲ್ಲು, ಅಪ್ಪಯ್ಯನಹಳ್ಳಿ, ಜಟ್ಟಂಗಿ ರಾಮೇಶ್ವರ, ಬ್ರಹ್ಮಗಿರಿ, ನುಂಕೆಮಲೆ ಇನ್ನೂ ಮೊದಲಾದ ಪ್ರದೇಶಗಳು.

ಕಬ್ಬಿಣ ಯುಗದ ಬೃಹತ್ ಶಿಲಾಯುಗ ಸಂಸ್ಕೃತಿ : ಬೃಹತ್ ಶಿಲಾಯುಗ ಸಂಸ್ಕೃತಿಯ ಜನರು ಕುತೂಹಲಕರವಾದ ವಿವಿಧ ಮಾದರಿಯ ಬೃಹತ್ ಶಿಲಾಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತದೆ.[೧೭] ಇದರ ಜೊತೆಗೆ ಈ

ಹಂತದಲ್ಲಿ ಕಬ್ಬಿಣದ ಬಳಕೆಯ ಮಹತ್ವವನ್ನು ಕಾಣಬಹುದು. ಈ ಸಂಸ್ಕೃತಿಗೆ ಸಂಬಂಧಿಸಿದ ನೆಲೆಗಳು, ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಕಲ್ಲುಗೋರಿಗಳು ಮತ್ತು ವಸತಿ ನೆಲೆಗಳು ಕಂಡು ಬಂದಿವೆ. ಈ ಸಂಸ್ಕೃತಿಯ ನೆಲೆಗಳು ಜರ್ಮಲಿ, ಕಪ್ಪುಗಲ್ಲು, ತಿಮ್ಮಲಾಪುರ, ಹುಲಿಕುಂಟೆ, ಮೊಳಕಾಲ್ಮೂರು, ಬ್ರಹ್ಮಗಿರಿ, ನುಂಕೆಮಲೆ ಇನ್ನು ಮೊದಲಾದ ಪ್ರದೇಶಗಳಲ್ಲಿ ಕಂಡುಬಂದಿವೆ.

ಗುಡೇಕೋಟೆಯ ದಕ್ಷಿಣ ಭಾಗದಲ್ಲಿ ಮತ್ತು ಸರ್ವೋದಯ ಶಾಲೆಯ ಹತ್ತಿರ ಪಂಚಲಿಂಗೇಶ್ವರ ಗವಿ ಹೋಗುವ ಹಾದಿಯಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಗೋರಿ ಕಂಡುಬಂದಿದೆ. ಗ್ರಾಮ ಪರಿಸರದ ಪ್ರದೇಶದ ಹತ್ತಿರದಲ್ಲಿರುವ ಜರ್ಮಲಿಯಲ್ಲಿ ಈ ಸಂಸ್ಕೃತಿಯ ಗೋರಿಗಳು ಸಾಕಷ್ಟಿವೆ. ಈ ಗೋರಿಗಳಿಗೆ ಸ್ಥಳೀಯರು ಮೊರೆಯರ ಮನೆಗಳೆಂದು ಕರೆಯುತ್ತಾರೆ.

೨.೪. ವಿವಿಧ ಕಾಲಘಟ್ಟಗಳಲ್ಲಿ ಗುಡೇಕೋಟೆಯ ರಾಜಕೀಯ ಚಿತ್ರಣ

ಮೌರ್ಯರು : ಗುಡೇಕೋಟೆ ಪರಿಸರವು ಮೌರ್ಯ ಸಾಮ್ರಾಜ್ಯದ ಆಳ್ವಿಕೆಗೆ ಒಳಪಟ್ಟಿದ್ದು, ಕರ್ನಾಟಕದ ಬಹುಭಾಗವು ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದಿತು. ಕ್ರಿ.ಪೂರ್ವ ೪ನೇ ಶತಮಾನದಲ್ಲಿ ಮೌರ್ಯ ಸಾಮ್ರಾಜ್ಯ ಸ್ಥಾಪನೆಯಾಗುವ ಮೊದಲೇ, ಉತ್ತರ ಸಾಮ್ರಾಜ್ಯದ ಸ್ಥಾಪಕರು ದಕ್ಷಿಣ ಭಾರತದ ಅನೇಕ ಪ್ರದೇಶಗಳನ್ನು ಗೆದ್ದು ತಮ್ಮ ಆಳ್ವಿಕೆಯನ್ನು ವಿಸ್ತರಿಸಿದರು. ಮೌರ್ಯರಿಗಿಂತ ಮೊದಲು ನಂದರೂ, ಶೈಶು, ನಾಗರೂ, ಕರ್ನಾಟಕದ ಕೆಲವು ಭಾಗಗಳನ್ನು ಆಳಿದ ಆಧಾರಗಳಿವೆ. ನಂದರನ್ನು ಕೆಳಗುರಳಿಸಿದ ಮೌರ್ಯರು ಅನುಕ್ರಮವಾಗಿ ದಕ್ಷಿಣ ಭಾರತವನ್ನು ಒಳಗೊಂಡ ಮಗಧ ರಾಜ್ಯದ ಒಡೆಯರಾದರೆಂದು ತಿಳಿದು ಬರುತ್ತದೆ. ಹನ್ನೆರಡನೆಯ ಶತಮಾನದ ಶಿಕಾರಿಪುರದ ಶಾಸನಗಳು ಈ ಪ್ರದೇಶದಲ್ಲಿ ನಂದರ ಆಳ್ವಿಕೆಯಿದ್ದಿತೆಂಬುದನ್ನು ಸೂಚಿಸುತ್ತವೆ. ಕುಂತಲ ಪ್ರದೇಶವು ಆಶೋಕನ ಆಳ್ವಿಕೆಗೆ ಮುಂಚೆಯೇ ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂಬುದು ನಿರ್ವಿವಾದ ವಿಷಯವಾಗಿದೆ.

ಕುಂತಲ ಸೀಮೆಯು ಭೀಮ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು ಪಶ್ಚಿಮ ಘಟ್ಟಗಳನ್ನು ಸರಹದ್ದುಗಳನ್ನಾಗಿ ಹೊಂದಿದ್ದಿತು.[೧೮] ಚಿತ್ರದುರ್ಗ, ಬಳ್ಳಾರಿ, ಧಾರವಾಡ, ಕೊಪ್ಪಳ ರಾಯಚೂರು, ಬಿಜಾಪುರ, ಪ್ರದೇಶಗಳು ಕುಂತಲದಲ್ಲಿ ಸೇರಿದ್ದವು. ಅದಲ್ಲದೆ ಈ ಗುಡೇಕೋಟೆ ಪರಿಸರದ ಪ್ರದೇಶವು ವೇದಾವತಿ ನದಿಯ ಸಮೀಪದಲ್ಲಿದೆ. ಬಳ್ಳಾರಿ ಜಿಲ್ಲೆಯ ದಕ್ಷಿಣ ಭಾಗದ ತುಂಗಭದ್ರ ನದಿಯ ದಡದಲ್ಲಿರುವ ನಿಟ್ಟೂರು ಮತ್ತು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಯಲ್ಲಿ ದೊರೆತಿರುವ ಅಶೋಕನ ಶಾಸನಗಳು ಮೌರ್ಯರ ಆಳ್ವಿಕೆಯನ್ನು ಅಧಿಕೃತವಾಗಿ ಸ್ಪಷ್ಟಪಡಿಸುವ ಆಧಾರಗಳಾಗಿವೆ.[೧೯]

ಗುಡೇಕೋಟೆ ಪರಿಸರದ ಪ್ರದೇಶವು ಜಟಂಗಿ ರಾಮೇಶ್ವರ, ಬ್ರಹ್ಮಗಿರಿ, ಸಿದ್ಧಾಪುರದ ಪ್ರದೇಶದ ಪರಿಸರದ ಹತ್ತಿರದಲ್ಲಿ ಬರುತ್ತದೆ. ಅದಲ್ಲದೆ ಇಸಿಲ ಪ್ರಾಂತವು ಬ್ರಹ್ಮಗಿರಿಯಾಗಿದ್ದು, ಇಳಿದು ಗುಡೇಕೋಟೆ ಗ್ರಾಮ ಪರಿಸರ ಪ್ರದೇಶದಲ್ಲಿ ಬರುತ್ತದೆ. ಇದಲ್ಲದೆ ಇಲ್ಲಿರುವ ಶಾಸನಗಳು ಅಶೋಕನ ಆಡಳಿತದ ಅವಧಿಯ ಕಾಲಕ್ಕೆ ಸಂಬಂಧಿಸಿವೆ. ಈ ಶಾಸನಗಳು ಅವನ ಸಾಮ್ರಾಜ್ಯದ ಗಡಿಗಳನ್ನು ಸೂಚಿಸುವ ಗುರುತುಗಳೆಂದು ಚರಿತ್ರೆಕಾರರ ಅಭಿಪ್ರಾಯವಾಗಿದೆ.

ಜಗಳೂರು ತಾಲೂಕಿನ ಅಸಗೋಡು ಹಿಂದೆ ಅಶೋಕ ಪಟ್ಟಣವೆಂದು ಕರೆಯಲ್ಪಡುತ್ತಿತ್ತು. ಇಲ್ಲಿ ಬೌದ್ಧ ಧರ್ಮವು ವ್ಯಾಪಿಸಿದ್ದುದರ ಸೂಚನೆಗಳು ಸಿಕ್ಕುತ್ತವೆ. ಈ ಪ್ರದೇಶವು ಮೌರ್ಯ ಸಾಮ್ರಾಜ್ಯಕ್ಕೆ ಸೇರಿದ್ದಿತೆಂದು ಹೇಳಬಹುದು. ಅಶೋಕನ ಶಾಸನಗಳಲ್ಲಿ ಪ್ರಸ್ತಾಪವಾಗಿರುವ ಇಸಿಲ ಅಶೋಕನ ಪ್ರಾಂತ್ಯಾಧಿಕಾರಿಯ ರಾಜಧಾನಿಯಾಗಿದ್ದಿತು. ಇಸಿಲ ಎಂಬುದು ರಿಷ್ಯಕದ ಪ್ರಾಕೃತ ರೂಪವೆಂದು, ಅದು ರುಷ್ಯಮೂಕ ಪರ್ವತ ಬಳಿ ಅಂದರೆ ಹಂಪಿಯ ಬಳಿ ಇದ್ದಿರಬೇಕೆಂದು ಕೆಲವು ಇತಿಹಾಸಕಾರರು ಭಾವಿಸುತ್ತಾರೆ.[೨೦] ಆದರೆ ಡಾ. ಶೇಷಾದ್ರಿ ಮತ್ತಿತರ ಪ್ರಾಕ್ತನಶಾಸ್ತ್ರಜ್ಞರು ಇತಿಹಾಸಕಾರರು ಇಸಿಲ ಬ್ರಹ್ಮಗಿರಿಯ ಬಳಿ ಇದ್ದಿತೆಂದು ಅಭಿಪ್ರಾಯ ಪಡುತ್ತಾರೆ. ಬ್ರಹ್ಮಗಿರಿ ಸಮೀಪದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಚೈತ್ಯಾಲಯ ಮತ್ತು ಮೌರ್ಯರ ಕಾಲದ ಅನೇಕ ಅವಶೇಷಗಳು ದೊರಕಿದ್ದು ಬ್ರಹ್ಮಗಿರಿಯೇ ಇಸಿಲ್ ನಗರವೆಂಬ ವಾದಕ್ಕೆ ಪ್ರಸಿದ್ಧಿ ದೊರೆತಿದೆ. ಈ ಪ್ರದೇಶದಲ್ಲಿ ಸಿಕ್ಕಿದ ಅವಶೇಷಗಳು ಅಶೋಕನ ಕಾಲಕ್ಕೆ ಸೇರಿದುವೆಂದು ಮಾರ್ಟಿಮರ್ ವ್ಹೀಲರ್ ಮೊದಲಾದ ಪ್ರಾಕ್ತನ ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈ ಸ್ಥಳದಲ್ಲಿನ ಬೃಹತ್ ಶಿಲಾ ಸಂಸ್ಕೃತಿಯ (ಮೆಗಾಲಿಥಿಕ್) ಅವಶೇಷಗಳನ್ನು ಸ್ಥಳೀಯ ಜನರು ಮೊರೇರ ಮನೆ ಅಥವಾ ಮೌರ್ಯರ ಮನೆ ಎಂದು ಕರೆಯುತ್ತಾರೆ. ಇಂಥಾ ಮೌರ್ಯರ ಮನೆ ಗುಡೇಕೋಟೆ ಪ್ರದೇಶದಲ್ಲಿ ಕಂಡುಬರುತ್ತದೆ.

ಒಟ್ಟಿನಲ್ಲಿ ಗುಡೇಕೋಟೆ ಪರಿಸರದ ಪ್ರದೇಶವು ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿದ್ದು ಅವರ ಆಡಳಿತ ಪದ್ಧತಿಗೆ ಒಳಪಟ್ಟಿದ್ದಿತು. ಇಲ್ಲಿಯ ಬ್ರಹ್ಮಗಿರಿ, ಸಿದ್ಧಾಪುರ ಪ್ರದೇಶಗಳಲ್ಲಿ ಸಿಕ್ಕಿರುವ ಶಾಸನಗಳಿಂದ ಮತ್ತು ಅವಶೇಷಗಳಿಂದ ಈ ಅಂಶ ದೃಢಪಡುತ್ತದೆ. ಅಶೋಕನ ಮರಣಾಂತರ ಮೌರ್ಯ ಸಾಮ್ರಾಜ್ಯವು ಕ್ಷೀಣಿಸಿತು. ದಕ್ಷಿಣ ಭಾರತದಲ್ಲಿ ಮೌರ್ಯ ಸಂತತಿಯ ಅರಸರು ಹಲವಾರು ಶತಮಾನ ಕಾಲ ಆಳಿದರು. ಕೊಂಕಣದ ಮೌರ್ಯರು ಕ್ರಿ.ಪೂರ್ವ ನಾಲ್ಕನೆಯ ಶತಮಾನದವರೆಗೂ ಆಳಿದರು. ನಂತರ, ಈ ಪ್ರದೇಶವು ಶಾತವಾಹನರ ಆಡಳಿತಕ್ಕೆ ಒಳಪಟ್ಟಿತು.

ಶಾತವಾಹನರು : ಮೌರ್ಯ ಸಾಮ್ರಾಜ್ಯವು ಕ್ಷೀಣಿಸುವ ಸಮಯದಲ್ಲಿ ದಖ್ಖನಿನ ಇತಿಹಾಸದಲ್ಲಿ ಶಾತವಾಹನರೆಂಬ ಆಂಧ್ರ ಭೃತ್ಯರು ಅಂದಿನ ರಾಜಕೀಯ ಪರಿಸ್ಥಿತಿಯನ್ನು ಸರಿಯಾಗಿ ಅರಿತು ತಮ್ಮ

ರಾಜಕೀಯ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಹವಣಿಸಿ ಶೀಘ್ರದಲ್ಲಿ ಯಶಸ್ವಿಯಾದರು. ಕರ್ನಾಟಕದ ಉತ್ತರ ಭಾಗವು ಸೇರಿದಂತೆ ಸ್ವಲ್ಪ ಹೆಚ್ಚುಕಡಿಮೆ ನರ್ಮದಾ ನದಿಯವರೆಗಿನ ಪ್ರದೇಶವನ್ನೊಳಗೊಂಡ ರಾಜ್ಯವನ್ನು ಕಟ್ಟಿದರು. ಶಾತವಾಹನರು ಎಂಬ ಹೆಸರು ಮೂಲ ಪುರುಷ ಶಾತವಾಹನನಿಂದ ಬಂದಿರಬಹುದು. ಪುರಾಣಗಳಲ್ಲಿ ಈ ವಂಶದ ಮೂಲಪುರುಷರು ಆಂಧ್ರಜಾತಿಗೆ ಸೇರಿದ್ದರಿಂದ ಇವರನ್ನು ಆಂಧ್ರರೆಂದು ಹೆಸರಿಸಲಾಗಿದೆ.[೨೦]

ಈ ವಂಶದ ಶಾಸನಗಳು ಮತ್ತು ನಾಣ್ಯಗಳು ಸಿಕ್ಕಿರುವ ಸ್ಥಳಗಳಿಂದ ಇವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ದಖ್ಖನ್ನಿನ ಪಶ್ಚಿಮ ಭಾಗದಲ್ಲಿ ಆರಂಭಿಸಿ ಪೂರ್ವ ಮತ್ತು ದಕ್ಷಿಣದ ಕಡೆಗೆ ವಿಸ್ತರಿಸಿ, ರಾಜಕೀಯ ಪ್ರಭಾವವನ್ನು ಸ್ಥಾಪಿಸಿದರೆಂಬ ಅಭಿಪ್ರಾಯವಿದೆ. ಈ ಭಾಗಗಳೇ ಕ್ರಮೇಣ ಆಂಧ್ರ ಕರ್ನಾಟಕ ಎಂದು ಹೆಸರು ಪಡದವು. ಪಕ್ಕದಲ್ಲಿರುವ ಇಂದಿನ ಆಂಧ್ರಪ್ರದೇಶದ ಸ್ವಲ್ಪಭಾಗವು ಮತ್ತು ಗುಡೇಕೋಟೆ ಪರಿಸರ ಭಾಗವು ಸೇರಿದಂತೆ, ಬಳ್ಳಾರಿ ಪ್ರದೇಶವನ್ನು ಶಾತವಾಹನೀಹಾರ ಮತ್ತು ಆ ಭಾಗದ ಶಾತವಾನೇ ರಾಷ್ಟ್ರವೆಂದು ಕರೆಯಲಾಗಿತ್ತು.ಕರ್ನಾಟಕದ ಬಳ್ಳಾರಿ ಪ್ರದೇಶವನ್ನು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಭಾಗವನ್ನು ಸ್ಪಷ್ಟವಾಗಿ ಶಾತವಾಹನೀಹಾರ ಮತ್ತು ರಾಷ್ಟ್ರವೆಂದು ಕರೆದಿರುವುದರಿಂದ ಅದಲ್ಲದೆ ಗುಡೇಕೋಟೆ ಗ್ರಾಮ ಹತ್ತಿರದಲ್ಲಿರುವ ಪರಿಸರದಲ್ಲಿ ಬರುವ ಕೊಟ್ಟೂರು, ಕೂಡ್ಲಿಗಿ, ಶಿವಪುರ, ಚೋರುನೂರು, ಮೊಳಕಾಲ್ಮೂರು, ಆಶೋಕ ಸಿದ್ಧಾಪುರ, ಮುಂತಾದ ಊರುಗಳಲ್ಲಿ ಶಾತವಾಹನ ಕಾಲದ ಅವಶೇಷಗಳು ದೊರೆತಿವೆ.[೨೨] ಇದರಿಂದ ಗುಡೇಕೋಟೆ ಗ್ರಾಮದ ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.ಗುಡೇಕೋಟೆ ಗ್ರಾಮ ಪರಿಸರದ ಪಶ್ಚಿಮಕ್ಕೆ ಹಿರೇಹಡಗಲಿ ಇದೆ. ಇಲ್ಲಿಯ ಶಾಸನವು ಶಾತವಾನೀಹಾರ ಶಾತವಾಹನ ರಾಷ್ಟ್ರ ಎಂದು ಉಲ್ಲೇಖವಾಗಿದೆ.

ಕದಂಬರ ಆಳ್ವಿಕೆ : ಐತಿಹಾಸಿಕವಾಗಿ ಪ್ರಮುಖ ಸ್ಥಾನವನ್ನು ಪಡೆದಿರುವ ಗುಡೇಕೋಟೆ ಪರಿಸರವು ಮೌರ್ಯ ಮತ್ತು ಶಾತವಾಹನರ ಆಳ್ವಿಕೆಗೆ ಒಳಪಟ್ಟದ್ದುದು ಶಾಸನಗಳಿಂದಲೂ ಭೂ ಸಂಶೋಧನೆಯಿಂದಲೂ ದೃಢಪಟ್ಟಿದೆ. ಶಾತವಾಹನರ ಆಳ್ವಿಕೆ ಮೂರನೆಯ ಶತಮಾನದ ಹೊತ್ತಿಗೆ ಮುಕ್ತಾಯಗೊಂಡು ಅವರ ಸಾಮ್ರಾಜ್ಯ ಹರಿದು ಹಂಚಿ ಹೋಗುತ್ತಿದ್ದ ಹಾಗೆಯೇ ಈ ಸಾಮ್ರಾಜ್ಯದ ದಕ್ಷಿಣ, ಪಶ್ಚಿಮ, ಭಾಗಗಳ ಒಡೆತನಗಳು ಆಗತಾನೆ ತಲೆ ಎತ್ತಿದ ಕದಂಬರಿಗೆ ವಶವಾದವು. ಹೀಗೆ ಕದಂಬರ ಅಧೀನಕ್ಕೊಳಪಟ್ಟ ಭಾಗಗಳಲ್ಲಿ ಗುಡೇಕೋಟೆ ಪರಿಸರದ ಪ್ರದೇಶವು ಸೇರಿರಬಹುದು. ಕ್ರಿ.ಶ,೪-೫ನೇ ಶತಮಾನದಲ್ಲಿ ಪ್ರಸಿದ್ಧಿಗೆ ಬಂದ ಬನವಾಸಿಯ ಕದಂಬರು ಶಾತವಾಹಿನಿ ರಾಷ್ಟ್ರರ ಸೇಂದ್ರಕವನ್ನು ಗೆದ್ದು ಉಚ್ಚಂಗಿದುರ್ಗವನ್ನು ತಮ್ಮ ರಾಜ್ಯದ ಪೂರ್ವಭಾಗದ ರಾಜಧಾನಿಯನ್ನಾಗಿ

[illegible]

[illegible]

ಮಾಡಿಕೊಂಡು ೧೦-೧೨ನೇ ಶತಮಾನಗಳವರೆಗೂ ಆಳಿದರು. ಕದಂಬರ ಒಂದು ಮನೆತನ ಕೊಟ್ಟೂರು, ಕೋಗಳಿ ನಾಡನ್ನು ಆಳುತ್ತಾ ಬಂದಿತೆಂಬುದಕ್ಕೆ ಶಾಸನಗಳು ಸಿಕ್ಕಿವೆ. ಸೊಂಡೂರಿನ ಸ್ವಾಮಿಮಲೆಯ ಕಾರ್ತೀಕನ ಉಲ್ಲೇಖವೂ ಮಯೂರವರ್ಮನ ಚಂದ್ರವಳ್ಳಿ ಶಾಸನದಲ್ಲಿ ಕಂಡುಬರುತ್ತದೆ.[೨೩]

೬ನೇ ಶತಮಾನದ ಕೊನೆಯವರೆಗೆ ಆಳಿದ ಪೂರ್ವ ಕದಂಬರು ಚಾಲುಕ್ಯರಿಗೆ ಸೋತು ಹಿಮ್ಮೆಟ್ಟಿದರು. ಅವರ ಮನೆತನದ ಕೆಲವು ಅರಸರ ಆಳ್ವಿಕೆ ಈ ಪ್ರದೇಶದಲ್ಲಿ ಕಂಡುಬರುತ್ತದೆ. ೧೦-೧೧ನೇ ಶತಮಾನದ ನಡುವೆ ಬರುವ ಆಜವರ್ಮನು ಕದಂಬ ಮನೆತನದವನೇ ಇರಬೇಕು. ಈತನು ಚಾಲುಕ್ಯ ಅರಸರ ಜಯಸಿಂಹನ ಅಧೀನವಾಗಿ ಮೊಳಕಾಲ್ಮೂರು ಪ್ರಾಂತದಲ್ಲಿ ಆಳುತ್ತಿದ್ದನು.[೨೪] ಕದಂಬ ವಂಶದ ಇನ್ನೊಬ್ಬ ಅರಸನೆಂದರೆ ಬಂಟರಸ ದೇವ. ಇವನು ಮೊಳಕಾಲ್ಮೂರು ಬಳಿಯ ಲುಂಕೆ (ಲುಂಕೆಮಲೆ)ಯಿಂದ ಆಳುತ್ತಿದ್ದನು. ೧೧೦೦ರಲ್ಲಿ ಈತನು ಲುಂಕೇಶ್ವರ ದೇವರಿಗೆ ದತ್ತಿಬಿಟ್ಟ ವಿವರಗಳು ಇಲ್ಲಿನ ಶಾಸನದಲ್ಲಿವೆ. ಮೇಲಿನ ಶಾಸನಗಳಿಂದಲೂ ಈ ಗುಡೇಕೋಟೆ ಪರಿಸರ ಪ್ರದೇಶವು ಕದಂಬರ ಆಳ್ವಿಕೆ ಒಳಪಟ್ಟಿರಬಹುದು ಎಂದು ಹೇಳಬಹುದು.

ಚಾಲುಕ್ಯರ ಆಳ್ವಿಕೆ : ದಕ್ಷಿಣ ಭಾರತದಲ್ಲಿ ಚಾಲುಕ್ಯ ಮನೆತನದ ಪ್ರಭಾವವು ಗಣನೀಯವಾದುದಾಗಿದೆ. ಕ್ರಿ.ಶ.೬ನೇ ಶತಮಾನದಿಂದ ೮ನೆಯ ಶತಮಾನದವರೆಗೆ ಪುನ: ಕ್ರಿ.ಶ.೧೦ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಚಾಲುಕ್ಯ ಮನೆತನದವರು ಈ ಪ್ರದೇಶವನ್ನು ಆಳಿದರು.

ಚಾಲುಕ್ಯರಲ್ಲಿ ಮೂರು ಶಾಖೆಗಳುಂಟು. ೧. ಬಾದಾಮಿಯ ಚಾಲುಕ್ಯರು ೨. ಕಲ್ಯಾಣಿ ಮತ್ತು ೩. ವೆಂಗಿ ಚಾಲುಕ್ಯರು ಈ ಮೂರು ಮನೆತನಗಳು ಈ ಭಾಗವನ್ನು ಆಳಿದರು.ಕ್ರಿ.ಶ.೬ನೇ ಶತಮಾನದಲ್ಲಿ ಕೀರ್ತಿವರ್ಮನು ಕದಂಬರನ್ನು, ಕೊಂಕಣದ ಮೌರ್ಯರನ್ನು, ನಳರನ್ನು ಸೋಲಿಸಿದನು. ೨ನೇ ಪುಲಿಕೇಶಿಯ ಶಾಸನ ಕುರುಗೋಡಿನಲ್ಲಿ ಸಿಕ್ಕಿದೆ. ಆತನ ಮಕ್ಕಳಾದ ಆದಿತ್ಯವರ್ಮ ಮತ್ತು ಚಂದ್ರಾದಿತ್ಯನು ಬಳ್ಳಾರಿ ಹಾಗೂ ಚಿತ್ರದುರ್ಗ ಭಾಗಗಳನ್ನು ಆಳುತ್ತಿದ್ದರು.[೨೫] ಅದಲ್ಲದೆ ಗುಡೇಕೋಟೆ ಪರಿಸರದ ಪ್ರದೇಶವು ಇವೆರಡೂ ಜಿಲ್ಲೆಯ ಗಡಿಭಾಗವಾಗಿದ್ದು ಈ ಭಾಗವು ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿರಬಹುದೆಂದು ತಿಳಿಯಬಹುದಾಗಿದೆ.

ಕಲ್ಯಾಣ ಚಾಲುಕ್ಯರು : ಬಾದಾಮಿಯ ಚಾಲುಕ್ಯರ ಆಳ್ವಿಕೆಯ ತರುವಾಯ ರಾಜ್ಯ ಸ್ಥಾಪನೆ ಮಾಡಿದ ರಾಷ್ಟ್ರಕೂಟರು ಸುಮಾರು ೨೦೦ವರ್ಷಗಳ ಕಾಲ ಆಳ್ವಿಕೆ ನಡೆಸಿದರು. ಕ್ರಿ.ಶ. ೯೭೩ರಲ್ಲಿ ಸಿಂಹಾಸನವನ್ನು ಏರಿದ ರಾಷ್ಟ್ರಕೂಟ ದೊರೆ ೨ನೆಯ ಕರ್ಕನನ್ನು ಚಾಲುಕ್ಯ ವಂಶದ ಇಮ್ಮಡಿ

ತೈಲಪನು ಅಧಿಕಾರದಿಂದ ಕೆಳಗಿಳಿಸಿ ಚಾಲುಕ್ಯ ವಂಶದ ಪುನ: ಸ್ಥಾಪನೆ ಮಾಡಿ ಕಲ್ಯಾಣಿಯನ್ನು ರಾಜಧಾನಿಯನ್ನಾಗಿಟ್ಟುಕೊಂಡು ಆಳಿದುದರಿಂದ ಇವರನ್ನು ಕಲ್ಯಾಣಿಯ ಚಾಲುಕ್ಯರೆಂದು ಕರೆಯುತ್ತಾರೆ. ಕಲ್ಯಾಣಿ ಚಾಲುಕ್ಯ ಶಾಸನಗಳು ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವುವು. ಅಲ್ಲದೆ ಕಲ್ಯಾಣ ಚಾಲುಕ್ಯ ಕಾಲದ ದೇವಾಲಯಗಳು ಈ ಭಾಗದಲ್ಲಿ ಸಾಕಷ್ಟಿವೆ.

ರಾಷ್ಟ್ರಕೂಟರ ಆಳ್ವಿಕೆ : ಕನ್ನಡ ನಾಡಿನ ಹಿರಿಮೆಯ ವ್ಯಾಪ್ತಿ ಹಿಮಾಲಯ ಪರ್ವತದಿಂದ ಲಂಕಾದ್ವೀಪದ ವರೆಗೆ ಪಸರಿಸುವ ಹಾಗೆ ಮಾಡಿದ ರಾಜಮನೆತನಗಳಲ್ಲಿ ರಾಷ್ಟ್ರಕೂಟರು ಬಹುಮುಖ್ಯರಾದವರು.. ಕನ್ನಡ ಸಂಸ್ಕೃತಿಯ ಸಂದರ್ಭದಲ್ಲಿ ರಾಷ್ಟ್ರಕೂಟರನ್ನು ನೆನೆಯಲೇಬೇಕು. ಏಕೆಂದರೆ ಕನ್ನಡದ ಏಕಾಕೃತಿಯ ಸಂಸ್ಕೃತಿ ಕಂಡು ಬಂದದ್ದು ಅಲ್ಲಿಂದಲೇ. ಕರ್ನಾಟಕ ಸೀಮೆಯನ್ನು ನಿಖರವಾಗಿ ಹೇಳುವ ಅಂಶವು ರಾಷ್ಟ್ರಕೂಟರ ಮೂಲಕವಾಗಿ ನಮ್ಮ ಗಮನಕ್ಕೆ ಬಂದಿರುವ ವಿಷಯವಾಗಿದೆ. ಈ ರಾಜ ಮನೆತನದವರು ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದು ಅವರ ಕಾಲಘಟ್ಟದಲ್ಲಿ ಬಂದ ಕವಿರಾಜಮಾರ್ಗ ಕೃತಿಯು ಇಡೀ ಕನ್ನಡ ಸಂಸ್ಕೃತಿಗೆ ಹಿಡಿದ ಕನ್ನಡಿಯಾಗಿದೆ. ಅದು ಕನ್ನಡ ಕಾವ್ಯ, ಕ್ರಮಿಸಬೇಕಾದ ಮಾರ್ಗ ಮುಂತಾದ ವಿಷಯಗಳನ್ನು ಬಹಳ ಸ್ಪಷ್ಟವಾಗಿ ನಿರ್ದೇಶಿಸುತ್ತದೆ. ನಾಡಿನ ಸೀಮೆಯನ್ನು ಗುರುತಿಸಿರುವಲ್ಲಿ ಈ ಕೃತಿಯ ಪಾತ್ರ ಬಹಳ ಮಹತ್ವವಾದದ್ದು.

ಕಾವೇರಿಯಿಂದಮಾ ಗೋ
ದಾವರಿವರ ಮಿರ್ಪ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ ವಸು
ಧಾವಲಯ ವಿಲಿನ ವಿಶದ ವಿಷಯ ವಿಶೇಷಂ[೨]

ಕನ್ನಡ ಸಂಸ್ಕೃತಿಯು ಕಾವೇರಿ ನದಿಯಿಂದ ಗೋದಾವರಿ ನದಿಯ ನಡುವಿನ ಭೂ ಪ್ರದೇಶದಲ್ಲಿ ನೆಲೆಗೊಂಡಿದ್ದನ್ನು ಈ ಉಲ್ಲೇಖಗಳಿಂದ ತಿಳಿಯಬಹುದು. ಅಂದರೆ ಕಾವೇರಿ ನದಿಯಿಂದ ಗೋದಾವರಿ ನದಿಯವರೆಗಿನ ಪ್ರದೇಶವನ್ನು ರಾಜಕೀಯವಾಗಿ ತಮ್ಮ ಗಡಿರೇಖೆಯನ್ನಾಗಿ ಮಾಡಿಕೊಂಡಿದ್ದರು. ಈ ಮನೆತನದ ೩ನೆಯ ಗೋವಿಂದನ ಕಾಲದಲ್ಲಿಯ ರಾಷ್ಟ್ರಕೂಟರ ಆಳ್ವಿಕೆ ದಕ್ಷಿಣದಲ್ಲಿ ವಿಶೇಷ ಪ್ರಭಾವವನ್ನು ಬೀರಿದ್ದು ಬಳ್ಳಾರಿ ಚಿತ್ರದುರ್ಗ ಜಿಲ್ಲೆಗಳ ಅನೇಕ ಕಡೆಗಳಲ್ಲಿ ಈ ಮನೆತನದ ಶಾಸನಗಳು ಸಿಕ್ಕಿವೆ. ಸಂಡೂರಿನ ಕುಮಾರಸ್ವಾಮಿಯ ದೇವಾಲಯವು ಒಂದನೆಯ ಕೃಷ್ಣನು ಕಾಲದಲ್ಲಿ ಕಟ್ಟಲ್ಪಟ್ಟಿದ್ದು ಈ ದೇವಾಲಯವು ರಾಷ್ಟ್ರಕೂಟರ ಶೈಲಿಯಲ್ಲಿದೆ. ಈ ಕಾಲದಲ್ಲಿ ನೊಳಂಬವಾಡಿಯು ಇವರ ಅಧೀನದಲ್ಲಿರುವುದು ಕಂಡುಬರುತ್ತದೆ. ಈ ಮೇಲಿನ ಆಧಾರಗಳಲ್ಲಿ ಈ ಗ್ರಾಮ ಪ್ರದೇಶವು ರಾಷ್ಟ್ರಕೂಟರ ಆಳ್ವಿಕೆ ಒಳಪಟ್ಟಿರಬಹುದೆಂದು ತಿಳಿದುಬರುತ್ತದೆ.

[illegible]

[illegible]

[illegible]

ಹೊಯ್ಸಳರು : ಕ್ರಿ.ಶ.೧೧೫೦ ರಿಂದ ೧೩೩೬ರವರೆಗಿನ ಕರ್ನಾಟಕ ಚರಿತ್ರೆಯಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದ ಇನ್ನೊಂದು ರಾಜವಂಶವೆಂದರೆ ಹೊಯ್ಸಳರದು. ಇವರು ಕರ್ನಾಟಕ ಮಾತ್ರವಲ್ಲದೆ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದರು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಶಿಲ್ಪಕಲೆಗಳ ದೃಷ್ಟಿಯಿಂದ ಹೊಯ್ಸಳರ ಆಳ್ವಿಕೆಯ ಅವಧಿ ಅತ್ಯಂತ ಪ್ರಭಾವಯುತವಾದುದು. ಶಿಲ್ಪ ಕಲಾ ಶೈಲಿ ಇವರ ಕಾಲದಲ್ಲಿ ತನ್ನದೇ ಆದ ರೂಪ ಹೊಂದಿ ಜಾಗತಿಕ ಕಲಾಕ್ಷೇತ್ರಕ್ಕೆ ವಿಶಿಷ್ಟವಾದ ಕೊಡುಗೆಯನ್ನಿತ್ತಿತು. ಅವರ ಕಾಲಾನಂತರ ಸ್ಥಾಪಿತಗೊಂಡ ವಿಜಯನಗರ ಸಾಮ್ರಾಜ್ಯಕ್ಕೆ ಪ್ರೇರಕ ಶಕ್ತಿಯಾದವರೂ ಇವರೇ.

ಹೊಯ್ಸಳರು ಚಾಲುಕ್ಯರ ಸಾಮಂತರಾಗಿದ್ದಾಗಲೆ, ನೊಳಂಬವಾಡಿಯ ಅಂದರೆ, ಬಳ್ಳಾರಿ ಚಿತ್ರದುರ್ಗ, ಪ್ರದೇಶಗಳು ಇವರ ಗಮನ ಸೆಳೆದಿದ್ದವು. ಕ್ರಿ.ಶ.೧೦೬೩ರಲ್ಲಿ ಆಳಿದ ಎರೆಯಂಗನು ಪಾಂಡ್ಯರಾಜ ಇರುಕ್ಕೆವೇಲನ ಮಗಳನ್ನು ಮದುವೆಯಾಗಿದ್ದನು. ಆನಂತರ ಅವನ ಮಗ ಒಂದನೆಯ ಬಲ್ಲಾಳನು ತನ್ನ ಸಹೋದರ ಬಿಟ್ಟಿದೇವನೊಡನೆ ಉಚ್ಚಂಗಿ ಪಾಂಡ್ಯರ ಮೇಲೆ ಯುದ್ಧ ಮಾಡಿ ಅವರ ಸಂಪತನ್ನು ಸೂರೆ ಮಾಡಿದನಂತೆ. ಮುಂದೆ ವಿಷ್ಣುವರ್ಧನನೆಂದು ಪ್ರಸಿದ್ಧನಾದ ಬಿಟ್ಟದೇವನು ಈ ಜಿಲ್ಲೆಗಳ ಕೆಲವೊಂದು ಭಾಗಗಳನ್ನು ಗೆದ್ದುಕೊಂಡನು.ಇವನು ದುಮ್ಮಿಯ ಬಳಿ ನಡೆದ ಯುದ್ಧದಲ್ಲಿ ಉಚ್ಚಂಗಿ ಪಾಂಡ್ಯರನ್ನು ಸೋಲಿಸಿ, ನೊಳಂಬವಾಡಿಗೊಂಡ ಎಂಬ ಬಿರುದಿಗೆ ಪಾತ್ರನಾದನು. ಮುಂದೆ ಬಳ್ಳಾರಿಯನ್ನು ಗೆದ್ದು, ತುಂಗಭದ್ರೆಯನ್ನು ದಾಟಿ ಕುಮ್ಮಟದ ಕೋಟೆಯನ್ನು ವಶಪಡಿಸಿಕೊಂಡನು. ಪ್ರಸ್ತುತ ಗುಡೇಕೋಟೆ ಪ್ರದೇಶವು ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳ ಗಡಿಭಾಗದಲ್ಲಿದ್ದು, ಇವೆರಡೂ ಜಿಲ್ಲೆಗಳಲ್ಲಿ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಸಿಕ್ಕಿವೆ. ಇವೆರೆಡೂ ಜಿಲ್ಲೆಗಳು ನೊಳಂಬವಾಡಿಯ ಪ್ರದೇಶಗಳಾಗಿದ್ದು ಈ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದವು. ಗುಡೇಕೋಟೆ ಪ್ರದೇಶದ ಹತ್ತಿರದಲ್ಲಿರುವ ಸಿದ್ಧಾಪುರ (ಮೊಳಕಾಲ್ಮೂರು ತಾ)ದಲ್ಲಿ ಹೊಯ್ಸಳರ ಕಾಲಕ್ಕೆ ಸಂಬಂಧಿಸಿದ (೧೨೧೫) ವೀರಗಲ್ಲು ಆ ಕಾಲದ ಸಾಮಾಜಿಕ ಪದ್ಧತಿಯೊಂದನ್ನು ಕುರಿತು ಸಾರುತ್ತದೆ.[೨೭] ಇಮ್ಮಡಿ ಬಲ್ಲಾಳನು ಆನೆಗೊಂದಿ ಕೋಟೆಯನ್ನು ಆಕ್ರಮಿಸಿ ಅಲ್ಲಿ ವಿಜಯನಗರ ಎಂಬ ಪಟ್ಟಣವನ್ನು ನಿರ್ಮಿಸಿದನ್ನು ಹೊನ್ನಮ್ಮ ಎಂಬುವಳು ಈ ಸಂದರ್ಭದಲ್ಲಿ ಆತ್ಮಾರ್ಪಣೆ ಮಾಡಿಕೊಂಡ ಅಪರೂಪದ ಘಟನೆ ನಡೆಯುತ್ತದೆ. ಹುಲಿವಾನ ಸಾವಸ್ತನ ತಾಯಿ ಹೊನ್ನಕ್ಕೆ ನಾಗಕಿತ್ತಿಯ ಮರಣ ಹೊಂದಲು, ಹೊನ್ನಿಯು ತನ್ನ ಒಡತಿಗಾಗಿ ಆತ್ಮಾರ್ಪಣೆ ಮಾಡಿಕೊಂಡಳೆಂದು ಈ ಶಾಸನದಿಂದ ವಿದಿತವಾಗುವುದು. ಈ ಅವಧಿಯಲ್ಲಿ ಇಂತಹ ಆತ್ಮಬಲಿ ಪ್ರಕರಣಗಳು

ಆಚರಣೆಯಲ್ಲಿದ್ದವು ಎಂದು ತಿಳಿಯುತ್ತದೆ. ಅದಲ್ಲದೆ, ಆಗಿನಕಾಲದಲ್ಲಿ ಕಂಪ್ಲಿಯು ನೊಳಂಬವಾಡಿಯ ಪ್ರಾಂತ್ಯದ ರಾಜಧಾನಿಯಾಗಿತ್ತು. ೨ನೇ ಬಲ್ಲಾನು ನೊಳಂಬವಾಡಿಯನ್ನು ಹಲವು ಬಾರಿ ವಶಪಡಿಸಿಕೊಂಡನಲ್ಲದೆ ತುಂಗಾಭದ್ರಾ ನದಿಯನ್ನು ಉತ್ತರದ ಗಡಿಯಾಗಿ ಮಾಡಿಕೊಂಡನು ಈ ಮೇಲಿನ ಅಂಶಗಳಿಂದ ಗುಡೇಕೋಟೆ ಪ್ರದೇಶವು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿರಬಹುದು ಎಂದು ಊಹಿಸಬಹುದು.

ಹೊಸಮಲೆ ದುರ್ಗದ ಅರಸರು(ನಾಯಕರು): ಕಂಪಿಲರಾಯನು ಕ್ರಿ.ಶ.೧೩೨೦ರಲ್ಲಿ ಸ್ವತಂತ್ರನಾದನು ದೇವಗಿರಿಯ ಸೇವುಣರ ರಾಜ್ಯವು ಮಲ್ಲಿಕಾಫರನ ದಾಳಿಗೆ ತುತ್ತಾಗಿ ನಾಶವಾಯಿತು. ಮಲ್ಲಿಕಾಫರನು ದ್ವಾರಸಮುದ್ರ ಮತ್ತು ದೇವಗಿರಿಗಳನ್ನು ಕೊಳ್ಳೆ ಹೊಡೆದುಕೊಂಡು ಹೋದನು. ಸೇವುಣರ ಸಾಮಂತ ಅರಸನಾಗಿದ್ದ ಕಂಪಿಲರಾಯ ಮಲ್ಲಿಕಾಫರನು ಅತ್ತ ಹೋಗುತ್ತಲೇ ಇತ್ತ ಸ್ವತಂತ್ರನೆಂದು ಸಾರಿಕೊಂಡನು. ಈತನ ರಾಜಧಾನಿಗಳಲ್ಲಿ ಒಂದಾದ ಹೊಸಮಲೆದುರ್ಗವು ಸಂಡೂರು ಸೀಮೆಯಾಗಿದ್ದು, ಗುಡೇಕೋಟೆ ಪ್ರದೇಶವು ಈ ಸೀಮೆಯ ಹತ್ತಿರದಲ್ಲಿದೆ. ಅದಲ್ಲದೆ ಗುಡೇಕೋಟೆ ಗಡಿಯಾಂಕ ಭೀಮನು ಕುಮಾರರಾಮನ ಸ್ನೇಹಿತನಾಗಿದ್ದು, ಗುಡೇಕೋಟೆ ಪಾಳೆಯಗಾರರು ಕುಮಾರರಾಮನ ವಂಶಸ್ಥರೆಂದು ಹೇಳಿಕೊಂಡಿರುವರು. ಇದನ್ನು ಗಮನಿಸಿದಾಗ, ಗುಡೇಕೋಟೆ ಪ್ರದೇಶವು ಕುಮ್ಮಟದುರ್ಗದ ಅರಸರ ಅಧೀನದಲ್ಲಿದ್ದು, ಅವರ ಆಡಳಿತಕ್ಕೆ ಒಳಪಟ್ಟಿರಬಹುದೆಂದು ಗುರುತಿಸಬಹುದು.

ವಿಜಯನಗರ : ದಕ್ಷಿಣ ಭಾರತದಲ್ಲಿ ಹದಿನಾಲ್ಕನೆಯ ಶತಮಾನದ ಪೂರ್ವಾರ್ಧದಲ್ಲಿ ವಿಜಯನಗರದ ಸ್ಥಾಪನೆ ಸಂಸ್ಕೃತಿ ಚರಿತ್ರೆಯಲ್ಲಿ ಅದ್ವಿತೀಯವಾದ ಘಟನೆ. ಅಂದಿನ ರಾಜಕೀಯ, ಧಾರ್ಮಿಕ ಜೀವನದ ಸಂದಿಗ್ಧ ಪರಿಸ್ಥಿತಿಯಲ್ಲಿ ಈ ಸಾಮ್ರಾಜ್ಯವು ಹುಟ್ಟಿಕೊಂಡಿತು. ಈ ವೇಳೆಗಾಗಲೇ ಉತ್ತರ ಭಾರತವು ಸಂಪೂರ್ಣವಾಗಿ ಮುಸ್ಲಿಮರ ಆಳ್ವಿಕೆಗೆ ಒಳಪಟ್ಟಿತ್ತು. ಈ ಮುಸ್ಲಿಮರ ಆಕ್ರಮಣಗಳ ಆಘಾತಗಳನ್ನು ತಡೆದು ನಿಂತವನೆಂದರೆ, ಇಡೀ ದಕ್ಷಿಣ ಭಾರತದಲ್ಲಿ ಹೊಯ್ಸಳರ ೩ನೆಯ ಬಲ್ಲಾಳನೊಬ್ಬನೆ. ಈತನು ಈ ಘೋರ ವಿಪತ್ತನ್ನೆದುರಿಸಿ ಅದರಿಂದ ಮುಂದಾಗಬಹುದಾದ ಪರಿಣಾಮವನ್ನು ಊಹಿಸಿದನು. ಅವನು ಇಳಿವಯಸ್ಸಿನಲ್ಲಿ ತನ್ನೊಬ್ಬನಿಂದಾಗದ ಕಾರ್ಯಕ್ಕೆ ಇತರರಿಗೆ ಬೆಂಬಲವಾಗಿ ನಿಲ್ಲಬೇಕೆಂದು ಪ್ರಯತ್ನಿಸಿದನು. ದೇಶದ ತರುಣರನ್ನು ಹುರಿದುಂಬಿಸಿ ದೇಶ, ಧರ್ಮ, ರಕ್ಷಣೆಗೆ ಮುಂದಾಗುವಂತೆ ಪ್ರೇರೇಪಿಸಿದನು. ಈತನ ಕಾರ್ಯದಲ್ಲಿ ಸಂಗಮವಂಶದ ಹಕ್ಕಬುಕ್ಕ ಮತ್ತು ಅವರ ಮೂವರು ಬಂಧುಗಳು ಮತ್ತಿತರು, ಈ ಕಾರ್ಯದಲ್ಲಿ ಅವನ ಸಹಕಾರಿಗಳಾದರು. ಈ ವೇಳೆಗಾಗಲೇ ಮಲ್ಲಿಕಾಫರ್ ದಕ್ಷಿಣದ ಕಡೆಗೆ ದಂಡೆತ್ತಿ ಬಂದು ವಿಜಯ ದುಂದುಭಿಯನ್ನು

ಬಾರಿಸತೊಡಗಿದನು. ದೆಹಲಿಯ ಸುಲ್ತಾನ್ ಮಹಮ್ಮದ್ ಬಿನ್ ತುಘಲಕ್ ನ ಕಾಲದಲ್ಲಿ ಈ ಬಲೆ ಇನ್ನೂ ಹೆಚ್ಚಿತ್ತು. ದೇಶವೆಲ್ಲಾ ಅವ್ಯವಸ್ಥಿತವಾಯಿತು. ಅತ್ಯಂತ ಸುಸಂಘಟಿತವೂ ಸುಸಜ್ಜಿತವಾದ ರೀತಿಯಲ್ಲಿ ಮಹಮ್ಮದ್ ಬಿನ್ -ತುಘಲಕ್‌ನ ದಾಳಿಗಳನ್ನು ಎದುರಿಸಿದೇ ಹೋಗಿದ್ದರೆ ದಕ್ಷಿಣ ಭಾರತವು ಮಹಮ್ಮದೀಯರ ವಶವಾಗುತ್ತಿದ್ದುದರಲ್ಲಿ ಸಂದೇಹವೇ ಇಲ್ಲ. ಈ ಅಪಾಯವನ್ನರಿತು ಅದನ್ನು ಎದುರಿಸಲು ಹಿಂದೂ ಸಾಮ್ರಾಜ್ಯವೊಂದರ ಅಗತ್ಯತೆ ಅನಿವಾರ್ಯವಾಯಿತು.

ಈ ಸಾಂದರ್ಭಿಕ ಬಿಕ್ಕಟ್ಟನ್ನು ನಿವಾರಿಸುವಲ್ಲಿ, ವಿಜಯನಗರ ಸಾಮ್ರಾಜ್ಯವು ಹಂಪೆಯಲ್ಲಿ ಸ್ಥಾಪನೆಯಾಯಿತು. ಕ್ರಿ.ಶ.೧೩೩೬ ರಿಂದ ೧೫೬೫ರ ವರೆಗೆ ನಾಲ್ಕು ವಂಶಗಳು ಆಳ್ವಿಕೆ ನೇರವಾಗಿ ಆಳಿ ಇಲ್ಲವೇ ಅವರ ಸಾಮತರಿಂದ ಆಳಿಸಿ ಇಂದಿನ ಪ್ರದೇಶಗಳನ್ನು ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು. ಈ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹಂಪಿಯು ಗುಡೇಕೋಟೆ ಪ್ರದೇಶ ಹತ್ತಿರದಲ್ಲಿದೆ. ಅದಲ್ಲದೆ ಹತ್ತನೆಯ ಶತಮಾನದಿಂದಲೇ ಕೊಟ್ಟೂರು ಒಂದು ಪ್ರಮುಖಪಟ್ಟವಾಗಿದ್ದು ಇದೊಂದು ಸಾಂಸ್ಕೃತಿಕ ಹಾಗೂ ರಾಜಕೀಯ ಕೇಂದ್ರವಾಗಿರುವುದರ ಬಗ್ಗೆ ಕೋಗಳಿ ನಾಡಿನಲ್ಲಿ ದೊರೆತ ಶಾಸನಗಳು ಸಾಕಷ್ಟು ಪುರಾವೆಗಳನ್ನು ಒದಗಿಸುತ್ತವೆ. ಕೊಟ್ಟೂರು ಮೊದಲು ಹನ್ನೆರಡು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿರುವರೊಂದಿಗೆ ಕೋಗಳಿ ನಾಡಿನ ರಾಜನ ವಾಸಸ್ಥಾನವಾಗಿತ್ತು. ಮುಂದೆ ಈ ಅರಸರ ಕಾಲದಲ್ಲಿ ಕೊಟ್ಟೂರು ಕೋಗಳಿ ನಾಡು ಮೆರೆದದ್ದು ಕೊಟ್ಟೂರಿನ ಶಾಸನಗಳಲ್ಲಿ ವ್ಯಕ್ತಗೊಂಡಿದೆ.[೨೮] ಈ ಗುಡೇಕೋಟೆ ಪ್ರದೇಶವು ಕೋಗಳಿ ನಾಡಿಗೆ ಸೇರಿದ್ದು, ಮುಂದೆ ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ಕಿರು ಪ್ರಾಂತವಾಗಿತ್ತಲ್ಲದೆ ಅರಸರಿಂದ ನಿಯೋಜಿತನಾದ ಪ್ರತಿನಿಧಿ ಇಲ್ಲಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ಅದಲ್ಲದೆ ಈ ಪ್ರದೇಶವನ್ನು ಕೃಷ್ಣದೇವರಾಯನ ಕಾಲದಲ್ಲಿ ಗುಡೇಕೋಟೆ ಸೀಮೆಗೆ ಕೊಟ್ಟ ವಿಚಾರವು ಕೈಫಿಯತ್ತುಗಳಿಂದ ತಿಳಿದು ಬರುತ್ತದೆ. ನಂತರ ೧೫೬೫ರಲ್ಲಿ ಜರುಗಿದ ತಾಳಿಕೋಟೆ ಯುದ್ಧನಂತರ ಈ ಭಾಗವು ಬಿಜಾಪುರದ ೧ನೇ ಅಲಿ ಅದಿಲ್ ಷಾ (೧೫೬೮)ಗೆ ವಶವಾಗುತ್ತದೆ. ಅನಂತರ ಇಲ್ಲಿಯ ಪಾಳೆಯಗಾರರು ರಾಜಕೀಯ ಪ್ರಾಬಲ್ಯವನ್ನು ಬೆಳೆಸಿಕೊಂಡು ಅದಿಲ್ ಷಾಗಳಿಗೆ ಅಧೀನರಾಗಿ ಈ ಭಾಗದ ಆಡಳಿತ ನಡೆಸುತ್ತಾರೆ. ಬಿಜಾಪುರ ಸುಲ್ತಾನನು ಕ್ರಿ.ಶ.೧೬೭೦ರಲ್ಲಿ ಈ ಪ್ರದೇಶಗಳನ್ನು ಶಿವಾಜಿಗೆ ಬಳುವಳಿಯಾಗಿ ನೀಡಿದ ಎಂಬುದು ಚರಿತ್ರೆಯಿಂದ ತಿಳಿದುಬರುತ್ತದೆ.

ಶಿವಾಜಿಯ ಮರಣದ ನಂತರ ಕ್ರಿ.ಶ.೧೬೮೦ರಲ್ಲಿ ಇಡೀ ದಕ್ಷಿಣ ಭಾರತವು ಔರಂಗಜೇಬನ ವಶವಾಯಿತು.[೨೯] ಆದರೆ ದಕ್ಷಿಣ ಭಾರತದ ಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಲು ಔರಂಗಜೇಬನಿಗೆ ಸಾಧ್ಯವಾಗಲಿಲ್ಲ. ಇವನ ಆಳ್ವಿಕೆ ಕಾಲದಲ್ಲಿ ಈ ಪ್ರದೇಶದ ಪಾಳೆಯಗಾರರು ಹೆಚ್ಚು

ಪ್ರಬಲರಾದರು. ಈ ಗುಡೇಕೋಟೆಯ ಪಾಳೆಯಗಾರರು ಸುಮಾರು ೨೦೦ ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದಾರೆ.

ಮೈಸೂರಿನ ಹೈದರಾಲಿಯು ಗುಡೇಕೋಟೆಯ ಮೇಲೆ ದಾಳಿ ನಡೆಸಿ ತನ್ನ ವಶಕ್ಕೆ ತೆಗೆದುಕೊಂಡನು. ಮುಂದೆ ಅವನ ಮಗನಾದ ಟಿಪ್ಪುಸುಲ್ತಾನ್ ೧೭೮೬ರಲ್ಲಿ ಆದವಾನಿ ರಾಯದುರ್ಗ, ಹರಪನಹಳ್ಳಿ ಮುಂತಾದ ಪಾಳೆಯಗಾರರನ್ನು ಸೋಲಿಸಿ ತನ್ನ ಅಧಿಪತ್ಯದೊಳಗೆ ಸೇರಿಸಿಕೊಂಡನು. ಒಟ್ಟಾರೆ ಗುಡೇಕೋಟೆ ಪ್ರದೇಶವು ೧೮ನೇ ಶತಮಾನದ ಕೊನೆಯ ಭಾಗದಲ್ಲಿ ಹೈದರಾಲಿ ಟಿಪ್ಪುಸುಲ್ತಾನರ ವಶದಲ್ಲಿತ್ತು.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ, ಹೈದರಾಬಾದಿನ ನಿಜಾಮ್ ಮತ್ತು ಮರಾಠರು ಒಪ್ಪಂದ ಮಾಡಿಕೊಂಡು ಒಟ್ಟಾಗಿ ಟಿಪ್ಪುಸುಲ್ತಾನನ ಮೇಲೆ ಕ್ರಿ.ಶ.೧೭೯೨ರಲ್ಲಿ ಆಕ್ರಮಣ ನಡೆಸಿದರು. ಯುದ್ಧದಲ್ಲಿ ಟಿಪ್ಪುಸುಲ್ತಾನ್ ಸೋತನು. ಇದರಿಂದಾಗಿ ಹರಪನಹಳ್ಳಿ ರಾಯದುರ್ಗ ಸಂಡೂರು, ಆಯಾ ಪಾಳೆಯಗಾರರಿಗೆ ಹಿಂತಿರುಗಿಸಲ್ಪಟ್ಟವು.[೨೦] ಉಳಿದ ಪ್ರದೇಶವು ನಿಜಾಮನ ವಶವಾಯಿತು. ಮುಂದೆ ೧೭೯೯ರಲ್ಲಿ ಟಿಪ್ಪುಸುಲ್ತಾನನ ಮೇಲೆ ಬ್ರಿಟಿಷರು ಆಕ್ರಮಣ ನಡೆಸಿದರು. ಈ ಯುದ್ಧದಲ್ಲಿ ಹೋರಾಟ ಮಾಡುತ್ತಾ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಹತನಾದನು. ಯುದ್ಧದ ನಂತರ ಒಪ್ಪಂದದಂತೆ ಗುಡೇಕೋಟೆ ಪ್ರದೇಶವು ಹೈದರಾಬಾದನ ನಿಜಾಮನ ವಶವಾಯಿತು.

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಗುಡೇಕೋಟೆ ಪ್ರದೇಶವು ಹೈದರಾಬಾದ್ ನಿಜಾಮನ ಅಧಿಪತ್ಯಕ್ಕೆ ಸೇರಿದ್ದು, ಕ್ರಿ.ಶ.೧೮೦೦ರಲ್ಲಿ ಸಹಾಯಕ ಸೈನ ಪದ್ಧತಿಯನ್ನು ಒಪ್ಪಿಕೊಂಡ ಹೈದರಾಬಾದ್ ನಿಜಾಮನು ಈ ಪ್ರದೇಶವನ್ನು ಸಂಭಾವನೆ ಬಾಬ್ತು ಬ್ರಿಟಿಷರಿಗೆ ಕಾಣಿಕೆ ನೀಡಿದನು. ನಂತರ ಬ್ರಿಟಿಷರು ಗುಡೇಕೋಟೆ ಪ್ರದೇಶವನ್ನು ಬಳ್ಳಾರಿ ಜಿಲ್ಲೆಗೆ ಸೇರ್ಪಡೆಸಿಕೊಂಡು, ಕೂಡ್ಲಿಗೆ ತಾಲೂಕಿಗೆ ಸೇರಿಸಿದರು. ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ಮದ್ರಾಸ್ ಪ್ರಾಂತಕ್ಕೆ ಸೇರಿಸಿಕೊಂಡರು. ಬಳ್ಳಾರಿ ಜಿಲ್ಲೆಯು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಾಗ ಅದರ ಪ್ರಥಮ ಕಲೆಕ್ಟರ್ ಆಗಿ ಥಾಮಸ್ ಮನ್ರೊ ಅಧಿಕಾರ ವಹಿಸಿಕೊಂಡನು. ಈ ಪ್ರದೇಶದಲ್ಲಿ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಬಂಡಾಯಗಳನ್ನೆಲ್ಲಾ ಇವನು ಹತ್ತಿಕ್ಕಿದನು. ಇವನು ಏಕರೂಪ ಆಡಳಿತವನ್ನು ಜಾರಿಗೆ ತಂದನು. ಹೀಗೆ ಬ್ರಿಟಿಷರು ಬಳ್ಳಾರಿ ಜಿಲ್ಲೆಯನ್ನು ಸುಮಾರು ೧೪೭ ವರ್ಷಗಳ ಕಾಲ ಆಳಿದರು. ಕ್ರಿ.ಶ.೧೮೦೦ ರಿಂದ ೧೮೫೮ರ ವರೆಗೆ ಈಸ್ಟ್ ಇಂಡಿಯಾ ಕಂಪನಿಯೂ ತದನಂತರ ಬ್ರಿಟಿಷ್ ಚಕ್ರಾಧಿಪತ್ಯವು ಬಳ್ಳಾರಿ ಜಿಲ್ಲೆಯನ್ನು ಆಳಿತು.

೧೯೪೭ರಲ್ಲಿ ಸ್ವಾತಂತ್ರ್ಯ ಬಂದ ನಂತರ ಬಳ್ಳಾರಿ ಪ್ರದೇಸವು ಮೈಸೂರು ರಾಜ್ಯಕ್ಕೆ ಸೇರಿತ್ತು ೧೯೫೩. ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯ್ತಿಗಳ ಅಧಿಕಾರ

ವಿಕೇಂದ್ರಿಕರಣಗಳಿಂದ ಫಲಿತಾಂಶ ಕಂಡುಕೊಂಡ ಗುಡೇಕೋಟೆ ಪ್ರದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದೆ.

ಟಿಪ್ಪಣಿಗಳು

೦೧. ನಾಡ ಕಛೇರಿ ದಾಖಲಾತಿ ಪ್ರಕಾರ

೦೨. ಅದೇ,

೦೩. ಸೂರ್ಯನಾಥ ಯು.ಕಾಮತ್(ಸಂ), **ಕರ್ನಾಟಕ ರಾಜ್ಯ ಗ್ಯಾಸೆಟಿಯರ್**, ಭಾಗ ೨, ೧೯೮೪, ಪು.೪೮೬.

೦೪. ಶ್ರೀನಿವಾಸ ಪಿ.ವಿ. ಮತ್ತು ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ**, ೧೯೭೬, ಪು.೩.

೦೫. **ಕರ್ನಾಟಕ ಪರಂಪರೆ**, ಮೈಸೂರು ರಾಜ್ಯ ಸರ್ಕಾರ, ೧೯೭೦, ಪು.೧೧೧.

೦೬. ಸ್ಥಳೀಯರ ಪ್ರಕಾರ.

೦೭. Macline C.D., Manual of the Administration, Vol.III, 1993, ಪು.೨೧೨.

೦೮. ಚನ್ನಬಸಪ್ಪ ಪಾಟೀಲ, **ಬಳ್ಳಾರಿ ಜಿಲ್ಲೆಯ ಶಾಸನಗಳು**, ಭಾಗ ೨, ೧೯೯೭, ಪು.೧೬೪.

೦೯. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಪು.೪೦೬.

೧೦. ಸುಂದರ ಅ.(ಸಂ), **ಕರ್ನಾಟಕ ಚರಿತ್ರೆ ಸಂಪುಟ ೧**, ೧೯೯೭, ಪು.೨೧.

೧೧. ರವಿಕುಮಾರ್ ಎನ್.ಎಂ. ಮತ್ತು ವೃಷಬೇಂದ್ರಾಚಾರ್(ಸಂ), **ಮುನ್ನಡೆ ಕೂಡ್ಲಿಗಿ**, ೧೯೯೩, ಪುಟ.೯.

೧೨. ಶಿವತಾರಕ ಕೆ.ಬಿ., **ಕರ್ನಾಟಕ ಪುರಾತತ್ವ ನೆಲೆಗಳು**, ೨೦೦೧, ಪು.೩.

೧೩. ತಿಪ್ಪೇಸ್ವಾಮಿ ಎಚ್.(ಲೇ), **ಇತಿಹಾಸ ದರ್ಶನ, ಸಂಪುಟ ೧೬**, ೨೦೦೧, ಪು.೧.

೧೪. ಅದೇ, ಪು.೭.

೧೫. **ಶಿವತಾರಕ ಕೆ.ಬಿ.**, ಪು.೩೩೩.

೧೬. ತಿಪ್ಪೇಸ್ವಾಮಿ ಎಚ್.(ಲೇ), ಪು.೨.

೧೭. ಶಿವತಾರಕ ಕೆ.ಬಿ., ಪು.೧೯.

೧೮. ಶ್ರೀನಿವಾಸ ಎಂ.ವಿ. ಮತ್ತು ಲಕ್ಷ್ಮಣ್ ತೆಲಗಾವಿ(ಸಂ), ಚಂದ್ರವಳ್ಳಿ, ೧೯೭೬, ಪು.೨.

೧೯. ಅದೇ,

೨೦. ಕರ್ನಾಟಕ ಪರಂಪರೆ, **ಚಾರಿತ್ರಿಕ ಯುಗ**, ಪು.೧೧೭.

೨೧. ಸುಂದರ ಅ.(ಸಂ), **ಕರ್ನಾಟಕ ಚರಿತ್ರೆ** ೧೯೯೭, ಪು.೨೦೧.

೨೨. ನಾಗಭೂಷಣ ಎನ್.ಎಂ.(ಲೇ), **ಇತಿಹಾಸ ದರ್ಶನ, ಸಂಪುಟ** ೧೦, ೧೯೯೫, ಪು.೧೭೭.

೨೩. ರವಿಕುಮಾರ ಎನ್.ಎಂ.ಮತ್ತು ವೃಷಬೇಂದ್ರಚಾರ್(ಸಂ), **ಮುನ್ನಡೆಯ ಕೂಡ್ಲಿಗಿ**, ೧೯೯೮, ಪು.೧೦.

೨೪. ಶ್ರೀನಿವಾಸ ಪಿ.ವಿ. ಮತ್ತು ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ**, ೧೯೭೬, ಪು.೧೫.

೨೫. ವಿರೂಪಾಕ್ಷಿ, **ಬಳ್ಳಾರಿ ಜಿಲ್ಲೆಯ ಕಲೆಕ್ಟರುಗಳ ಆಳ್ವಿಕೆ ಒಂದು ಸಮೀಕ್ಷೆ** (ಅಪ್ರಕಟಿತ), ೧೯೯೫, ಪು.೬.

೨೬. ಅಶ್ವಥ್ ಡಿ.ಎಸ್., **ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ** (ಅಪ್ರಕಟಿತ), ೨೦೦೦, ಪು.೩೫.

೨೭. ಶ್ರೀನಿವಾಸ ಪಿ.ವಿ. ಮತ್ತು ಲಕ್ಷ್ಮಣ್ ತೆಲಗಾವಿ(ಸಂ), **ಚಂದ್ರವಳ್ಳಿ**, ೧೯೭೬, ಪು.೪೫.

೨೮. ರವಿಕುಮಾರ್ ಎನ್.ಎಂ. ಮತ್ತು ವೃಷಬೇಂದ್ರಚಾರ(ಸಂ), ಮುನ್ನಡೆಯ ಕೂಡ್ಲಿಗಿ, ೧೯೯೮, ಪು.೧೮.

೨೯. ಶೇಷಾದ್ರಿ ಬಿ.ಮತ್ತು ಚಂದ್ರಶೇಖರ ಟಿ.ಆರ್.(ಸಂ), ಬಳ್ಳಾರಿ ಜಿಲ್ಲೆಯ **ಸ್ವಾತಂತ್ರ್ಯ ಹೋರಾಟ**, ೧೯೯೮, ಪು.೧೯.

ಅಧ್ಯಾಯ ೩

ಗುಡೇಕೋಟೆ ಪಾಳೆಯಗಾರರು

೩.೧. ಗುಡೇಕೋಟೆ ಪಾಳೆಯಗಾರರ ಬಗೆಗಿನ ಆಕರ ಸಾಮಗ್ರಿಗಳು

೩.೧.೧. ಕೈಫಿಯತ್ತುಗಳು

೩.೧.೨. ಶಾಸನಗಳು

೩.೧.೩. ದಾಖಲೆ ಪತ್ರಗಳು

೩.೨. ಗುಡೇಕೋಟೆಯ ಪಾಳೆಯಗಾರರ ರಾಜಕೀಯ ಚರಿತ್ರೆ

೩.೧. ಗುಡೇಕೋಟೆ ಪಾಳೆಯಗಾರರ ಬಗೆಗಿನ ಆಕರ ಸಾಮಗ್ರಿಗಳು

ವಿಜಯನಗರ ಅರಸರ ಹೊಸ ಬಗೆಯ ಆಡಳಿತ ನೀತಿಯಿಂದಾಗಿ ಮಾಂಡಲೀಕರು ದೇಸಾಯಿಗಳು ಮತ್ತು ಪಾಳೆಯಗಾರರು ಪ್ರಭುತ್ವಕ್ಕೆ ಬಂದರು. ಪುನಃ ವಿಜಯನಗರ ಸಾಮ್ರಾಜ್ಯ ಕಟ್ಟುವ ಕನಸಿನಲ್ಲಿದ್ದ ಅರವೀಡು ವಂಶದ ಶ್ರೀರಂಗರಾಯ (ಕ್ರಿ.ಶ.೧೬೭೫)ನಿಗೆ ನಿಷ್ಠೆ, ಸಹಕಾರ ಬೆಂಬಲ ತೋರಿಸದೆ ಸ್ವಾತಂತ್ರ್ಯ ಹೊಂದಿ ಸಣ್ಣಸಣ್ಣ ರಾಜ್ಯಗಳನ್ನು ಕಟ್ಟಿಕೊಂಡರು. ಕಾರಣ ಇಂದಿನ ಕರ್ನಾಟಕದ ಉತ್ತರ ಭಾಗಗಳಾದ ಬಿಜಾಪುರ ಮತ್ತು ಗೋಲ್ಕಂಡಗಳು ಸುಲ್ತಾನರ ವಶವಾದವು. ಉಳಿದ ಭಾಗಗಳು ದೇಸಾಯಿಯರ ಸರಿನಾಯಕ ವಶದಲ್ಲಿದ್ದವು. ದಕ್ಷಿಣ ಕರ್ನಾಟಕದಲ್ಲಿ ಮೈಸೂರು ಒಡೆಯರು ಕೆಳದಿ ಅರಸರು ಚಿತ್ರದುರ್ಗ, ಹರಪನಹಳ್ಳಿ, ನಾಯಕನಹಟ್ಟಿ, ಜರಿಮಲೆ, ರಾಯದುರ್ಗ-ಹರತಿ, ಹಾಗಲವಾಡಿ, ಬಿದನೂರು, ಗುಡೇಕೋಟೆ, ಇನ್ನೂ ಮುಂತಾದ ಸಣ್ಣಸಣ್ಣ ರಾಜ್ಯಗಳು, ಪಾಳೆಯ ಪಟ್ಟುಗಳು ರಚನೆಗೊಂಡವು. ಈ ಪಾಳೆಯಪಟ್ಟುಗಳ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳು ವಿವರವಾಗಿ ಲಭ್ಯವಾಗುವುದಾಗಲಿ ಅಥವಾ ಸಮಗ್ರ ಅಧ್ಯಯನಗಳಿಂದ ಇವುಗಳ ಸ್ಥಿತಿಗತಿ ಕುರಿತಾದ ಚಾರಿತ್ರಿಕ ಗ್ರಂಥಗಳಲ್ಲಿ ರಚನೆಗೊಂಡಿಲ್ಲದಿರುವುದು ಆಯಾ ಪಾಳೆಯ ಪಟ್ಟುಗಳ ಬಗ್ಗೆ ಅಧ್ಯಯನ ಮಾಡುವವರಿಗೆ ಬಹಳಷ್ಟು ಸಮಸ್ಯೆಯಾಗಿ ತಲೆದೋರಿದೆ. ಆದರೂ ಜನಪದರ ಕಥೆ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಸ್ಮಾರಕಗಳಲ್ಲಿ, ಕೈಫಿಯತ್ತುಗಳಲ್ಲಿ ಹಾಗೂ ಕೈಬರಹದ ದಾಖಲೆಗಳಲ್ಲಿ ಕೆಲವೊಂದು ವಿಷಯಗಳು ತಿಳಿದು ಬರುತ್ತವೆ. ಪ್ರಸ್ತುತ ಗುಡೇಕೋಟೆ ಪಾಳೆಯಗಾರರ ರಾಜಕೀಯ ಚರಿತ್ರೆಗೆ ಸಂಬಂಧಪಟ್ಟಂತಹ ಆಕರಗಳನ್ನು ಈ ಕೆಳಗಿನಂತೆ ವಿಂಗಡಿಸಿಕೊಳ್ಳಲಾಗಿದೆ.

[illegible]

೩.೧.೧. ಕೈಫಿಯತ್ತುಗಳು

ಶ್ರೀಕೊಮಾರ ದೇವರ ಕ್ಷೇತ್ರದ ಕೈಫಿಯತ್ತು[೧] ಹಿರೇಹಾಳು ಕೈಪಿಯತ್ತು[೨] ದರೋಜಿ ಗ್ರಾಮದ ಕೈಫಿಯತ್ತು[೩], ಅಂತಾಪುರ ಕೈಫಿಯತ್ತು[೪] ಇವುಗಳಲ್ಲಿ ಕಂಡುಬರುವ ಗುಡೇಕೋಟೆ ಪಾಳೆಯಗಾರರ ಕುರಿತಾದ ಮಾಹಿತಿಯನ್ನು ಈ ಕೆಳಗಿನಂತೆ ಸಂಗ್ರಹಿಸಬಹುದಾಗಿದೆ.

ವಿಜಯನಗರ ಕೊನೆಯ ಅರಸು ಮನೆತನದವರು ತಮ್ಮ ಸುತ್ತಮುತ್ತಲಿನ ಪಾಳೆಯಗಾರರನ್ನು ಅಹ್ವಾನಿಸಿ ತಾವು ಜಯಿಸಿತಂದಂತಹ ಸಂಪತ್ತಿನಲ್ಲಿ ಸ್ವಲ್ಪ ಭಾಗವನ್ನು ಕೆಲವು ಮಂದಿಗೆ ಕೊಟ್ಟು ಒಪ್ಪಂದ ಮಾಡಿಕೊಳ್ಳುವುದರ ಮೂಲಕ ಗೌರವ ಮರ್ಯಾದೆಗಳನ್ನು ನೀಡಿದರು. ಗುಡೇಕೋಟೆ ಪಾಳೆಯಗಾರರಿಗೂ ಈ ಸೌಲಭ್ಯ ಲಭಿಸಿತ್ತು. ಈ ಪಾಳೆಯಗಾರರ ಮೂಲ ಕಂಪಲಿಯ ಕುಮಾರರಾಮನ ವಂಶಜರೆಂದು ತಿಳಿದು ಬರುತ್ತದೆ. ತಮ್ಮನ್ನು ಮರಳಿನವರೆಂದು ಕರೆದುಕೊಂಡಿದ್ದು ಗುಡೇಕೋಟೆಯ 'ಗಡಿಯಾಂಕ ಭೀಮ' ಈ ವಂಶದಲ್ಲಿ ಪ್ರಬಲವಾಗಿ ಮತ್ತು ಮೂಲ ಪರುಷನೆಂಬಂತೆ ಕಂಡುಬರುತ್ತಾನೆ. ಶಕವರ್ಷ ೧೫೫೪ (ಕ್ರಿ.ಶ.೧೬೩೨)ನೆಯ ನಂದನ ಸಂವತ್ಸರದಲ್ಲಿ ಗುಡೇಕೋಟೆ, ಸಂಡೂರು, ಬಾಂಡ್ರವಿಗಳನ್ನು ದೊರೆಗಳಾದ ಬೊಮ್ಮಂತ ರಾಜ, ಜಟಿಂಗರಾಜು ಕೋಟೆ ಕಟ್ಟಿ ರಾಜ್ಯ ಸ್ಥಾಪಿಸಿ ಆಳ್ವಿಕೆ ನಡೆಸಿದ್ದರು. ಇದಕ್ಕೆ ಮುನ್ನ ಹಿರೇಬೊಮ್ಮಂತರಾಜನು ಕೃಷ್ಣದೇವರಾಯನನ್ನು ಅಂದು ಕೇಳಿಕೊಂಡಿದ್ದೇನೆಂದರೆ; ಪೂರ್ವದಾರಭ್ಯವಾಗಿ ನಮಗೆ ಕಾವಲಿ, ನಾಡ ತಳವಾರಿಕೆಯನ್ನು ದಯಾಪಾಲಿಸ ಬೇಕೆಂದಾಗ ಅವನು ಕೆಲವು ತಳವಾರಿಗೆ ಸ್ವಾಸ್ತಿ ಗ್ರಾಮಗಳನ್ನು ಜಹಗೀರಾಗಿ ನೀಡುತ್ತಾನೆ. ಇಲ್ಲಿ ಬರುವ ಬೊಮ್ಮಂತರಾಜ ಮತ್ತು ಕೃಷ್ಣದೇವರಾಯನ ಕಾಲಮಾನದಲ್ಲಿ ವ್ಯತ್ಯಾಸವಿದೆ. ಎಂದಾಗ ಅಳಿಯ ರಾಮರಾಯನು ಇದಕ್ಕೆ ಕಾರಣ ಕರ್ತೃವೆನ್ನುವುದೂ ಅಸ್ಪಷ್ಟ ಸಂಗತಿ. ಆಗ ವಿಜಯನಗರದ ಅರವೀಡು ವಂಶದ ೨ನೇ ವೆಂಕಟಪತಿ ದೇವರಾಯ ಆಳ್ವಿಕೆ ನಡೆಸುತ್ತಿದ್ದ. ಹೀಗಾಗಿ ಈ ಬಗ್ಗೆ ಇನ್ನಷ್ಟು ಆಧಾರಗಳ ಅಗತ್ಯವಿದೆ. ಜಾಗೀರು ಕೊಟ್ಟ ಗ್ರಾಮಗಳೆಂದರೆ ಉಜ್ಜನಿ, ಜರಿಮಲೆ, ಗುಡೇಕೋಟೆ, ಬಾಂಡ್ರಾವಿ, ಸಂಡೂರು ಮತ್ತು ಕುಡಿತಿನಿ. ಇವುಗಳನ್ನು ಪಾಲಿಸುತ್ತಾ ಇರುವಾಗ ಹಿರೇಬೊಮ್ಮಂತ ರಾಜನು ಈ ಗ್ರಾಮಗಳ ಶಿಥಿಲವಾದ ಕೋಟೆ ಕೊತ್ತಲಗಳನ್ನು ಕಟ್ಟಿಸಿ ಸಕಲ ಭೂಸ್ವಾಸ್ತಿಗಳು ನಡೆಸಿಕೊಳ್ಳುತ್ತ ಬಂದನು. ಈ ಮೇಲಿನ ಏಳು ಗ್ರಾಮಗಳನ್ನು ಜಾಗೀರು ಪಡೆದು ನಾಡತಳವಾರಿಕೆ ಕಾವಲಿ ಮಾಡಿಕೊಂಡು ಆತನು ಕೆಲವು ಕಾಲ ರಾಜ್ಯ ಆಳ್ವಿಕೆಯಲ್ಲಿರುವಾಗ ಅನೇಕ ಸಂಕಷ್ಟಗಳಿಗೊಳ ಗಾದನು. ಆತನಿಗೆ ಮಕ್ಕಳಿಲ್ಲದ ಕಾರಣ ಮನೆದೇವರಾದ ಜಟ್ಟಿಂಗರಾಯನ ಸೇವೆಯನ್ನು ಮಾಡಬೇಕೆಂದು ಬ್ರಾಹ್ಮಣರು ಹೇಳಿದರು. ನಂತರ ಆತನಿಗೊಂದು ದಿನ ಸ್ವಪ್ನದಲ್ಲಿಯೇ ಅಷ್ಟಪುತ್ರರಾ ಗುತ್ತಾರೆಂದು (೮ ಜನ) ದೇವರು ಬಂದು ಹೇಳಿದರೆಂಬ ಐತಿಹ್ಯವಿದೆ. ಅದೇ ರೀತಿಯಾಗಿ ಏಳು ಜನ ಮಾತ್ರ

ಜನಿಸಿದರು. ಇನ್ನೊಬ್ಬ ಜನಿ ಮಕ್ಕಳಿಗೆ ಸಿಗಲಿಲ್ಲ. ಇವುಗಳು ಕಥಾರೂಪದಲ್ಲಿ ವ್ಯಕ್ತಪಟ್ಟರೂ ಅಂದಿನ ಸಮಾಜದ ಸಮಗ್ರ ಚಿತ್ರಣಕ್ಕೆ ಬೆಳಕು ಚೆಲುತ್ತವೆ. ಏಳು ಪ್ರತ್ಯೇಕವಾಗಿ ಬೇರೆ ಬೇರೆ ಹೆಸರುಗಳನ್ನು ಇಡಲಾಯಿತು. ಈ ರೀತಿ ಇರುವಾಗ ಬೊಮ್ಮಂತ ರಾಜನಿಗೆ ವಾರ್ಧಕ್ಯ (ಮುಪ್ಪು) ಪ್ರಾಪ್ತವಾಯಿತು. ಮಕ್ಕಳೇಳು ಮಂದಿ ದೇವರ ದಯದಿಂದ ಪ್ರಾಯಕ್ಕೆ ಬಂದರು. ಇವರಲ್ಲೊಬ್ಬನಿಗೆ ಮಾತ್ರ ಪಟ್ಟಕಟ್ಟಬಾರದೆಂದು ತಿಳಿದು ಏಳು ಮಂದಿಗೆ ಏಳು ಗ್ರಾಮಗಳನ್ನು ಕೊಟ್ಟು ಗ್ರಾಮಕ್ಕೊಬ್ಬನಂತೆ ಪಟ್ಟ ಮಾಡಲಾಯಿತೆಂದು ತಿಳಿಯುತ್ತದೆ.

ಗ್ರಾಮಗಳಿಗೆ ನೇಮಿಸಿದ ಅರಸರ ಪಟ್ಟ ಇಂತಿದೆ:

ಹಿರೇಬೊಮ್ಮಂತ ರಾಜ - ಕುಡುತಿನಿ

ಬಿಸಳರಾಜ - ಸೊಂಡೂರು

ರಾಜಪ್ಪನಾಯಕ - ಬಾಂಡ್ರಾವಿ

ಮಲ್ಲಿಕಾರ್ಜುನ - ಜರಿಮಲೆ

ವೀರಪ್ಪನಾಯಕ - ಉಜ್ಜನಿ

ಇಮ್ಮಡಿ ರಾಜನಾಯಕ - ಗುಡೇಕೋಟೆ ಮತ್ತು

ಚೆನ್ನರಾಜನಿಗೆ - ವಡ್ಡು, ದರೋಜಿ ಪ್ರದೇಶಗಳನ್ನು ಬಿಟ್ಟುಕೊಡಲಾಯಿತು.

ಇದೇ ಸಂದರ್ಭದಲ್ಲಿ ಆಗ ವಿಜಯನಗರದ ಕೃಷ್ಣದೇವರಾಯನ ಅಳಿಯ ರಾಮರಾಯ ಮುಸಲ್ಮಾನರಲ್ಲಿ ದ್ವೇಷ ಉಂಟಾಗುವಂತೆ ಆಳ್ವಿಕೆ ನಡೆಸುತ್ತಿದ್ದಾನೆಂದು ತಿಳಿಯುತ್ತದೆ. ಆಗ ಬೇಡರ ಮಳಲರ ಬೆಡಗಿನವನಾದ ಬೊಮ್ಮಣ್ಣ ನಾಯಕ ಇದಕ್ಕೆ ಹೊರತಾಗಿರಲಿಲ್ಲ. ತನ್ನ ಸಿಬ್ಬಂದಿ ಕಟ್ಟಿಕೊಂಡು ಕುಟಿಲತನದಿಂದ ಗ್ರಾಮಗಳನ್ನು ಹೊಕ್ಕನು. ನಾಗಲಪುರ ಬಾಂಡ್ರಾವಿ, ಸೊಂಡೂರು ಬಸಾಪುರ, ಚೋರುನೂರು ಇವುಗಳು ಇವರ ಅಧೀನಕ್ಕೊಳಪಟ್ಟಿದ್ದವು. ಆತನ ಮಗ ಚಿನ್ನಯರಾಜನು ಗ್ರಾಮಗಳ ವ್ಯವಹಾರ ನೋಡಿಕೊಳ್ಳುತ್ತಿದ್ದನು. ನಾಡ ಕುಲಕರ್ಣಿ ತಿಮ್ಮಪ್ಪಯ್ಯ ಎಂಬುವನು ಗುಡೇಕೋಟೆಗೆ ಹೋಗಿ ಸಂಸ್ಥಾನಿಕರ ಆಶ್ರಯ ಮತ್ತು ಆಸ್ತಿಯನ್ನು ಪಡೆದ ನಂತರ ಕುರುಗೋಡಿಗೆ ಮರಳಿ ಬರುತ್ತಾನೆ. ತಿಮ್ಮಪ್ಪಯ್ಯನ ಒಳಸಂಚಿನಿಂದ ಮತ್ತು ಈ ಮೇಲಿನ ಏಳು ಜನ ಸಹೋದರರ ಅನುಮತಿಯಿಂದ ದೇಸಾಯಿ ವೆಂಕಟಪ್ಪ ಎಂಬುವನು ಸಹ ಗುಡೇಕೋಟೆ ಹೋಗಿ ಸಂಸ್ಥಾನಿಕರಿಂದ ಆಸ್ತಿ ಇತ್ಯಾದಿ ಸವಲತ್ತು ಪಡೆದುಕೊಂಡು ಇವರ ಅಧೀನದಲ್ಲಿಯೇ ಕುರುಗೋಡುನಲ್ಲಿ ನೆಲೆಸಿದನು.

ಈ ಮೇಲಿನ ಎರಡು ಸಂದರ್ಭಗಳಲ್ಲಿ ಪಾಳೆಯಗಾರರ ಅಧಿಕಾರ ಅಂತಸ್ತು ಆಡಳಿತದ ಶಿಸ್ತು, ಪರೋಪಕಾರ ಮುಂತಾದ ವಿಷಯಗಳನ್ನು ತಿಳಿಯಬಹುದು.

೩.೧.೨. ಶಾಸನಗಳು

ಯಾವುದೇ ಕಾಲದ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ತಿಳಿದುಕೊಳ್ಳಲು ಶಾಸನಗಳು ಪ್ರಮುಖ ಪಾತ್ರ ವಹಿಸುತ್ತವೆ. ಅಳಿದು ಹೋದ ಚರಿತ್ರೆಯ ಕುರುಹುಗಳಾಗಿ ದೊರೆಯುವ ಶಾಸನಗಳು ಶತಮಾನಗಳಿಂದಲೂ ನಮ್ಮ ಸಾಂಸ್ಕೃತಿಕ ಜೀವಂತ ಪ್ರತೀಕಗಳಂತೆ ಕಂಡು ಬರುತ್ತವೆ. ಅಂದಿನ ರಾಜರು ದಾನ, ದತ್ತಿ, ಪುತ್ರ ಜನನ, ಶಿಕ್ಷೆ, ದಂಡ ಬಲಿ, ತೆರಿಗೆ, ವಿಜಯೋತ್ಸವ ಮುಂತಾದ ವಿಚಾರಗಳನ್ನು ಬಿತ್ತರಿಸಲು ಕಲ್ಲುಬಂಡೆಯ ಮೇಲೆ ಶಾಸನ ಬರೆಯಿಸುತ್ತಿದ್ದರು. ಗುಡೇಕೋಟೆ ಪಾಳೆಗಾರರಿಗೆ ಸಂಬಂಧಪಟ್ಟ ಮೂರು ಶಾಸನಗಳು ದೊರೆತಿದ್ದು ಅವುಗಳ ಮೂಲಪಾಠವು ಈ ಕೆಳಗಿನಂತಿದೆ. ಸಂಡೂರು ತಾಲೂಕಿನಲ್ಲಿರುವ ಚೋರುನೂರು ಗ್ರಾಮದ ವೀರಭದ್ರ ದೇವಸ್ಥಾನದ ಎದುರಿನಲ್ಲಿರುವ ಶಾಸನದ ವಿವರ.[೫]

೦೧. ನಳನಾಮ ಸಂವತ್ಸರ

೦೨. ದ ಆಶ್ವೀಜ ಶು ೧೦ಲು ರಾಜಶ್ರೀ

೦೩. ಗುಡೇಕೋಟೆ ಸಂಡೂರು ರಾ

೦೪. ಜಪನಾಯಕ ಆಯನವ ರಾ

೦೫. ಬೆಸ (ದಿ) ನಾಯಿಂದರಾ ಚೆ

೦೬. ಲಿಮಿ ನಾಯಕರು ಚಿಕ

೦೭. ದ ಕಾಮಿ ಸೀಮೆಗೆ ಹೆಡಿಗೆ

೦೮. ವಲು ಬಂಡಿ? ದೆರಿಗೆಮಿ

೦೯. ತ ಸಂತಾನ ಚಿಕ ಸೀಮೆ

೧೦. ಗೆ ತೆಕುಳತಿಯಲ

೧೧. ಸೂರ್ಯ ಚಂದ್ರಾಯಗಳುಳ್ಳವರಿ

೧೨. .....ಸುಖದಲಿ

ಅದೇ ಊರಿನ ಹನುಮಂತರಾಯ ದೇವಸ್ಥಾನದ ಬಾಗಿಲ ಎಡಗಡೆ ಗೋಡೆಗೆ ಒರಗಿರುವ ಕಲ್ಲಿನಲ್ಲಿರುವ ಶಾಸನವು[೬]

೦೧. ಪ್ರಮೋದೂತ ಸಂವತ್ಸರ

೦೨. ತ್ಸರದ ವೈಶಾಖ

೦೩. ಶುದ್ಧ ೧ ಯಿಲುರಾ

೦೪. ಜಶ್ರೀ ಸೊಂಡೂರು ಯಿಂಮಡಿ

೦೫. ರಾಜಪ್ಪನಾಯಕ ಅ

೦೬. ಯನವರ ಸಹೋ

೦೭. ದರ

೦೮. .....

೧೦. .....

೧೧. .....

೧೨. .....

೧೩. .....

ಹೀಗೆ ಹದಿಮೂರು ಸಾಲುಗಳಲ್ಲಿರುವ ಈ ಶಾಸನದ ಪಾಠವು ಅಪೂರ್ಣವಾದುದಾಗಿದೆ.

ಈ ಎರಡು ಶಾಸನಗಳು ಗುಡೇಕೋಟೆಯನ್ನು ಆಳಿದ ರಾಜಪ್ಪನಾಯಕನ ಕಾಲದಲ್ಲಿ ಅಂದರೆ ಕ್ರಿ.ಶ.ಸು. ೧೯೬೦ ರಲ್ಲಿ ಬರೆಸಲಾಗಿದೆ. ಮೊದಲನೆಯ ಶಾಸನವು ಗುಡೇಕೋಟೆ ಸಂಡೂರು ಭಾಗದ ಜನರಿಗೆ ರಾಜಪ್ಪನಾಯಕನ ಅಜ್ಞೆಯ ಮೇರೆಗೆ ಬಮ್ಮಿನಾಯಕನು ಆ ಭಾಗದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ (ಬಾಲತೆರಿಗೆ) ಮತ್ತು ಸತ್ತವರ ಮೇಲೆ ತೆರಿಗೆ ವಿಧಿಸಬಾರದೆಂದು ತಿಳಿಸುತ್ತಾನೆ.[೬] ಎರಡನೆಯ ಶಾಸನವು ಗುಡೇಕೋಟೆ ಮತ್ತು ಸಂಡೂರಿನ ಇಮ್ಮಡಿ ರಾಜಪ್ಪನಾಯಕ ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆ ಹೊರಡಿಸಿ ಅದರ ಪ್ರಕಾರ ಗುಡೇಕೋಟೆಯ ಆಡಳಿತದ ಸಮಯದಲ್ಲಿದ್ದಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ್ದನ್ನು ತಿಳಿಸುತ್ತದೆ.[೭] ಇನ್ನೊಂದು ಶಾಸನವು ಕೂಡ್ಲಿಗಿ ತಾಲೂಕಿನ ಕುದಿರಡವು ಗ್ರಾಮದ ಪ್ರವೇಶ ದ್ವಾರದ ಹತ್ತಿರವಿರುವ ಕ್ರಿ.ಶ.೧೭೫೨ರಲ್ಲಿ ರಚನೆಗೊಂಡಿರುವ ಶಾಸನದಲ್ಲಿ ಚಿನ್ನಯರಾಜನು ಹಿರೇ ಕುದಿರಡವು ಗ್ರಾಮವನ್ನು ಶೃಂಗೇರಿಯ ವಿರೂಪಾಕ್ಷ ವಿಧ್ಯಾಭಿನವ ಶಂಕರ ಭಾರತಿ ಸ್ವಾಮಿಗೆ ದಾನ ನೀಡಿದ್ದನ್ನು ತಿಳಿಸುತ್ತದೆ.[೮] ಒಟ್ಟಾರೆಯಾಗಿ ಗುಡೇಕೋಟೆಯ ಪಾಳೆಯಗಾರನಾದ ಇಮ್ಮಡಿ ರಾಜನಪ್ಪನಾಯಕನು ಆ ಭಾಗದ ಜನತೆಗೆ ನೀಡಿದ ಆಶ್ವಾಸನೆಯನ್ನು ಹಾಗೂ ಚಿನ್ನಯ್ಯ ರಾಜನು ನೀಡಿದ ದಾನದತ್ತಿಗಳನ್ನು ಈ ಶಾಸನಗಳು ತಿಳಿಸುತ್ತವೆ.

[illegible]

[illegible]

೩.೧.೩. ದಾಖಲೆ ಪತ್ರಗಳು

ಗುಡೇಕೋಟೆ ಪಾಳೇಗಾರರ ಇತಿಹಾಸವನ್ನು ತಿಳಿಯಲು ಅವರ ವಂಶಸ್ಥರಾದ ಕೃಷ್ಣವರ್ಮರಾಜ ಅವರನ್ನು ಸಂಪರ್ಕಿಸಿದಾಗ ಗುಡೇಕೋಟೆ ಪಾಳೇಯಗಾರರಿಗೆ ಸಂಬಂಧಪಟ್ಟ ಕೆಲವು ಕೈಬರಹ ಕಾಗದ ಪತ್ರಗಳನ್ನು ನೀಡಿದ್ದಾರೆ. ಅವುಗಳಲ್ಲಿರುವ ವಿಷಯವನ್ನು ಈ ಕೆಳಗಿನಂತೆ ನೋಡಬಹುದಾಗಿದೆ. ಇವುಗಳ ಮೂಲ ಪ್ರತಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ದಾಖಲೆ ಪತ್ರ-೧

ಶಾಲಿವಾಹನ ಶಕ ವರುಷ ೧೨೪೨ನೆಯ ಶ್ರೀಮುಖನಾಮ ಸಂವತ್ಸರದ ಮಾ.ರು.೧೦ (ದಶಮಿ)ಯಲ್ಲಿ ಹೊಸಮಲೆ ದುರ್ಗಕ್ಕೆ ಮುಮ್ಮಡಿ ಶಿಂಗ ಆತನ ಮಗ ಕಂಪಲಿರಾಯ ಆತನ ಮಗ ಕುಮಾರರಾಮ, ಆತನ ವಂಶಸ್ಥರು ಮುಮ್ಮಡಿ ನಾಯಕನಿಗೆ ನಾಲ್ಕು ಜನ ಗಂಡುಮಕ್ಕಳು. ಹೆಣ್ಣುಮಕ್ಕಳು ಇಬ್ಬರು ಸೇರಿ ಹೊಸಮಲೆಯನ್ನು ಬಿಟ್ಟು ಕುಮಾರ ರಾಮನಿಗೆ ಕಷ್ಟ ಬಂದೊದಗಲು, ಪ್ರಾಣದಿಂದ ಉಳಿಯಲು ಮೂಡ್ಲು ನೆಲ್ಲೂರು, ಸರ್ವಾಪಲ್ಲೆ ಮುಂತಾದ ದೇಶಗಳನ್ನು ತಿರುಗಿ ಕಷ್ಟಪಟ್ಟು ಅಲ್ಲಿಂದ ಬಂದು ಆದಿ ದೇವರು ಜಟಂಗಿ ರಾಮೇಶ್ವರನ ದರುಶನ ಮಾಡಿಕೊಂಡು, ದೇವಗಿರಿಗೆ ಪಶ್ಚಿಮಕ್ಕೆ ಸೋಮವಾರದ ಗುಡ್ಡ, ಬುದ್ಧಿವಂತನ ಗುಡ್ಡದ ಸಂದಿಗೆ ತಾಲಪ್ಪನಹಳ್ಳಿಯೆಂಬ ಗ್ರಾಮ ಕಟ್ಟಿಕೊಂಡು ಅನೇಕ ಕುರಿ ದನಗಳನ್ನು ಸಂಪಾದಿಸಿಕೊಂಡು ಯಿದ್ದರು. ಈ ನಾಲ್ವರು ಮಕ್ಕಳು ಉಗಾದಿ ಬೇಟೆಗೆ ಹೋಗಿ ನೀರು ಕಾಣದೆ ಬಹಳ ಕಷ್ಟಪಟ್ಟು ಬರೋದರೊಳಗೆ ಸ್ವಾನ ಹೋಗಿ ಭಾವಿವಳಗೆ ಮುಳುಗಿ ನೀರು ಕುಡಿದು ಬೇರುಯಿಡುತ್ತಾ ಬರೋದು ಕಂಡು ಇವರು ಅದೇ ಪಥದಲ್ಲಿ ಹೋಗಿ ಅವುದೇಗಳು ತೂರಿ ಭಾವಿ ಗೊತ್ತು ಮಾಡಿ ತಮ್ಮ ಗ್ರಾಮಕ್ಕೆ ಬಂದು ತಂದೆ ತಾಯಿಗಳಿಗೆ ಈ ವರ್ತಮಾನ ಹೇಳಿ ಕೆಲವು ದ್ರವ್ಯ ಸಾಹಿತ್ಯ ಮಾಡಿಕೊಂಡು ಅವು ಅವುದೇಗಳ ಕಡಿಸಿ ಯಂಗಡ ವುಡಿಸಲಾಗಿ ಬೋಳದೇವರ ಗುಡಿಯ ಮೇಲೆ ಕೋಟೆ ಕಟ್ಟಿಸಿಕೊಂಡು ಯಿರೋದರೊಳಗೆ ಹಿರೇರು ಮುಂತಾದವರು ಯಾ ಹೆಣ್ಣುಮಕ್ಕಳಿಗೆ ಒಬ್ಬರಿಗೂ ವರಯಿಲ್ಲದೆಯಿರಲಾಗಿ ಹಿರಿಯಾಕಿ ಕಾಮೇಶ್ವರಮ್ಮಗೆ ಸಾಕ್ಷಾತ್ ಪ್ರಭುವೇ ಎಂದು ಸ್ವಪ್ನಾವಸ್ಥೆಯಲ್ಲಿ ಹೋದ ಹಾಗೆ ಕಾಣಿಸಲಾಗಿ ಅಮ್ಮನವರಿಗೆ ಅದೇ ಚಿತ್ತಾಭೇದ್ಯದಿಂದ ಗರ್ಭೋತ್ಪತ್ತಿ ಆಯಿತು. ದಿನಚರಿ ಅಯ್ಯನವರು ಯಥಾಪ್ರಕಾರ ಬರೋಣ ಅಮ್ಮನವರು ಹಸ್ತಪಿಡಿದುಕೊಂಡು ನೀವು ಯಾರು ಯಂಬೊ ಹಾಗೆ ಕೇಳಿದರು. ಅಯ್ಯನವರು ಆಕಿಗೆ ಕರುಣಪ್ರಸಾದ ವಾಕ್ಯ ಬುದ್ಧಿಕೊಟ್ಟದ್ದು ಯಲೆ ಮರುಳೆ ನಿನ್ನಗೆ ಸಂಸ್ಥಾನವಾಗುತ್ತದೆ. ನಿನ್ನ ಗರ್ಭದಲ್ಲಿ ಗಂಡು ಶಿಶುವು ಆಗುತ್ತದೆ. ಆತನಿಗೆ ಮರುಳೆ ಬೊಮ್ಮಂರಾಯಂಬುವ ಹೆಸರುಯಿಡು ಯೆಂದು ಬುದ್ಧಿಕೊಟ್ಟು ಅಯ್ಯನವರು ಅದೃಶ್ಯವಾದರು. ಅದೇ ಪ್ರಕಾರ ಜನನವಾದಂತಾ ವುದ್ಧಾರವಾದರು.

ಯಿ ಹೆಣ್ಣುಮಕ್ಕಳು ಅಣ್ಣಂದಿರು ಯಿಂತಾ ಜನನ ವ್ಯಕ್ತಿಯಂ ಕೇಳಿ ಅಪಾರ ಸಂತೋಷಿತರಾಗಿ ಶ್ರೀ ಮಹದೇವನ ಕರುಣದಿಂದ ಹುಟ್ಟಿದಾತನೆಂದು ಪಟ್ಟಾಭಿಷೇಕವನ್ನು ಮಾಡಿಸಿ ಗುಡೇಕೋಟೆಯೆಂಬ ಹೆಸರುಯಿಟ್ಟುಕೊಂಡು ಇದ್ದರು. ಈ ಮರುಳೆಬೊಮ್ಮಣ್ಣನ ಗರ್ಭದಲ್ಲು ಪಾಪರಾಜು ಹುಟ್ಟಿದ. ಆತನ ಗರ್ಭದಲ್ಲಿ ಗಂಡ ಮುತ್ತಿರಾಜು ಆತನ ಗರ್ಭದಲ್ಲಿ ಜಟಂಗಿರಾಜು, ಆತನ ಗರ್ಭದಲ್ಲಿ ಶಿಪೂಜಾತಾತರಾಜು ಆತನ ಗರ್ಭದಲ್ಲಿ ತಮ್ಮಯ್ಯರಾಜು, ಆತನ ಗರ್ಭದಲ್ಲಿ ಗಂಡಳರಾಜು ಯಿವರ ಗರ್ಭದಲ್ಲಿ ರಾಮರಾಜು, ಯಿವರ ಗರ್ಭದಲ್ಲಿ ಬೊಮ್ಮಂತರಾಜು ಯಿವರ ಗರ್ಭದಲ್ಲಿ ಚಿನ್ನರಾಜು, ಯಿವರ ಗರ್ಭದಲ್ಲಿ ಜಟಿಂಗರಾಜು, ಬೊಮ್ಮಂತ ರಾಜು ಯಿಬ್ಬರಾದರು. ಜಟಿಂಗರಾಜರ ಗರ್ಭದಲ್ಲಿ ಯಿಮ್ಮಡಿ ಜಟಿಂಗರಾಜು, ಚಿನ್ನೇರಾಜು, ರಾಮರಾಜು, ಶಿವಪ್ಪರಾಜು, ಪೋಂಪಾಪತಿರಾಜು, ಬೊಮ್ಮಂತರಾಜು ಯಿವರಿಗೆ ಮನೆದೇವರು ಪಶ್ಚಿಮದ ಮಲ್ಲೇಶ್ವರ ಯೇಳುಧೂಳದ ವಿಗ್ರಹ ಬ್ರಮರಾದೇವಿ ಕೋಲು, ಲೀರಾಚೋಟಿ ವೀರಭದ್ರನ ಭಂಗಾರದ ಹಲಿಗೆ ಯೇಳು ಮಂದಿ ತಂದರು. ಗಂಥ ಮುತ್ತಿನ ಪಟ್ಟಿಗೆ ಕುಮಾರಸ್ವಾಮಿ ಬೊಮ್ಮಯ್ಯಲಿಂಗ, ಪ್ರತ್ಯೇಕ ಗುಡೇಕೋಟೆ ಹೋಬಳಿ ದೇವರು ನಂದಿಕೋಲು ಬಸವೇಶ್ವರ ಅರಮನೆಯಲ್ಲಿ ಪೂಜೆ, ಮೂಲದೇವರು ಜಟಂಗಿ ರಾಮೇಶ್ವರ ಕಂಬಿ ಕಾವಡಿ ವರುಣಾಚಲ ಶ್ರೀಶೈಲಕ್ಕೆ ಕೊಡೋಣವುಂಟು. ಜೋಳಿಗೆ ದಂಡಾಗ, ಅರಮನೆಯಲ್ಲಿ ಪೂಜೆ ಆಗಬೇಕು. ಪಟ್ಟಾಭಿಷೇಕ ಆಗುವಾಗ್ಗೆ ಲಿಂಗಧಾರಣೆ ಲಗ್ನದ ಕಾಲದಲ್ಲೂ ಹೆಣ್ಣುಮಕ್ಕಳಿಗೆ ಲಿಂಗಮುದ್ರೆ ದಾಳಿಯವರ ಬಿರುದಾವಳಿ ಬಸವನ ನಿಶಾನಿ ಭಾರಿನಿಗಳಮಾಯ ಮಾರ್ತಾಪು ಪೂರ್ವ ಮರುಳೆನವರ ವಂಶಾವಳಿ ನಿರ್ಣಯವೂ.... ಎಂದು ಸುದೀರ್ಘವಾದ ಚರಿತ್ರೆಯನ್ನು ಒಳಗೊಂಡ ಈ ದಾಖಲೆ ಪತ್ರವು ಗುಡೇಕೋಟೆ ಸಂಸ್ಥಾನದ ಸ್ಥಾಪನೆ ಮತ್ತು ಅನಂತರ ಬಂದ ಪಾಳೇಗಾರರ ವಂಶಾವಳಿಯನ್ನು ತಿಳಿಸುತ್ತದೆ.

ದಾಖಲೆ ಪತ್ರ ೨

ಶಕ ಸನ್ ೧೪೨೮ನೇ ಪ್ರಭವನಾಮ ಸಂವತ್ಸರದ ಕಾರ್ತಿಕ ಶುದ್ಧ ದ್ವಾದಶಿ ದಿವಸದಲ್ಲಿ ಮೂಲಪುರುಷ ಗಂಡಳನಾಯಕರು ಹುಟ್ಟು ಹಾಕಿಸಿ ೧೫ ವರುಷ ರಾಜ್ಯ ಅನುಭವಿಸಿದರು. ಗಂಡಳರಾಜರ ಮಕ್ಕಳು ಪೊನ್ನಪ್ಪ ರಾಜರು ೨೦ ವರುಷ ರಾಜ್ಯ ಆಳಿದರು. ಪೆನ್ನಪ್ಪನಾಯಕರ ಮಕ್ಕಳು ಪಾಪಳನಾಯಕರು ೧೭ ವರುಷ ರಾಜ್ಯವನ್ನಾಳಿದರು. ಪಾಪಳ್ಳಿ ನಾಯಕರ ಮಕ್ಕಳು ತಮ್ಮಯ್ಯ ರಾಜರು ೩೨ ವರುಷ ರಾಜ್ಯ ಆಳಿದರು. ರಾಮಪ್ಪನಾಯಕರ ಮಕ್ಕಳು ಬೊಮ್ಮಂತರಾಜರು ೩೬ ವರುಷ ರಾಜ್ಯವಾಳಿದರು. ಬೊಮ್ಮಂತರಾಜರ ಮಕ್ಕಳು ಚಿಂಗ್ಯೆಯ್ಯರಾಜರು ೧೨ ವರುಷ ರಾಜ್ಯವಾಳಿದರು. ಚಿಂಣ್ಯೆಯ್ಯರಾಜರ ಮಕ್ಕಳು ಜಟಿಂಗರಾಜರು ೪೬ ವರುಷ ರಾಜ್ಯ ಆಳಿದರು. ಜಟಿಂಗರಾಜರ ಮಕ್ಕಳು

[illegible]

[illegible]

ಸಂತಾನಗಳು : [illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಚಿತ್ರದುರ್ಗ

ರಾಮಪ್ಪನಾಯಕ (೧)

ಇಮ್ಮಡಿಬೊಮ್ಮಂತರಾಜು (೨) ..ಶ್ವರಪ್ಪ (೩)(೫) ವೆಂಕಟರಾಜು (೬) ಪಂಪಾಪತಿರಾಜು (೭) ಬೊಮ್ಮಂತರಾಜು (೪) ರಾಮರಾಜುಬೊಮ್ಮಂತರಾಜು (೯) ಕಾಕಯ್ಯರಾಜು(೧೦) ಚಿನ್ನಯ್ಯರಾಜು(೧೧) (೧೨) ಬೊಮ್ಮಂತಲಿಂಗಪ್ಪ (೧೩) ಬೊಮ್ಮಂತರಾಜು (೧೪)..ಶ್ವರಪ್ಪಇಮ್ಮಡಿಸದಾಶಿವರಾಜು (೧೫) ಜಟಿಂಗರಾಜು (೧೬) ಪಂಪಾಪತಿರಾಜು (೧೭)ಇಮ್ಮಡಿಕಾತಯ್ಯರಾಜು (೧೮)ಈ ಮೇಲಿನ ಆಕರಗಳು ಗುಡೇಕೋಟೆ ಪಾಳೆಯ ಪಟ್ಟಿನ ಸ್ಥಾಪನೆ ಹಾಗೂ ತದನಂತರ ಆಳ್ವಿಕೆ ಮಾಡಿದ ಪಾಳೇಯಗಾರರ ಬಗೆಗೆ ತಿಳಿಸುತ್ತವೆ. ಆದರೆ ಕೈಫಿಯತ್ತು ಮತ್ತು ಕೈಬರಹದ ಪ್ರತಿಗಳಲ್ಲಿ ಗುಡೇಕೋಟೆ ಪಾಳೆಯಪಟ್ಟಿನ ಬಗ್ಗೆ ಎರಡು ಅಭಿಪ್ರಾಯಗಳು ವ್ಯಕ್ತವಾದರೆ ಆಳ್ವಿಕೆ ನಡೆಸಿದ ಪಾಳೇಗಾರರ ಕ್ರಮಬದ್ಧತೆಯಲ್ಲೂ ಬಹಳಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಗುಡೇಕೋಟೆ ಪಾಳೆಯಪಟ್ಟಿನ ಸ್ಥಾಪನೆಯ ಬಗ್ಗೆ ಕೈಫಿಯತ್ತುಗಳು ಈ ರೀತಿ ಹೇಳುತ್ತವೆ. ವಿಜಯನಗರದ ಅರಸನಾದ ಶ್ರೀಕೃಷ್ಣ ದೇವರಾಯನು ಯುದ್ಧಗಳಲ್ಲಿ ಜಯಗಳಿಸಿ ವಿಜಯೋತ್ಸವವನ್ನು ಆಚರಿಸಿಕೊಳ್ಳುತ್ತಿದ್ದ ಸಂದರ್ಭದಲ್ಲಿ ಸೈನಿಕರಿಗೆ ಬಹುಮಾನ ನೀಡುತ್ತಿದ್ದನು. ಆ ಸಮಯದಲ್ಲಿ ಹಿರೇಬೊಮ್ಮಂತರಾಜಯೆಂಬುವನು 'ಪೂರ್ವದಾರಭ್ಯವಾಗಿ ನಮಗೆ ಕಾವಲಿ (ಕಂಪ)ನಾಡ ದಳವಾರಿಕೆಯು ನಡಿಯಿತ್ತಾಯಿತ್ತು. ನಮ್ಮ ಮರಿಯಾದೆ ದಯಪಾಲಿಸಬೇಕೆಂದು ಬಕೇಳಿಕೊಂಡನು. ಆಗ ಕೃಷ್ಣದೇವರಾಯನು ಉಜನಿಸೀಮೆ, ಜರಿಮಲೆಸೀಮೆ, ಗುಡೇಕೋಟೆ ಸೀಮೆ, ಬಾಣಾರಾವಿಸೀಮೆ, ಸಂಡೂರು ಸೀಮೆ, ವಡ್ಡುಸೀಮೆ, ಕುಡತಿನಿಸೀಮೆಗಳನ್ನಮು ಜಾಗೀರು ನೀಡುತ್ತಾ ಇವುಗಳನ್ನು ಅನುಭವಿಸಲು ಅಪ್ಪಣೆ ಕೊಟ್ಟನು. ಅದೇ ರೀತಿ ಹಿರೇಬೊಮ್ಮಂತ ನಾಯಕನು ಶಿಥಿಲವಾದ ಕೋಟೆ ಕೊತ್ತಳೆಗೆಳನ್ನು ಕಟ್ಟಿಸಿ ದೇವಾದಾಯ, ಬ್ರಹ್ಮದಾಯ, ಸಕಲ ಭೂಸ್ವಾಸ್ಥಿಗಳು ನಡೆಸಿಕೊಳ್ಳುತ್ತಾ ಬಂದನು". ಎಂದರೆ ವಿಜಯನಗರದ ಅರಸು ಕೃಷ್ಣದೇವರಾಯನಿಂದ ಈ ಪ್ರದೇಶವನ್ನು ಭೂಮಾನ್ಯವಾಗಿ ಪಡೆದು, ಗುಡೇಕೋಟೆ ಪಾಳೆಯಪಟ್ಟನ್ನು ಬೊಮ್ಮಣ್ಣನಾಯಕನು ಸ್ಥಾಪಿಸಿದನು ಎಂಬುದು ತಿಳಿದುಬರುತ್ತದೆ.

ಆದರೆ ಕೈಬರಹದ ದಾಖಲೆಯೊಂದರಲ್ಲಿ"ಶಾಲಿವಾಹನ ಶಕ ವರುಷ ೧೨೪೨ ಎಂದರೆ ಕ್ರಿ.ಶ.೧೩೨೦ರಲ್ಲಿ ಹೊಸಮಲೆ ದುರ್ಗದ ಮುಮ್ಮಡಿಶಿಂಗ ಆತನ ಮಗ ಕಂಪಲಿರಾಯ, ಆತನ ಮಗ ಕುಮಾರರಾಮ, ಆತನ ವಂಶಸ್ಥರು ಮುಮ್ಮಡಿನಾಯಕನಿಗೆ ನಾಲ್ಕು ಜನ ಗಂಡುಮಕ್ಕಳು, ನಾಲ್ಕು ಜನ ಹೆಣ್ಣುಮಕ್ಕಳಿದ್ದರು. ಆದರೆ ಕುಮಾರರಾಮನಿಗೆ ತೊಂದರೆಯ ಸಮಯ ಬಂದೊದಗಿದ್ದುದರಿಂದ ಅವರು ಹೊಸಮಲೆಯನ್ನು ಬಿಟ್ಟು ಅನೇಕ ದೇಶಗಳನ್ನು ತಿರುಗಿ, ಕೆಲಕಾಲಾನಂತರ ಜಟಿಂಗಿ

ರಾಮೇಶ್ವರನ ದರ್ಶನಕ್ಕೆ ಬರುತ್ತಾರೆ. ಆಗ ದೇವಗಿರಿಯ ಪಶ್ಚಿಮದ ಸೋಮವಾರದ ಗುಡ್ಡ, ಬುದ್ಧಿವಂತನ ಗುಡ್ಡದ ಮಧ್ಯದಲ್ಲಿ ಪಾಲಪ್ಪನಹಳ್ಳಿಯೆಂಬ ಹೊಸ ಊರನ್ನು ಕಟ್ಟಿಕೊಂಡು ವಾಸಿಸುತ್ತಿರಲು, ಯುಗಾದಿ ಬೇಟೆಗೆ ಹೋಗಿ ಶ್ವಾನದ ನೆಲೆಯಿಂದ ಬೋಳದೇವರ ಗುಡಿಯನ್ನು ಪತ್ತೆ ಹಚ್ಚುತ್ತಾರೆ. ಅಲ್ಲಿಯೇ ಕೋಟೆಯೊಂದನ್ನು ಕಟ್ಟಿಸಿಕೊಂಡು ಇರಲಾಗಿ ಒರಿಯ ಹೆಣ್ಣುಮಗಳು ರಾಮೇಶ್ವರಮ್ಮನು ಶಿವನ ದಿವ್ಯದರ್ಶನದ ಫಲವಾಗಿ ಗರ್ಭವತಿಯಾಗುತ್ತಾಳೆ. ಆಕೆಗೆ ಹುಟ್ಟಿದ ಮಗನೇ ಮರುಳೆಬೊಮ್ಮಣ್ಣ. ಶಿವನ ವರಪ್ರಸಾದದಿಂದ ಹುಟ್ಟಿದ ಈತನಿಗೆ ಪಟ್ಟಾಭಿಷೇಕ ಮಾಡಿಸಿ ಸ್ಥಳಕ್ಕೆ ಗುಡೇಕೋಟೆಯೆಂಬ ಹೆಸರಿಡುತ್ತಾರೆ. ಈ ದಾಖಲೆಯು ಗುಡೇಕೋಟೆಯ ಪಾಳೆಯ ಪಟ್ಟಿನ ಮೂಲ ಕರ್ತೃಗಳು ಕುಮಾರರಾಮನ ವಂಶಸ್ಥರು, ಇದರ ಸ್ಥಾಪಕ ಮರುಳೆಬೊಮ್ಮಂತರಾಜ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಸೊಂಡೂರು ಶ್ರೀ ಕುಮಾರಸ್ವಾಮಿ ಚರಿತ್ರೆ ಕೃತಿಯಲ್ಲಿ "ಕಾರ್ತಿಕೇಯನ ಕ್ಷೇತ್ರವು ಅದೃಶ್ಯ ಸ್ಥಿತಿಯಲ್ಲಿದ್ದಾಗ ಸ್ಕಂದಪುರ ಪ್ರಾಂತದವರು ಶ್ರೀಕುಮಾರಸ್ವಾಮಿ ಗುಡ್ಡದಲ್ಲಿ ಅಡಗಿ, ಈರಣ್ಣನ ತಗ್ಗು ಎಂಬ ಸ್ಥಳದವರೆಗೂ ಹೋಗಿ, ಅಲ್ಲಿಯೇ ಕಾಯಿ ಕರ್ಪೂರ ಮಾಡಿಕೊಂಡು ಗುಡ್ಡಕ್ಕೆ ಕೈಮುಗಿದು ಕಾರ್ತಿಕ ಸ್ವಾಮಿಗೆ ಜಯ ಎಂದು ತಿರುಗಿ ಬರುತ್ತಿದ್ದರು. ಮಳೇನೋರು ಎಂಬ ಮನೆತನದ ಹೆಸರಿಡುವ ಪಾಳೆಯಗಾರನು ಬೇಟೆಗೆ ಹೋದಾಗ ನಾಯಿ ನೀರು ಕುಡಿದು ಬಂದುದನ್ನು ನೋಡಿ ಕೊಳವನ್ನು ಕಂಡು ಬಟ್ಟೆಯ ತುಂಡುಗಳನ್ನು ಅಲ್ಲಲ್ಲಿ ಅಡಗಿಸಿ ಈರಣ್ಣನ ತಗ್ಗಿನವರೆಗೆ ಗುರುತು ಕಟ್ಟಿ, ತರುವಾಯ ಪರಿವಾರ ಸಹಿತವಾಗಿ ಹೋಗಿ ಗಿಡಗಳನ್ನು ಕಡಿದು ಬಯಲು ಮಾಡಿಸಿದನು. ಅಲ್ಲಿ ಗೋಪುರ ಗುಡಿಗಳು ಇರುವುದನ್ನು ನೋಡಿ ಅರ್ಧ ಅಂಜಿದ ಅವರು, ಸ್ವಾಮಿಯ ಗುಡಿಗೆ ಬಂದು ಬಾಗಿಲು ತೆರೆದರು. ಅಲ್ಲಿ ದೀಪಗಳಿರುವುದನ್ನು ಕಂಡು ಇನ್ನಷ್ಟು ಅಂಜಿ ಕೂಡಲೆ ನೆಲಕ್ಕೆ ಕುಕ್ಕರಿಸಿದ್ದರು. ಅವರು ಸ್ವಲ್ಪ ಸಮಯದ ನಂತರ ಚೇತರಿಸಿಕೊಂಡಾಗ ಬಲಗೈಯಲ್ಲಿ ಶಕ್ತ್ಯಾಯುಧವನ್ನು ಎಡಗೈಯಲ್ಲಿ ಕ್ರೌಂಚಪಕ್ಷಿಯನ್ನು ಧರಿಸಿ ನಿಂತಿದ್ದ ಸುಂದರವಾದ ಶ್ರೀ ಕುಮಾರಸ್ವಾಮಿಯ ಮೂರ್ತಿಯನ್ನು ಕಂಡರು. ನಂತರ ಮುಂದಿನ ವ್ಯವಸ್ಥೆ ಮಾಡಿದರು. ಇಲ್ಲಿ ಬರುವ ಮಳೇನೋರು ಎಂಬ ಮನೆತನಕ್ಕೂ ಹಾಗೂ ಜರಿಮಲೆ ಪಾಳೆಯಪಟ್ಟಿನ ಸ್ಥಾಪನೆ ವಿಷಯದಲ್ಲಿ ಬರುವ ಮಳೆ ಭೂಪ ಸಮುದ್ರಕ್ಕೂ, ಮತ್ತು ಗುಡೇಕೋಟೆ ಪಾಳೆಯಪಟ್ಟಿನ ಸಂಸ್ಥಾಪಕ ಮರುಳೆ ಬೊಮ್ಮಣ್ಣನಾಯಕ ಈ ವಿಷಯಗಳಿಗೆ ಹೋಲಿಸಿಕೊಂಡಾಗ ಮಳೇನೂರು ಮಳೆ ಹಾಗೂ ಮರುಳೆ ಶಬ್ದಗಳು ನಾಯಕ ಜನಾಂಗದ ಮಳೇಯರು ಎಂಬ ಬೆಡಗಿಗೆ ಹೊಂದುತ್ತವೆ. ಅಲ್ಲದೆ ಕಾಗದ ಪ್ರತಿಯ ದಾಖಲೆಯಲ್ಲಿ ಹಾಗೂ ಕುಮಾರಸ್ವಾಮಿ ಚರಿತ್ರೆಯ ಕೃತಿಯಲ್ಲಿ ಕಂಡುಬರುವ ಶ್ವಾನದ ಘಟನೆಗಳೂ ಪರಸ್ಪರ

ಹೋಲಿಕೆಯಾಗುತ್ತವೆ. ಹೀಗಾಗಿ ಗುಡೇಕೋಟೆ ಪಾಳೆಗಾರಿಕೆಯು ಬೇಟೆಯ ಪ್ರಸಂಗವೊಂದರಿಂದ ಆರಂಭವಾಗಿರಬೇಕು.

ಮತ್ತೊಂದು ಸಮಸ್ಯೆಯೆಂದರೆ ಆ ಪಾಳೇಗಾರರ ವಂಶಸ್ಥಾಪಕನ ಬಗ್ಗೆ ಇಲ್ಲಿಯೇ ಎರಡು ಅಭಿಪ್ರಾಯಗಳು ವ್ಯಕ್ತವಾಗುತ್ತವೆ. ಮೊದಲನೆಯದಾಗಿ ಹಿರೇಬೊಮ್ಮಣ್ಣ ನಾಯಕನು ಕೃಷ್ಣದೇವರಾಯನಿಂದ ಪಡೆದ ಜಾಗೀರು ಭೂಮಿಯಲ್ಲಿ ಗುಡೇಕೋಟೆ ಸಂಸ್ಥಾನವನ್ನು ಸ್ಥಾಪಿಸಿದನು ಎಂಬುದು; ಎರಡನೆಯದಾಗಿ ವಂಶಾವಳಿಯಲ್ಲಿ ಮೂಲಪುರುಷ ಗಂಡಳನಾಯಕ ಗುಡೇಕೋಟೆ ಸಂಸ್ಥಾನವನ್ನು ಹುಟ್ಟು ಹಾಕಿಸಿ ೧೫ ವರ್ಷ ರಾಜ್ಯ ಆಳಿ ಮಕ್ಕಳಾದ ಪೆನ್ನಪ್ಪರಾಜರಿಗೆ ಬಿಟ್ಟನು ಎಂಬುದು. ಈ ಎರಡು ಅಭಿಪ್ರಾಯಗಳನ್ನು ನಮಗೆ ದೊರೆತಿರುವ ಕಾಗದ ಪತ್ರಗಳು ತಿಳಿಸಿಕೊಡುತ್ತವೆ. ಈ ವಿಚಾರಗಳಿಗೆ ಸಾಹಿತ್ಯದ ಅಥವಾ ಶಾಸನದ ಆಧಾರಗಳು ದೊರೆಯುವುದಿಲ್ಲ. ಮತ್ತೊಂದೆಡೆ ಕುಮಾರರಾಮನ ಕೈಫಿಯತ್ತಿನಲ್ಲಿ ಬರುವ ಕುಮಾರರಾಮನ ಬಾಲ್ಯ ಸ್ನೇಹಿತ ಗಡಿಯಾಂಕ ಭೀಮನೇ ಮೂಲ ಪುರುಷನಿರಬೇಕೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಏಕೆಂದರೆ ದಾಖಲೆಯೊಂದರಲ್ಲಿ ಶ್ರೀಯಿಂಮ್ಮಡಿ ಗಡಿವಂತ ಭೀಮ ಸಂಸ್ಥಾನ ಗುಡೇಕೋಟೆ ಎಂಬ ಉಲ್ಲೇಖ ಬರುತ್ತದೆ. ಈ ಹಿನ್ನೆಲೆಯಲ್ಲಿ ಕ್ರಿ.ಶ.೧೩೨೦ರಲ್ಲಿ ಬರುವ ಕುಮಾರರಾಮ ಆತನ ಸ್ನೇಹಿತ ಗಡಿವಂತ ಭೀಮ ಎಂಬ ವಿಚಾರವು ನಿಜವಾಗಿದ್ದು ತದನಂತರ ಗಂಡಳನಾಯಕರ ಹೆಸರನ್ನು ದಾಖಲೆಗಾರರು ಕ್ರಿ.ಶ.೧೫೦೬ರ ಸರಿಸುಮಾರಿಗೆ ಗುರುತಿಸುತ್ತಾರೆ. ಈ ಎರಡು ಅಂಶಗಳನ್ನು ಗಮನಿಸಿದಾಗ ಹಾಗೂ ಕೈಫಿಯತ್ತಿನಲ್ಲಿ (ಹಿರೇಬೊಮ್ಮಂತನಾಯಕನ ಕೃಷ್ಣದೇವರಾಯನ್ನು ಪೂರ್ವದಿಂದಲೂ) ಕಾವಲಿನಾಡ ದಳವಾರಿಕೆಯು ನಡಿಯುತ್ತಾ ಇತ್ತು. ನಮ್ಮ ಮರಿಯಾದೆ ದಯಪಾಲಿಸಬೇಕು ಎಂದು ಕೇಳಿಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ಗುಡೇಕೋಟೆ ದಳವಾಯಿತನವು ಕೃಷ್ಣದೇವರಾಯನ ಕಾಲಕ್ಕಿಂತಲೂ ಪೂರ್ವದಲ್ಲಿಯೇ ಪಾಳೇಗಾರರ ವಂಶಸ್ಥರ ಅಡಿಯಲ್ಲಿರುವುದು ಕಂಡುಬರುತ್ತದೆ. ಹೀಗಾಗಿ ಮೂಲಪುರುಷನನ್ನು ಗುರುತಿಸುವಾಗ ಗಡಿವಂತ ಭೀಮ-ಗಂಡಳನಾಯಕ-ಹಿರೇಬೊಮ್ಮಂತನಾಯಕ ಎಂದು ಹೀಗೆ ಕ್ರಮವಾಗಿ ಗುರುತಿಸಬೇಕಾಗುತ್ತದೆ. ಆದರೆ ದೊರೆತಿರುವ ವಂಶಾವಳಿಯಲ್ಲಿ ರಾಮಪ್ಪನಾಯಕರಿಂದ ಗುಡೇಕೋಟೆ ಪಾಳೆಯಪಟ್ಟನ ಚರಿತ್ರೆಯು ಆರಂಭವಾಗುತ್ತದೆ. ಆದರೆ ಕೈಫಿಯತ್ತುಗಳಲ್ಲಿ, ದಾಖಲೆಗಳಲ್ಲಿ ಹಾಗೂ ವಂಶಾವಳಿಯಲ್ಲಿ ಬರುವ ಪಾಳೇಗಾರರ ಹೆಸರುಗಳಲ್ಲಿ ಏಕತೆ ಕಂಡುಬರುವುದಿಲ್ಲ. ಆದರೂ ಸಾಧ್ಯವಾದಷ್ಟು ಇವುಗಳನ್ನು ಶೋಧಿಸಿ ಈ ಕೆಳಗಿನಂತೆ ಗುಡೇಕೋಟೆ ಪಾಳೆಯಗಾರರ ಚರಿತ್ರೆಯನ್ನು ನೀಡಬಹುದಾಗಿದೆ.

೩.೨. ಗುಡೇಕೋಟೆ ಪಾಳೆಯಗಾರರ ರಾಜಕೀಯ ಚರಿತ್ರೆ

ಗಂಡಳನಾಯಕನು ಕ್ರಿ.ಶ.(೧೫೦೬-೧೫೨೧): ವಂಶಾವಳಿ ಪ್ರಕಾರ ಈತನು ಗುಡೇಕೋಟೆ ಪಾಳೆಯಪಟ್ಟವನ್ನು ಆಳಿದವರಲ್ಲಿ ಮೊದಲಿಗನು. ಈತನು ಶಕವರ್ಷ ೧೪೨೮ರಲ್ಲಿ ಅಧಿಕಾರಕ್ಕೆ ಬಂದನು. ಸುಮಾರು ೧೫ ವರ್ಷಗಳ ಕಾಲ ಈ ಪ್ರದೇಶವನ್ನು ಆಳಿದನು. ಈತನು ಆಡಳಿತ ಅವಧಿಯಲ್ಲಿ ಲಿಂಗಮ್ಮಹಳ್ಳಿ, ಜಾಜರಕಲ್ಲು, ಮಡೆನಹಳ್ಳಿ, ಲಕ್ಷ್ಮಿಪುರ, ಓರೇಹಾಳು (ಆಂಧ್ರ ಪ್ರದೇಶ) ಪ್ರದೇಶಗಳು ಒಳಗೊಂಡಿದ್ದವು. ತರುವಾಯ ಪೆನ್ನಪ್ಪನಾಯಕ (೧೫೨೧ -೧೫೪೧) ಪಾಪಳನಾಯಕ (೧೫೪೧- ೧೫೫೮), ಕೆಮ್ಮಯ್ಯರಾಜ (೧೫೫೮-೧೬೦೨), ರಾಮಪ್ಪ ನಾಯಕ (೧೬೦೨-೧೬೩೭) ಇವರು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ್ದಾರೆ.

ಬೊಮ್ಮಂತರಾಜ(೧೬೩೭-೧೬೭೬): ರಾಮಪ್ಪನಾಯಕನ ತರುವಾಯ ಅವನ ಮಗನಾದ ಬೊಮ್ಮಂತರಾಜ ಅಧಿಕಾರಕ್ಕೆ ಬಂದ. ಇವನು ಗುಡೇಕೋಟೆ, ಸಂಡೂರು, ಬಾಣಾರಾವಿ, ಸೀಮೆಯನ್ನು ಆಳುತ್ತಿದ್ದನು. ಅದೋನಿಯ ನವಾಬನಿಗೆ ಪೊಗದಿಯನ್ನು ಸಲ್ಲಿಸಿ ಈ ಪ್ರದೇಶಗಳನ್ನು ಆಳುತ್ತಿದ್ದನು.[೧೦] ಅದರಲ್ಲಿ ರಾಯದುರ್ಗ (ಆಂಧ್ರದಲ್ಲಿದೆ) ಕೂಡ ಇವರ ವಶದಲ್ಲಿತ್ತು. ಕ್ರಿ.ಶ.೧೬೬೨ರಲ್ಲಿ ತಮ್ಮನಾದ ಯರಿಬೊಮ್ಮಳನಾಯಕನಿಗೆ ರಾಯದುರ್ಗ ಪ್ರದೇಶವನ್ನು ಬಿಟ್ಟುಕೊಟ್ಟನು.

ಚಿನ್ನಯರಾಜ(೧೬೭೬-೧೬೮೮): ಬೊಮ್ಮಂತ ರಾಜನ ಮಗನಾದ ಚಿನ್ನಯರಾಜನು ತಂದೆಯ ನಂತರ ಅಧಿಕಾರಕ್ಕೆ ಬಂದನು. ಈತನು ಕೂಡ ಅದೋನಿ ನವಾಬರಿಗೆ ಪೊಗದಿ ಸಲ್ಲಿಸುತ್ತ ಸುಮಾರು ೧೨ ವರ್ಷಗಳ ಕಾಲ ರಾಜ್ಯವನ್ನು ಆಳಿದನು.

ಇಮ್ಮಡಿ ರಾಜಪ್ಪನಾಯಕ (ಕ್ರಿ.ಶ. ೧೭೯೦): ಈತನ ಬಗ್ಗೆ ಸರಿಯಾಗಿ ತಿಳಿದು ಬರುವುದಿಲ್ಲ. ಚೋರುನೂರು ಶಾಸನದ ಪ್ರಕಾರ ೧೭೯೦ ರಲ್ಲಿ ಈತನು ಗುಡೇಕೋಟೆ, ಸಂಡೂರು ಸೀಮೆಗಳನ್ನು ಆಳುತ್ತಿದ್ದನು. ಈ ಸೀಮೆಗಳ ಹೊರ ಪ್ರದೇಶಗಳನ್ನು ಆಕ್ರಮಣ ಮಾಡಿದ್ದನೆಂದು ತಿಳಿದುಬರುತ್ತದೆ. ಹೊರಸೀಮೆಗಳ ಹೆಸರುಗಳು ಲಭ್ಯವಿಲ್ಲ ಮತ್ತು ಈ ಹೊರಸೀಮೆ ಜನರಿಗೆ ಗುಡೇಕೋಟೆ ಮತ್ತು ಸಂಡೂರು ಸೀಮೆಯಲ್ಲಿರುವಂತೆ ಒಳ್ಳೆಯ ಆಡಳಿತವನ್ನು ನೀಡುವುದಾಗಿ ಭರವಸೆಯನ್ನು ಕೊಟ್ಟಿದ್ದನು.

ಜಟ್ಟಂಗಿರಾಜರು (೧೬೮೭-೩೭) : ಚಿನ್ನಯ ರಾಜನ ಮಗನಾದ ಜಟ್ಟಂಗಿರಾಜರು ಅಧಿಕಾರಕ್ಕೆ ಬಂದರು. ಇಮ್ಮಡಿ ರಾಜಪ್ಪನಾಯಕ ಮತ್ತು ಬೊಮ್ಮಂತ ರಾಜನ ಕಾಲಮಾನದಲ್ಲಿ ವ್ಯತ್ಯಾಸವಿದೆ. ಈಗಿನ ದಾಖಲಾತಿ ಪ್ರಕಾರ ಚಿನ್ನಯರಾಜನ ತರುವಾಯ ಕ್ರಿ.ಶ.೧೬೮೮ರಲ್ಲಿ ಜಟ್ಟಂಗಿ ರಾಜನು ಅಧಿಕಾರಕ್ಕೆ ಬರುತ್ತಾನೆ. ಚೋರುನೂರು ಶಾಸನದ ಪ್ರಕಾರ ಇಮ್ಮಡಿ ರಾಜಪ್ಪನಾಯಕ ಕ್ರಿ.ಶ.೧೭೯೦ರಲ್ಲಿ

[illegible]

ಈ ಪ್ರದೇಶಗಳನ್ನು ಆಳಿದ್ದು ಕಂಡುಬರುತ್ತದೆ. ಕೈಫಿಯತ್ತುಗಳ ಪ್ರಕಾರ ಮತ್ತು ದಾಖಲಾತಿ ಪ್ರಕಾರ ಜಟ್ಟಂಗಿ ರಾಜ ಸಂಡೂರು, ಗುಡೇಕೋಟೆ, ಬಾಣಾರಾವಿ ಪ್ರದೇಶಗಳ ಆಳ್ವಿಕೆಯನ್ನು ಸುಮಾರು ೪೬ ವರ್ಷ ನಡೆಸಿದಂತೆ ತಿಳಿದು ಬರುತ್ತದೆ. ಈತನ ಕಾಲದಲ್ಲಿ ಹೀರೇಹಾಳು ಗ್ರಾಮ ಪ್ರಸಿದ್ಧಿಗೆ ಬಂದಿತ್ತು. ಜಟ್ಟಂಗಿ ರಾಜರೂ ಕೂಡ ಅದೋನಿ ನವಾಬರಿಗೆ ಪೂರ್ವಿಕರು ಸಲ್ಲಿಸುತ್ತಿದ್ದ ಪೊಗದಿಯನ್ನು ಸಲ್ಲಿಸುತ್ತಾ ಸ್ವತಂತ್ರರಾಗಲು ಹವಣಿಸಿದರೆಂದು ಕಂಡುಬರುತ್ತದೆ. ಇದನ್ನು ಮನಗೊಂಡ ನವಾಬನು ಈ ಪ್ರದೇಶವನ್ನು ತನ್ನು ಸ್ವಾಧೀನಕ್ಕೆ ತೆಗೆದುಕೊಂಡನು. ಸುಮಾರು ೧೨ ವರ್ಷಗಳ ತಮ್ಮ ವಶದಲ್ಲಿಟ್ಟುಕೊಂಡರು. ತರುವಾಯ ಜಟ್ಟಂಗಿರಾಜರು ಚಿತ್ರದುರ್ಗದ ಬಿಚ್ಚುಗತ್ತಿ ಭರಮಣ್ಣನಾಯಕನ ಸಹಾಯ ಪಡೆದು ಪುನಃ ಈ ಪ್ರದೇಶಗಳನ್ನು ವಶಪಡಿಸಿಕೊಂಡರು. ಕ್ರಿ.ಶ. ೧೬೯೦ರಲ್ಲಿ ಚಿತ್ರದುರ್ಗದ ಆಜನ್ಮ ವೈರಿಗಳೆನಿಸಿದ ಹರಪನಹಳ್ಳಿ ಮತ್ತು ಬಿದುನೂರಿನವರು ದುರ್ಗದ ಸೀಮೆಯ ಅಣಜಿಯನ್ನು ಮುತ್ತಿ ತೆಗೆದುಕೊಂಡರು. ಈ ಸೀಮೆಯನ್ನು ವಶಪಡಿಸಿಕೊಳ್ಳಲು ಭರಮಣ್ಣನಾಯಕನು ಗುಡೇಕೋಟೆಯ ಜಟ್ಟಂಗಿರಾಜರು, ಜರಿಮಲೆ, ಅನಂತಪುರ, ತರೀಕೆರೆ, ಹಾವನೂರು, ಪಾಳೆಯಗಾರರನ್ನು ಕರೆಸಿಕೊಂಡು, ಒಟ್ಟಾಗಿ ಅಣಜಿಗೆ ದಂಡು ತೆಗೆದುಕೊಂಡು ಹೋಗಿ ಅದನ್ನು ಮರು ಆಕ್ರಮಿಸಿಕೊಂಡನು.[೧೨] ಕ್ರಿ.ಶ.೧೬೯೪ರಲ್ಲಿ ಭರಮಣ್ಣ ನಾಯಕನು ಗುಡೇಕೋಟೆಯವರಿಗೆ ಸೇರಿದ ನಾಗಸಮುದ್ರವನ್ನು ಮುತ್ತಿಗೆ ಹಾಕಿ ತೆಗೆದುಕೊಂಡನಲ್ಲದೆ ಈ ನಾಯಕ ಕುಟುಂಬದ ಬಂಗಾರವ್ವನಾಗತಿಯನ್ನು ವಿವಾಹ ವಾದನು.[೧೩] ಅಂದಿಗೆ ಇವರು ಚಿತ್ರದುರ್ಗಕ್ಕೆ ಅಧೀನರಾಗಿ ಆಳ್ವಿಕೆ ನಡೆಸಿದರು. ಕ್ರಿ.ಶ.೧೬೯೯ರಲ್ಲಿ ಇಂದೂರಾಯನು ರಾಯದುರ್ಗದವರೂ ನಾಯಕನಹಟ್ಟಿ ಕೋಟೆಯನ್ನು ಮುತ್ತಿದಾಗ ದುರ್ಗದ ಭರಮಣ್ಣನಾಯಕನು ಗುಡೇಕೋಟೆ, ಹಾವನೂರು, ನಿಡಗಲ್ಲು, ರತ್ನಗಿರಿ ಮತ್ತು ಸಿರಾದವರನ್ನು ಹಾಗೂ ಹಟ್ಟಿ ಮಲ್ಲಪ್ಪ ನಾಯಕನನ್ನು ಜತೆಯಲ್ಲಿ ಕರೆದೊಯ್ದು ನನ್ನೀವಾಳ (ಚಳ್ಳಕೆರೆ ತಾ.) ಬಳಿ ಇಳಿದು, ಶತ್ರುಗಳನ್ನು ಎದುರಿಸಿದನು.[೧೪] ಕ್ರಿ.ಶ.೧೭೩೩ರಲ್ಲಿ ಹಿರೇಮದಕರಿನಾಯಕನು ಗುಡೇಕೋಟೆ ಮತ್ತು ಅದಕ್ಕೆ ಸೇರಿದ ಕೆಲವು ಊರುಗಳನ್ನು ವಶಪಡಿಸಿಕೊಂಡನು.[೧೫] ತರುವಾಯ ವೆಂಕಟರಾವ್ ಘೋರ್ಪಡೆಯವರು ಜಟ್ಟಂಗಿರಾಜರ ಅಧೀನದಲ್ಲಿದ್ದ ಕೆಲವು ಪ್ರದೇಶಗಳನ್ನು ಆಕ್ರಮಿಸಿ ಜಟ್ಟಂಗಿ ರಾಜರನ್ನು ಹಿರೇಹಾಳಿನಲ್ಲಿ ಬಂಧಿಸಿಟ್ಟರು.[೧೬]

ರಾಮಪ್ಪನಾಯಕ (ಕ್ರಿ.ಶ.೧೭೩೭-೧೭೪೨): ಜಟ್ಟಂಗಿ ರಾಜರ ತರುವಾಯ ರಾಮಪ್ಪನಾಯಕನು ಅಧಿಕಾರಕ್ಕೆ ಬಂದು ೫ ವರ್ಷಗಳ ಕಾಲ ಆಳ್ವಿಕೆ ನೆಡೆಸಿದನು.

ಶಿವಪ್ಪ ನಾಯಕ(ಕ್ರಿ.ಶ.೧೭೪೨-೫೨) : ಈತನು ಈ ಅವಧಿಯಲ್ಲಿ ಆಳ್ವಿಕೆ ನಡೆಸಿದನು. ತರುವಾಯ ಶಿವಪ್ಪ ರಾಜರ ಮಕ್ಕಳಲ್ಲಿ ಹಿರಿಯ ಮಗಳಾದ ಭೀಮಪ್ಪನಾಗತಿಯನ್ನು ದುರ್ಗದ ರಾಜವೀರ

ಮದಕರಿನಾಯಕನಿಗೆ, ಚಿಕ್ಕಮಗಳಾದ ಪೆದ್ದಕ್ಕಿಯನ್ನು ಚಿಕ್ಕ ಮದಕರಿನಾಯಕನಿಗೆ ಮದುವೆಯನ್ನು ಮಾಡಿಸಿದನು.[೧೭] ನಂತರ ಚಿನ್ನಯ ರಾಜನು ಕ್ರಿ.೧೭೫೨ರಲ್ಲಿ ಅಧಿಕಾರಕ್ಕೆ ಬಂದನು. ಈತನ ಕಾಲದಲ್ಲಿ ಗುಡೇಕೋಟೆಯಲ್ಲಿ ವೀರ ಪ್ರಸಿದ್ಧ ವನಿತೆಯಾದ ಓಬವ್ವ ನೆಲೆಸಿದ್ದಳು. ಇವರ ತರುವಾಯ ಪಾಳೆಯಗಾರರ ಆಳ್ವಿಕೆಯ ಚಿತ್ರಣ ಸರಿಯಾಗಿ ಮೂಡಿಬರುವುದಿಲ್ಲ. ಓಗೆ ಗುಡೇಕೋಟೆಯ ಪಾಳೆಯಗಾರರು ಶಾಂತಿ ಸುವ್ಯವಸ್ಥೆಯಿಂದ ರಾಜ್ಯ ಪರಿಪಾಲಿಸುತ್ತಿದ್ದಾಗ ಹೈದರಾಲಿಯು ಎರಡು ಬಾರಿ ದಾಳಿ ಮಾಡಿದ್ದಾನೆ. ಹೈದರಾಲಿಯು ೨೦೦೦ ಕಾಲ್ಬಳ ೬೦೦ ಅಶ್ವದಳವನ್ನು ತೆಗೆದುಕೊಂಡು ೧೭೭೭ರಲ್ಲಿ ಹರಪನಹಳ್ಳಿಗೆ ಮುತ್ತಿಗೆ ಹಾಕಿ ನಂತರ ತನ್ನ ರಾಜಧಾನಿಗೆ ಓಂತಿರುಗುವ ಸಮಯದಲ್ಲಿ ಗುಡೇಕೋಟೆ, ಜರಿಮಲೆ, ಮೊಳಕಾಲ್ಮೂರುಗಳ ಮೇಲೆ ದಾಳಿ ಮಾಡಿದನು.[೧೮] ಈ ದಾಳಿ ಸಂದರ್ಭದಲ್ಲಿ ಹರಪನಹಳ್ಳಿ ಸಂಪೂರ್ಣ ನಾಶವಾಗಿ ಮತ್ತೆ ಹೊಸದಾಗಿ ನಿರ್ಮಾಣವಾಗಿದೆ. ೨ನೇ ಸೋಮಶೇಖರ ನಾಯಕನು ಗುಡೇಕೋಟೆ ಪಾಳೆಯಗಾರರ ಹೆಣ್ಣುಮಕ್ಕಳಾದ ನೀಲಮ್ಮಾಜಿ, ಬಸಮ್ಮಾಜಿ ಎಂಬವರನ್ನು ವಿವಾಹವಾದರು.[೧೯] ಟಿಪ್ಪುವು ತುಂಗಭದ್ರೆಯ ಕಡೆಯಿಂದ ಮರುಳುವಾಗ ಹರಪನಹಳ್ಳಿಯಿಂದ ರಾಯದುರ್ಗಕ್ಕೆ ಹೋಗುವ ಸಂದರ್ಭದಲ್ಲಿ ಗುಡೇಕೋಟೆ ಮೇಲೆ ದಾಳಿ ಮಾಡಿರಬಹುದು. ಕ್ರಿ.ಶ.೧೭೯೯ರಲ್ಲಿ ಟಿಪ್ಪು ಮರಣಾಂತರ ಪಾಳೆಯಗಾರರು ನಿಜಾಮನರ ಅಧೀನರಾಗಿದ್ದರು. ನಂತರ ಬ್ರಿಟಿಷರ ಆಳ್ವಿಕೆಗೆ ಈ ಪ್ರದೇಶ ಒಳಪಟ್ಟಿತು. ಇಲ್ಲಿಗೆ ಪಾಳೆಯಗಾರರ ಆಡಳಿತ ಕೊನೆಗೊಂಡಿತ್ತು. ಈ ಪಾಳೆಯಗಾರರಿಗೆ ಬ್ರಿಟಿಷರು ವಿಶ್ರಾಂತಿವೇತನವನ್ನು ಕೊಟ್ಟು, ಈ ಪಾಳೆಯಪಟ್ಟನು ವಶಪಡಿಸಿಕೊಂಡರು. ಇಲ್ಲಿನ ಕೆಲವೊಂದು ಪ್ರದೇಶಗಳನ್ನು ಕಂದಾಯ ವಸೂಲಿ ಮಾಡಲು ಪಾಳೆಯಗಾರರಿಗೆ ಅನುಮತಿ ಕೊಟ್ಟಿದ್ದರು. ಕ್ರಿ.ಶ.೧೮೨೮ರಲ್ಲಿ ಬರಗಾಲ ಸಂದರ್ಭದಲ್ಲಿ ಬೊಮ್ಮಂತರಾಜನು, ತಮ್ಮ ಲಿಂಗಪ್ಪ (ಸಿದ್ಧರಾಮಯ್ಯ) ಮತ್ತು ಸಂಬಂಧಿಕ ರಾಮಪ್ಪಯ್ಯ ಬ್ರಿಟಿಷರ ವಿರುದ್ಧ ೫೦೦ ಜನರ ಬೇಡ ಸಮುದಾಯದವರನ್ನು ಸಂಘಟಿಸಿ ದಂಗೆ ಎದ್ದರು. ಇದನ್ನು ಹತ್ತಿಕ್ಕಲು ಹರಪನಹಳ್ಳಿ, ಹಡಗಲಿಯಿಂದ ಪೋಲಿಸ್‌ರನ್ನು ಕರೆಯಿಸಿ ಈ ದಂಗೆಯನ್ನು ಅಮಲ್ದಾರನು ಹತ್ತಿಕ್ಕಿದನು. ನಂತರ ಕಲೆಕ್ಟರು ಈ ಸ್ಥಳಕ್ಕೆ ಭೇಟಿಕೊಟ್ಟು ಇದರ ತನಿಖೆ ನಡೆಸಿದನು. ಈ ಪಾಳೆಯಗಾರರು ಗುಡೇಕೋಟೆ ಪಂಚಾಯಿತಿ ಬೋರ್ಡ್ ಅಧ್ಯಕ್ಷರಾಗಿ ಕೆಲಸವನ್ನು ನಿರ್ವಹಿಸಿದರು. ಗುಡೇಕೋಟೆ ಪಾಳೆಯಪಟ್ಟನ್ನು ಸುಮಾರು ೧೪ ಜನ ಪಾಳೇಯಗಾರರು ಆಳ್ವಿಕೆ ನಡೆಸಿರುವಂತೆ ದಾಖಲೆಗಳಿಂದ ಅಸ್ಪಷ್ಟವಾಗಿ ತಿಳಿದುಬರುತ್ತದೆ. ಈ ಅರಸರಲ್ಲಿ ಖ್ಯಾತಿ ಪಡೆದವರೆಂದರೆ ಜಟ್ಟಂಗರಾಜನು. ಈತನ ಬಗ್ಗೆ ಇರುವ ಜನಪದ ಹಾಡುಗಳೇ ಸಾಕ್ಷಿಯಾಗಿವೆ.

ಟಿಪ್ಪಣಿಗಳು

೦೧. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೪೧.

೦೨. ಅದೇ, ಪು.೫೬೧.

೦೩. ಅದೇ, ಪು.೫೧೧,

೦೪. ಅದೇ, ಪು.೪೦೪.

೦೫. University of Mysore, MAR, 1936, ಪು.೧೪೬.

೦೬. ಅದೇ, ಪು.೧೪೯.

೦೭. ಚನ್ನಬಸಪ್ಪ ಎಸ್.ಪಾಟೀಲ, **ಕರ್ನಾಟಕ ಶಾಸನ ಸಂಪುಟ**, ೧೯೯೭, ಪು.೧೪೬.

೦೮. ಅದೇ, ಪು.೧೪೮.

೦೯. ಅದೇ, ಪು.೧೪೬.

೧೦. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೪೯.

೧೧. ಅದೇ, ಪು.೫೬೧.

೧೨. ಲಕ್ಷ್ಮಣ್ ತೆಲಗಾವಿ, **ದವನಸಿರಿ ಸ್ಮರಣ ಸಂಚಿಕೆ**, ೧೯೯೨, ಪು.೭೯.

೧೩. ಅದೇ,

೧೪. ಅದೇ,

೧೫. ಅದೇ, ಪು.೮೦.

೧೬. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೪೯.

೧೭. ಅದೇ, ಪು.೮೩.

೧೮. Hayavadavana Rao C., A History of Mysore, Vol.III, 1993, ಪು.೨೫೦.

ಅಧ್ಯಾಯ ೪

ಪಾಳೆಯಗಾರರ ಕಾಲದ ಸಂಸ್ಕೃತಿ

[illegible]

[illegible]

[illegible]
[illegible]
[illegible]
[illegible]
[illegible]
[illegible]

೪.೧. ಆಡಳಿತ

ಈ ಪಾಳೇಗಾರರು ೩೩ ಹಳ್ಳಿಗಳ ಒಡೆಯರಾಗಿದ್ದರು. ಸಂಡೂರು, ಬಾಣಾರಾವಿ ಸೀಮೆಯನ್ನು ಆಳುತ್ತಿದ್ದರೆಂಬುದಕ್ಕೆ ಚೋರುನೂರು ಶಾಸನಗಳು ಮತ್ತು ಕೈಫಿಯತ್ತುಗಳು ಆಧಾರವಾಗಿವೆ. ಇವರು ಆಡಳಿತ ಅನುಕೂಲಕ್ಕೋಸ್ಕರ ಸಂಸ್ಥಾನವನ್ನು ಸೀಮೆಗಳನ್ನಾಗಿ ವಿಂಗಡಿಸಿದರು. ಸೀಮೆ ಎಂದರೆ ಅನೇಕ ಹಳ್ಳಿಗಳನ್ನು ಸೇರಿಕೊಂಡ ಪ್ರದೇಶವಾಗಿತ್ತು. ಇವರ ಆಡಳಿತ ಪ್ರದೇಶವು ಮೂರು ಸೀಮೆಗಳನ್ನು ಒಳಗೊಂಡಿದ್ದಿತು. ಗುಡೇಕೋಟೆ ಸೀಮೆ, ಸಂಡೂರು ಸೀಮೆ, ಬಾಣಾರಾವಿಸೀಮೆ. ಈ ಸೀಮೆಯ ಆಡಳಿತ ಮೇಲ್ವಿಚಾರಣೆಯು ನಾಡಗೌಡ ದಳವಾರಿಕೆ ಕೈಯಲ್ಲಿರುತ್ತಿತ್ತು. ಪ್ರತಿಯೊಂದು ಗ್ರಾಮದಲ್ಲಿ ಗೌಡ, ಶ್ಯಾನುಭೋಗ, ತಳವಾರ, ಮೊದಲಾದ ಆಯಗಾರದವರನ್ನು ನೇಮಿಸುತ್ತಿದ್ದರು. ಗುಡೇಕೋಟೆ ಗ್ರಾಮವನ್ನು ಸೇವಬೋವ ತಿಮ್ಮರಸನು ನೋಡಿಕೊಳ್ಳುತ್ತಿದ್ದನೆಂದು ತಿಳಿದುಬರುತ್ತದೆ.[೧] ಇವರ ಆಡಳಿತವು ಏಕರೂಪ ವ್ಯವಸ್ಥೆಯನ್ನು ಹೊಂದಿತ್ತು. ಕ್ರಿ.ಶ.೧೭೬೦ ಮಾರ್ಚ್ ೩೧ರಲ್ಲಿ ಹೊರಡಿಸಿದ ಶಾಸನ ಇಂತಿದೆ. ಇಮ್ಮಡಿರಾಜಪ್ಪ ನಾಯಕನು, ಹೊರಮಲೆ ಸೀಮೆಯ ಜನರಿಗೆ ಒಂದು ಪ್ರಕಟಣೆಯನ್ನು ಹೊರಡಿಸಿ ಅದರ ಪ್ರಕಾರ ಗುಡೇಕೋಟೆಯ ಸೀಮೆ ಪದ್ಧತಿಯಂತೆ ನೋಡಿಕೊಳ್ಳುವುದಾಗಿ ಆಶ್ವಾಸನೆ ನೀಡಿದ ಎಂಬುದು ಶಾಸನದಿಂದ ತಿಳಿಯಬಹುದಾಗಿದೆ.[೨] ಇಲ್ಲಿನ ಪಾಳೆಯಗಾರರು ಗುಡೇಕೋಟೆ, ಸಂಡೂರು, ಸೀಮೆಯನ್ನು ಅಲ್ಲದೆ ಇನ್ನೂ ಇತರೆ ಪ್ರದೇಶಗಳನ್ನು ವಶಪಡಿಸಿಕೊಂಡರೆಂದು ಆಡಳಿತವನ್ನು ವಿಸ್ತರಿಸಿದರೆಂದು, ಇವರ ಆಡಳಿತವು ಉತ್ತಮವಾಗಿರಬಹುದೆಂದು ಶಾಸನದಿಂದ

[illegible]

ತಿಳಿಯಬಹುದಾಗಿದೆ.ಇವರ ಆಡಳಿತ ವ್ಯವಸ್ಥೆಯಲ್ಲಿ ಮುಖಂಡನಾಗಿದ್ದವನು ನಾಯಕ. ಅವನ ಮಾತೇ ಸಂಸ್ಥಾನದಲ್ಲಿ ಅಂತಿಮವಾಗಿತ್ತು. ಆಳುವ ವರ್ಗದಲ್ಲಿ ಆತನದು ಎತ್ತರದ ಸ್ಥಾನವಾಗಿತ್ತು. ಆ ಸ್ಥಾನಕ್ಕೆ ತಕ್ಕಂತೆ ಘನತೆ ಗೌರವ ಇರುತ್ತಿತ್ತು. ಇವರಿಗೆ ರಾಜಶ್ರೀ ದೊರೆ ಎಂಬ ಬಿರುದುಗಳಿದ್ದವು. ಪಾಳೆಯಗಾರರ ಅಧಿಕಾರವು ವಂಶಪಾರಂಪರ್ಯವಾಗಿತ್ತು. ಕೆಲವು ಬಾರಿ ರಕ್ತ ಸಂಬಂಧಿಕರನ್ನಾಗಲೀ ಅಥವಾ ತನಗೆ ಪುತ್ರ ಸಂತಾನವಿಲ್ಲದಾಗ ತನ್ನ ಅಣ್ಣ ಅಥವಾ ಅವರ ತಮ್ಮನನ್ನಾಗಲೀ ಅಥವಾ ಮಕ್ಕಳನ್ನಾಗಲೀ ಪಟ್ಟಕ್ಕೆ ತರುವುದು ವಾಡಿಕೆಯಲ್ಲಿದ್ದಿತು. ತಮ್ಮ ಮಕ್ಕಳನ್ನು ಕೆಲವೊಂದು ಸೀಮೆಯನ್ನು ನೋಡಿಕೊಳ್ಳಲು ನೇಮಿಸುತ್ತಿದ್ದರು.

೪.೨. ಆರ್ಥಿಕ ಸ್ಥಿತಿಗತಿ

ಕೃಷಿ : ಈ ಪ್ರದೇಶಗಳಲ್ಲಿ ಬೆಳೆಯುವ ಬೆಳೆಗಳ ಬಗ್ಗೆ ಹೀರೆಹಾಳ ಕೈಫಿಯುತ್ತು.[೩] ಈ ಕೆಳಗಿನಂತೆ ಮಾಹಿತಿ ಒದಗಿಸುತ್ತದೆ. ಗೋದಿ, ತೊಗರಿ, ಹೆಸರು, ಕಡ್ಲೆ, ಅವರೆ, ಎಳ್ಳು, ಅಲಸಂದಿ, ಔಡಲ, ಹುರಳಿ, ನವಣೆ, ರಾಗಿ, ಅರಿಷಿಣ ಜೋಳ, ಬರ್‍ಗು, ಗುರೆಳ್ಳು, ಕುಸಬಿ, ಬದನೆಕಾಯಿ, ಬೆಂಡೆಕಾಯಿ, ಪುಂಡಿ, ಚಳ್ಳವರೆಕಾಯಿ, ಹೀರೇಕಾಯಿ, ಕುಂಬಳಕಾಯಿ, ಮೆಣಸಿನಕಾಯಿ, ಹಾಲಗುಂಬಳಕಾಯಿ, ತುಪ್ಪ ಹೀರೇಕಾಯಿ, ಹರ್ವಿಪಲ್ಯೆ, ರಾಜಗಿರಿ, ಮೆಂತೆ, ಸಬ್ಬಕ್ಕಿ ಮತ್ತು ಕೊತ್ತಂಬರಿ.

ತೆರಿಗೆ : ಈ ಪಾಳೆಯಗಾರರು ಹಳ್ಳಿಗಳಿಂದ ಕಂದಾಯ ವಸೂಲಿ ಮಾಡುತ್ತಿದ್ದರು. ಆದರೆ ಕಂದಾಯ ವಸೂಲಿ ಮಾಡುವ ಪದ್ಧತಿ ವಿವರವಾಗಿ ತಿಳಿದುಬಂದಿಲ್ಲ. ಇವರ ಆಡಳಿತದ ಅವಧಿಯಲ್ಲಿ ಜನನ ಮರಣ ತೆರಿಗೆ ವಿಧಿಸುತ್ತಿದ್ದರು ಎಂಬುದಕ್ಕೆ ಚೋರುನೂರು ವಿರಕ್ತಮಠದ ಮೊಗಶಾಲೆಯಲ್ಲಿರುವ ಶಾಸನದಿಂದ ತಿಳಿಯಬಹುದಾಗಿದೆ[೪]. ಇವರು ಹೊರಡಿಸಿದ ಶಾಸನದ ಪ್ರಕಾರ ರಾಜಪ್ಪ ನಾಯಕನು ಹೊರಮಲೆ ಸೀಮೆ ಜನರಿಗೆ ಅಂದರೆ ಹೊಸದಾಗಿ ವಶಪಡಿಸಿಕೊಂಡ ಪ್ರದೇಶಗಳ ಮೇಲೆ ಹುಟ್ಟಿದ ಮಕ್ಕಳು ಮತ್ತು ಸತ್ತವರ ತೆರಿಗೆ ವಿಧಿಸಬಾರದೆಂದು ತಿಳಿಸಿದ್ದಾನೆ. ಆದರೆ ಗುಡೇಕೋಟೆ, ಸಂಡೂರು ಸೀಮೆಯಲ್ಲಿ ರೀ ತೆರಿಗೆ ಪ್ರಚಲಿತದಲ್ಲಿತ್ತು ಎಂಬುದನ್ನು ಅರಿಯಬಹುದು ಮತ್ತು ಇವರು ಸೀಮೆಯ ಹೊರ ಪ್ರದೇಶಗಳ ಜನರಿಗೆ ಕೆಲವು ರಿಯಾಯತಿಗಳನ್ನು ಕೊಡುತ್ತಿದ್ದರೆಂದು ಮನಗಾಣಬಹುದು.

೪.೩. ಧರ್ಮ

ಧರ್ಮ ಸಮಾಜದ ಅವಿಭಾಜ್ಯ ಅಂಗ. ಬೇರೆ ಬೇರೆ ಮತಧರ್ಮಗಳು ಅಂದಿನ ಸಮಾಜವನ್ನು ಪೋಷಿಸುತ್ತಾ ಮತ್ತು ಸಮಾಜದಿಂದ ಪೋಷಿಸಲ್ಪಡುತ್ತಾ ಬೆಳೆದು ಬಂದುದನ್ನು ಎಲ್ಲಾ ಕಡೆಗಳಲ್ಲೂ ನೋಡಬಹುದಾಗಿದೆ. ಹೀಗೆ ಈ ಪಾಳೆಯಗಾರರ ಪ್ರದೇಶದಲ್ಲಿಯೂ ಕಾಣಬಹುದು. ಇಲ್ಲಿನ

ಪಾಳೆಯಗಾರರು ಹೊಸದಾಗಿ ಧಾರ್ಮಿಕ ಕ್ಷೇತ್ರದಲ್ಲಿ ಯಾವ ಬದಲಾವಣೆಯನ್ನು ತರಲಿಲ್ಲ ಮತ್ತು ತರುವಂತ ಇಚ್ಛೆಯನ್ನು ಅವರು ಹೊಂದಿರಲಿಲ್ಲ. ವಿಜಯನಗರ ಅರಸರ ಸಮಕಾಲೀನರಾಗಿ ಅವರ ಸಾಮ್ರಾಜ್ಯದ ಧಾರ್ಮಿಕ ಪರಂಪರೆಯನ್ನು ಅವರ ಅಧೀನ ಪ್ರಭುಗಳಾಗಿ ಈ ಪ್ರದೇಶದಲ್ಲಿ ಎತ್ತಿ ಹಿಡಿದರು. ಧಾರ್ಮಿಕ ದೃಷ್ಟಿಯಿಂದ ಪರಿಶೀಲಿಸಿದರೆ ಈ ಪ್ರದೇಶದಲ್ಲಿ ಧಾರ್ಮಿಕ ಏಕತೆಗಿಂತ ವೈವಿಧ್ಯತೆ ಇತ್ತೆಂದು ಇಂದಿನ ಪ್ರಸ್ತುತದ ಚಿತ್ರಣದಿಂದ ತಿಳಿಯಬಹುದು. ಇಂತಹ ವೈವಿಧ್ಯತೆಯಿಂದ ಕೂಡಿದ ಶಿಷ್ಟಮತ ಧಾರ್ಮಿಕವು ಮತ್ತು ಜಾನಪದ ಧಾರ್ಮಿಕ ಪರಂಪರೆಯೂ ಸಹಬಾಳ್ವೆಯಿಂದ ಬಾಳಿದ್ದನ್ನು ನೋಡಬಹುದು. ಇಲ್ಲಿನ ಪಾಳೆಯಗಾರರು ಮೂಲತಃ ಬೇಡ ಜನಾಂಗದವರಾಗಿದ್ದರು. ಎಲ್ಲಾ ಧರ್ಮಗಳ ಬಗ್ಗೆ ಉದಾರವಾದ ಪ್ರೋತ್ಸಾಹ ಕೊಟ್ಟಿದ್ದರು. ಶೈವ, ವೈಷ್ಣವ ಮತ್ತು ಶಾಕ್ತೇಯ ಪಂಥ ಮತ್ತು ಧರ್ಮಗಳಿಗೆ ವಿಶೇಷ ಕಾಳಜಿ ಕೊಟ್ಟಿದ್ದನ್ನು ತಿಳಿಯಬಹುದಾಗಿದೆ. ಆಚರಣೆಗಳಿಗೂ ಪ್ರೋತ್ಸಾಹ ಕೊಟ್ಟಿರುವುದನ್ನು ಕಾಣಬಹುದು. ಈ ಪಾಳೆಯಗಾರರ ಮನೆತನದವರ ಕುಲದೇವರು ಮಾಕನಡಕು ನರಸಿಂಹಸ್ವಾಮಿ, ಜಟ್ಟಂಗಿ ಇವರು ಮೂಲತಃ ಕಂಚಿ ದೇಶದಿಂದ ಬಂದವರೆಂದು ಹೇಳುತ್ತಾರೆ. ಹರಪನಹಳ್ಳಿ ಪಾಳೆಯಗಾರರು ಗುರುಕೊಟ್ಟೂರೇಶ್ವರ ಸ್ವಾಮಿ ಭಕ್ತರಾದಂತೆ, ಚಿತ್ರದುರ್ಗದವರು ಮುರಘರಾಜೇಂದ್ರ ಸ್ವಾಮಿಗಳ ಅನುಗ್ರಹ ಪಾತ್ರರಾದಂತೆ, ಇಲ್ಲಿನ ಪಾಳೇಗಾರರು ಕೂಡ ಪ್ರಸಿದ್ಧ ಶೈವ ಪಂಚಪೀಠಗಳಲ್ಲಿ ಒಂದಾದ ಉಜ್ಜನಿ ಪೀಠಕ್ಕೆ ಭಕ್ತರಾಗಿದ್ದು, ಮರುಳಸಿದ್ದೇಶ್ವರ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು. ಉಜ್ಜನಿಯಲ್ಲಿ ಮಠವನ್ನು ಜೀರ್ಣೋದ್ಧಾರ ಮಾಡಿದರೆಂದು ಕಂಡು ಬರುತ್ತದೆ. ಅದಲ್ಲದೆ ಇವರ ಧಾರ್ಮಿಕ ನೀತಿಗೆ ಒಳ್ಳೆಯ ನಿದರ್ಶನವೆಂದರೆ, ಕುದಿರುಡವು ಗ್ರಾಮವನ್ನು ಪಾಳೇಯಗಾರನಾದ ಚಿನ್ನಯಿರಾಜನು ಕ್ರಿ.ಶ.೧೭೫೨ರಲ್ಲಿ ಶೃಂಗೇರಿ ಪೀಠದ ವಿರೂಪಾಕ್ಷ ವಿದ್ಯಾಭಿನವಶಂಕರ-ಭಾರತಸ್ವಾಮಿಗೆ ದಾನ ನೀಡಿದ್ದನ್ನು ಕುದಿರಡವು ಗ್ರಾಮ ಶಾಸನದಲ್ಲಿ ನೋಡಬಹುದು.[೫] ಇಲ್ಲಿನ ಪಾಳೇಯಗಾರರು ದೈವಭಕ್ತರಾಗಿದ್ದಲ್ಲದೆ ಸ್ವಾಮಿಗಳ ಅನುಗ್ರಹಕ್ಕೆ ಪಾತ್ರರಾಗಿದ್ದರು ಎಂದು ಹೇಳಬಹುದು.

ವೀರಶೈವ ಧರ್ಮ : ವೀರಶೈವ ಧರ್ಮಕ್ಕೆ ಪ್ರೋತ್ಸಾಹ ಕೊಟ್ಟಿದ್ದರೆಂದು ಇವರ ಅವಧಿಯಲ್ಲಿ ಕಟ್ಟಲ್ಪಟ್ಟಂತಹ ಪಾರ್ವತಿ ಪರಮೇಶ್ವರ, ರಾಮಲಿಂಗೇಶ್ವರ ದೇವಾಲಯಗಳನ್ನು ಉದಾಹರಣೆಯಾಗಿ ನೋಡಬಹುದು. ಅದಲ್ಲದೆ ಚಿತ್ರದುರ್ಗ, ಹರಪನಹಳ್ಳಿ, ಜರಿಮಲೆ, ಪಾಳೇಯಗಾರರು ಮಠದ ಸ್ಥಾಪನೆ ಮತ್ತು ಪೋಷಣೆ ಮಾಡಿದಂತೆ ಇಲ್ಲಿನ ಪಾಳೇಯಗಾರರೂ ಮಾಡಿದರು. ಮಠ ಎಂಬ ಪದಕ್ಕೆ ಇರುವ ಮೂಲ ಅರ್ಥ ಸನ್ಯಾಸಿಗಳು ವಾಸಿಸುವ ಕುಟೀರ.[೬] ಇದು ತಪಸ್ಸಿನ ಜ್ಞಾನಾನ್ವೇಷಣೆಯ ಧಾರ್ಮಿಕ ಕೇಂದ್ರ. ಕ್ರಮೇಣ ಆಶ್ರಮ, ಗುರುಮನೆ, ಗುರುಕುಲವಾಗಿ ಕಾಲ ಉರುಳಿದಂತೆ ವಿದ್ಯಾ

ಪ್ರಚಾರ, ಜ್ಞಾನ ಪ್ರಸಾದ, ಮತ ಪ್ರಚಾರ ಕೇಂದ್ರವಾಗಿ ಬೆಳೆದಿದೆ. ಇಂಥಹ ಮಠಗಳನ್ನು ಗುಡೇಕೋಟೆ ಪ್ರದೇಶದಲ್ಲಿ ಕಾಣಬಹುದು ಮತ್ತು ಗುಡೇಕೋಟೆ ಗ್ರಾಮದಲ್ಲಿರುವ ಕೊಟ್ಟೂರುಸ್ವಾಮಿಮಠ, ಎಣಿವೀರಪ್ಪ ಮಠಗಳನ್ನು ಇಲ್ಲಿ ಪಾಳೇಯಗಾರರು ಕಟ್ಟಿಸಿ ಪೋಷಣೆಯನ್ನು ಮಾಡಿದ್ದಾರೆ. ಇವರು ವೀರಶೈವ ಧರ್ಮ ಗುರುಗಳನ್ನು ತಮ್ಮ ಪ್ರದೇಶದಲ್ಲಿರಿಸಿಕೊಂಡು ಮಠಗಳನ್ನು ಕಟ್ಟಿಕೊಡುತ್ತಿದ್ದರಲ್ಲದೆ ಇವರಿಗೆ ಭೂಮಿಯನ್ನು ಉಂಬಳಿಯಾಗಿ ಕೊಡುತ್ತಿದ್ದರು.

ವೈಷ್ಣವ ಧರ್ಮ : ವೈಷ್ಣವ ಧರ್ಮಕ್ಕೆ ಕೂಡ ಇಲ್ಲಿನ ಪ್ರೋತ್ಸಾಹ ಕೊಡುತ್ತಿದ್ದರು ಎಂಬುದಕ್ಕೆ ಲಕ್ಷ್ಮೀ ವೆಂಕಟೇಶ್ವರ ದೇವಾಲಯ, ಆಂಜನೇಯ ದೇವಾಲಯಗಳನ್ನು ಕಾಣಬಹುದು.

ಜಾನಪದ ನಂಬಿಕೆ ಮತ್ತು ಆಚರಣೆಗಳು : ಈ ಮೊದಲು ಶಿಷ್ಟಧರ್ಮಗಳ ವಿವರಗಳನ್ನು ಚರ್ಚಿಸಿದ ನಂತರ ಜಾನಪದ ನಂಬಿಕೆ ಮತ್ತು ಆಚರಣೆಗಳನ್ನು ಇಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಶಿಷ್ಟಕ್ಕಿಂತ ಭಿನ್ನವಾದ ಜನಸಾಮಾನ್ಯರು ಹಳ್ಳಿಗಾಡುಗಳಲ್ಲಿ ಆಚರಿಸುತ್ತಿದ್ದ ಮತ್ತು ಪೂಜಿಸುತ್ತಿದ್ದ ದೇವರು ಮತ್ತು ಅದಕ್ಕೆ ಸಂಬಂಧಪಟ್ಟ ಆಚರಣೆಗಳನ್ನು ಇನ್ನು ಇಲ್ಲಿ ಪರಿಶೀಲಿಸಬಹುದು. ಈ ಪ್ರದೇಶದಲ್ಲಿ ಹಿಂದುಳಿದ ವರ್ಗದ ಜನರೇ ಹೆಚ್ಚಾಗಿರುವುದರಿಂದ ಇಲ್ಲಿ ಜನಪದ ಆಚರಣೆಗಳು ಕಂಡುಬರುವುದನ್ನು ನೋಡಬಹುದು. ಜನಪದ ದೇವರುಗಳಾದ ಮಲ್ಲಯಮ್ಮ, ಚೌಡಮ್ಮ, ದುರ್ಗಮ್ಮ ಇನ್ನೂ ಮೊದಲಾದ ದೇವರುಗಳನ್ನು ಹೆಸರಿಸಬಹುದು. ಈ ಜನಪದ ದೇವತೆಗಳಿಗೆ ಕೋಣ, ಕುರಿ, ಮೇಕೆಗಳನ್ನು ಬಲಿ ಕೊಡುವ ಪದ್ಧತಿಯನ್ನು ಕಾಣಬಹುದು. ವರ್ಷಕ್ಕೆ ಒಂದು ಬಾರಿ ಹಬ್ಬ ಆಚರಿಸಿ ಪ್ರಾಣಿ ಬಲಿಯನ್ನು ನೀಡುತ್ತಾರೆ. ದುರ್ಗಮ್ಮ ಮಲ್ಲಯಮ್ಮ ಜಾತ್ರೆಯಲ್ಲಿ ಕೋಣವನ್ನು ಕಡಿದ ನಂತರ ಗಾವು ಸಿಗಿಯುವ ಪದ್ಧತಿ ಇದೆ. ಇದು ಜಾತ್ರೆಯ ವಿಶೇಷ ಆಚರಣೆಗಳಲ್ಲೊಂದಾಗಿದೆ.ಗಾವು ಜಿಗಿಯುವವರಿಗೆ ಪೋತರಾಜರು ಅಥವಾ ಹೋತರಾಜರು ಎಂದು ಕರೆಯುತ್ತಾರೆ. ಇವರು ಜಾತ್ರೆಯ ಕೊನೆಯ ದಿವಸ ಉರಮೆ ತಮಟೆ ವಾದ್ಯಗಳ ಸಮೇತ ಗಂಗೆಪೂಜೆ ಸ್ನಾನ ಮುಗಿಸಿಕೊಂಡು ದೇವಸ್ಥಾನಕ್ಕೆ ಒಂದು ವರ್ಷ ವಯಸ್ಸಿನ ಮೇಕೆಯನ್ನು ಹೆಗಲ ಮೇಲೆ ಹೊತ್ತು ತರುತ್ತಾರೆ. ಇವರ ಅಬ್ಬರ ಕುಣಿತ ನೋಡಲು ಸಾವಿರಾರು ಜನ ಜಮಾಯಿಸುತ್ತಾರೆ. ಪೋತರಾಜರು ಮರಿ ಹೋತವನ್ನು ಸುಮಾರು ಒಂದು ಎರಡು ಗಂಟೆಗಳ ಕಾಲು ಎತ್ತಿ ಕುಣಿಸಿ ಸುತ್ತು ಮಾಡುತ್ತಾರೆ. ಹೀಗೆ ಮಾಡುತ್ತ ಎಲ್ಲರ ಗಮನ ಸೆಳೆಯುವಷ್ಟರಲ್ಲಿ ತಮಟೆಯ ಶಬ್ದ ತಾರಕಕ್ಕೇರುತ್ತದೆ. ಇಷ್ಟೆಲ್ಲಾ ಅಬ್ಬರದ ನಡುವೆ ಮೇಕೆಗೆ ಗಾಬರಿಯಿಂದ ಮೂರ್ಛೆ ಬಂದಂತಾಗುತ್ತದೆ. ನಂತರ ಈ ಹೋತುಮರಿಯನ್ನು ಪೂಜಿಸಿ ಮೇಕೆಯ ಹಿಂದಿನ ಕಾಲುಗಳನ್ನು ತನ್ನ ಕಾಲುಗಳ ಮಧ್ಯೆ ಸಿಕ್ಕಿಸಿ ಮುಂದಿನ ಕಾಲುಗಳನ್ನು ಹೆಗಲ ಮೇಲಿರಿಸಿ ಕುತ್ತಿಗೆಯನ್ನು ಕಚ್ಚಿ ಗಾಯಗೊಳಿಸಿ ಸಿಗಿದು ಈ ಪುಟ್ಟ ಮೇಕೆ ಮರಿಯನ್ನು

ಸಾಯಿಸಿಬಿಡುತ್ತಾನೆ. ಹೀಗೆ ಮಾಡುವಾಗ ಹೋತ ಅರಚಬಾರದಂತೆ ಅರಚಿದರೆ ಈ ಗ್ರಾಮಕ್ಕೆ ವಿಘ್ನವಂತೆ ಎಂಬ ಇತ್ಯಾದಿ ನಂಬಿಕೆಗಳಿವೆ.

ಹೀಗೆ ಪೋತರಾಜನು ಹೋತು ಮರಿಯನ್ನು ಸಿಗಿಯುವ ವೇಳೆ ಸುತ್ತ ನೆರೆದವರು ಎಲ್ಲರು ಕೇಕೆ ಹಾಕುತ್ತ ತಮಟೆ ಬಾರಿಸುತ್ತ ಆತನನ್ನು ಪ್ರೋತ್ಸಾಹಗೊಳಿಸುತ್ತಾರೆ. ಗಾಯಗೊಳಿಸಿದ ಭಾಗವನ್ನು ದೇವರ ಸನ್ನಿಧಿಯಲ್ಲಿ ಮಾತ್ರ ಬಿಡುತ್ತಾರೆ.

ಪಾಳೇಯಗಾರರ ಪ್ರದೇಶದಲ್ಲಿ ಜನಸಾಮಾನ್ಯರು ಅನೇಕ ಜನಪದ ಸ್ತ್ರೀದೇವತೆಗಳನ್ನು ಪೂಜಿಸುತ್ತಿದ್ದರು ಎಂಬುದಕ್ಕೆ ಇಂದಿಗೂ ಆಚರಿಸಲ್ಪಡುತ್ತಿರುವ ಹಬ್ಬಹರಿದಿನ, ಜಾತ್ರೆಗಳೇ ಸಾಕ್ಷಿ.

ಇಂತಹ ಧಾರ್ಮಿಕ ವಿಧಿಗಳನ್ನು ನಮ್ಮ ಜನಪದರು ತಮ್ಮದೇ ಆದ ವಿಶಿಷ್ಟ ಶೈಲಿಯಲ್ಲಿ ಆಚರಿಸುತ್ತಿದ್ದರು ಎಂದು ಹೇಳಬಹುದು. ಇದು ಆ ದೇವತೆಯ ಬಗೆಗಿರುವ ಅಪಾರ ಭಕ್ತಿ ಹಾಗೂ ಕಲ್ಪನೆಯನ್ನು ಸ್ಪಷ್ಟಪಡಿಸುತ್ತದೆ. ಇವರ ಬಗೆಗಿನ ಹಲವು ಕಲ್ಪನೆಗಳು ಜನರ ವಿಶಿಷ್ಟ ಮನೋಭಾವವನ್ನು ತಿಳಿಸುತ್ತವೆ. ಹೀಗೆ ಇಂದಿನ ಆಚರಣೆಯ ವಿವರಗಳನ್ನು ಪರಿಶೀಲಿಸಿದರೆ ಅವುಗಳು ಸಾಂಪ್ರದಾಯಕವಾಗಿ ಮತ್ತು ಅನೂಚಾನವಾಗಿ ಬಹು ಹಿಂದಿನಿಂದಲೂ ಅಂದರೆ ಪಾಳೇಯಗಾರರ ಕಾಲದಿಂದಲೂ ನಡೆದುಕೊಂಡು ಬಂದಿದ್ದಿರಬಹುದೆಂದು ಊಹಿಸಬಹುದಾಗಿದೆ.

ಇಲ್ಲಿನ ಪಾಳೆಯಗಾರರು ಶಿಷ್ಟ ಸಂಪ್ರದಾಯವನ್ನು ಬಿಡದೆ ಜಾನಪದ ಬದುಕಿಗೆ ಹತ್ತಿರವಾದ ಸಂಸ್ಕೃತಿಯನ್ನುಪೋಷಿಸಿ ಬೆಳೆಸಿದರು. ಇದರಿಂದ ಸಾಮಾನ್ಯ ಜನರ ಸಂಘಟನೆ ಅವರಿಗೆ ಸಾಧ್ಯವಾಯಿತು. ಹಾಗೂ ಅನೇಕ ಜಾನಪದ ಸಂಸ್ಕೃತಿಯ ಆಚರಣೆ ಪ್ರಕಾರಗಳು ಉಳಿದು ಬರುವುದಕ್ಕೆ ಇವರು ಕಾರಣರಾಗಿದ್ದಾರೆ.

೪.೪. ಸಾಮಾಜಿಕ ಕಾರ್ಯಗಳು

ಪಾಳೇಗಾರರು ತಮ್ಮ ಪ್ರದೇಶದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲು ಬೊಮ್ಮಲಿಂಗನ ಕೆರೆಯನ್ನು ಕಟ್ಟಿಸಿದ್ದಾರೆ. ಕೆರೆಯ ನಿರ್ಮಾಣದ ಕಾಲಮಾನ ಮತ್ತು ಕಟ್ಟಿಸಿದಂತಹ ಪಾಳೆಗಾರನ ಹೆಸರು ತಿಳಿದು ಬಂದಿಲ್ಲ. ಈ ಬೊಮ್ಮಲಿಂಗನು ಅರಸನೋ ಅಥವಾ ಸಾಮಾನ್ಯನೋ? ಎಂಬುದು ತಿಳಿದು ಬಂದಿಲ್ಲ. ಸ್ಥಳೀಯರ ಪ್ರಕಾರ ಈ ಕೆರೆಯು ಪಾಳೆಯಗಾರರ ಆಡಳಿತ ಅವಧಿಯಲ್ಲಿ ಕಟ್ಟಿಸಿದಂತಹ ಕೆರೆಯಾಗಿದೆ ಎಂದು ತಿಳಿಯುತ್ತದೆ. ಪಾಳೆಯಗಾರರ ವಂಶದ ಪ್ರಸಿದ್ಧನಾದ ಬೊಮ್ಮಂತ ರಾಜನೇ ಈ ಕೆರೆಯನ್ನು ನಿರ್ಮಾಣ ಮಾಡಿರಬಹುದು. ಈ ಕೆರೆಯು ಈ ಪಾಳೆಯಗಾರರ ಹೆಸರನ್ನು ಹೊಂದಿದ್ದು ಕಾಲಕ್ರಮೇಣ ಬೊಮ್ಮಲಿಂಗನ ಕೆರೆಯಾಗಿರಬಹುದು. ಜನರಿಗೆ ಕುಡಿಯಲು ಬಾವಿಗಳನ್ನು ನಿರ್ಮಾಣ ಮಾಡಿದ್ದಾರೆ.

ಈ ಪಾಳೆಯಗಾರರು ಅನೇಕ ಕೆರೆಗಳನ್ನು, ಬಾವಿಗಳನ್ನು ಗ್ರಾಮಗಳನ್ನು ಅಭಿವೃದ್ಧಿಪಡಿಸಿದ್ದಾರೆ. ಗ್ರಾಮದಲ್ಲಿ ಕಂಡುಬರುವ ಏಣಿ ಈರಪ್ಪ ಬಾವಿ, ಬೊಮ್ಮಕ್ಕಬಾವಿಗಳನ್ನು ಕಾಣಬಹುದು. ಬೊಮ್ಮಂತರಾಜನ ಕಾಲದಲ್ಲಿ ಹಿರೇಹಾಳು ಗ್ರಾಮವನ್ನು ಅಭಿವೃದ್ಧಿಪಡಿಸಲಾಗಿದೆ.[೭]

೪.೫. ಮನೋರಂಜನೆ

ಜನರು ತಮ್ಮ ಬಿಡುವಿನ ವೇಳೆಯನ್ನು ಕಳೆಯಲು ಹಾಗೂ ಮನಸ್ಸಿಗೆ ಬೇಸರವಾದಾಗ ಉಲ್ಲಾಸಗೊಳ್ಳಲು ಅನೇಕ ಹವ್ಯಾಸಗಳನ್ನು ಬೆಳೆಸಿಕೊಂಡಿದ್ದರು. ಅದರಲ್ಲಿ ಬೇಟೆ ಒಂದಾಗಿದೆ. ಮೂಲತ: ಬೇಡರ ಜಾತಿಗೆ ಸೇರಿದ ಗುಡೇಕೋಟೆ ಪಾಳೆಯಗಾರರದು ಮೂಲ ವೃತ್ತಿ ಬೇಟೆಯಾಡುವುದಾಗಿತ್ತು. ಇವರು ಆಗಾಗ್ಗೆ ಕಾಡಿನಲ್ಲಿ ಬೇಟೆಗೆ ಹೋಗುತ್ತಿದ್ದರು. ಇವತ್ತಿನ ಸಂದರ್ಭದಲ್ಲಿ ನೋಡಿದಾಗ ಇಲ್ಲಿಯ ಜನರು ದಸರಾ, ಯುಗಾದಿ ಇತರೆ ಹಬ್ಬಗಳಲ್ಲಿ ಹವ್ಯಾಸಕ್ಕಾಗಿ ಬೇಟೆಯಾಡುತ್ತಾರೆ. ಇದನ್ನು ಅವಲೋಕಿಸಿದಾಗ ಪಾಳೆಯಗಾರರು ಬೇಟೆಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು ಎಂದು ಕಂಡುಬರುತ್ತದೆ.

೪.೬. ವೈವಾಹಿಕ ಸಂಬಂಧಗಳು

ಗುಡೇಕೋಟೆ, ವ್ಯಾಪಲಿ, ಜರಿಮಲೆ, ಕನಕಗಿರಿ, ಚಿತ್ರದುರ್ಗ, ಹೊಸಕೋಟೆ, ನಾಯಕನಹಟ್ಟಿ, ಕ್ಯಾದಿಕೇರಿ ಈ ಎಂಟು ಸಂಸ್ಥಾನಗಳು ಹೊಂದಿರುವ ವೈವಾಹಿಕ ಸಂಬಂಧವನ್ನು ತಿಳಿಸುವ ದಾಖಲೆಯೊಂದರಲ್ಲಿ ಈ ರೀತಿಯ ಮಾಹಿತಿಯು ಕಂಡುಬರುತ್ತದೆ. ವ್ಯಾಪಲಿ ಸಂಸ್ಥಾನ ಮುದ್ಧವೀರಪ್ಪ ನಾಯಕರ ಗರ್ಭದಲ್ಲಿ ಜನಿಸಿದವರ ಹೆಸರುಗಳು:

(೧) ನೇ ಪುತ್ರ ಓಬಪ್ಪ (೨) ನೇ ಪುತ್ರ ಅಪ್ಪಯ್ಯ (೩)ನೇ ಪುತ್ರ ವೆಂಕಪ್ಪ (೪)ನೇ ಪುತ್ರ ನರಶಿಂಗಪ್ಪ (೫)ನೇ ಪುತ್ರಿ ಚಿದಂಬರಮ್ಮ (೬)ನೇ ಪುತ್ರಿ ಸಣ್ಣ ಹನುಮಪ್ಪನಾಯಕರ ತಾಯಿ ನಾಲ್ಕು ಮಂದಿ ಗಂಡು ಮಕ್ಕಳು ಇಬ್ಬರು ಹೆಣ್ಣುಮಕ್ಕಳು ಅಂತು ಆರು ಮಂದಿ ವ್ಯಾಪಲಿ ಸಂಸ್ಥಾನ ಮುದ್ದಪ್ಪನಾಯಕರ ಮಕ್ಕಳಾಗಿದ್ದರು. ಸದ್ರಿ ಚಿದಂಬನರಮ್ಮನ ಜರಿಮಲಿ ಸಂಸ್ಥಾನ ಸಂಣ ಸಿದ್ಧಪ್ಪನಾಯ್ಕರಿಗೆ ಕೊಟ್ಟಿದೆ. ಚಿದಂಬರಮ್ಮನವರ ಹೊಟ್ಟೇಲಿ ಹುಟ್ಟಿದವರು ವೆಂಕಮ್ಮನವರು. ಸದ್ರಿ ವೆಂಕಮ್ಮನವರನ್ನು ಹೊಸಕೋಟೆ ಸಂಸ್ಥಾನ ತಯ್ಯಪ್ಪನಾಯ್ಕರ ಮೊಮ್ಮಗ ತಯ್ಯಪ್ಪ ನಾಯ್ಕರಿಗೆ ಕೊಟ್ಟಿದೆ. ಸದ್ರಿ ತಯ್ಯಪ್ಪನಾಯ್ಕರ ಗರ್ಭದಲ್ಲಿ ಜನನವಾದವರೇ ವ್ಯಾಪಲಿ ಸಂಸ್ಥಾನ ಮುದ್ದಪ್ಪನಾಯಕರ ಮಗಳಾದ ಚಿದಂಬರಮ್ಮನವರ ಮೊಮ್ಮಕ್ಕಳು ಶೇಷಪ್ಪನಾಯ್ಕರು, ಬಂಗಾರಮ್ಮ, ವೆಂಕಪ್ಪನಾಯ್ಕರು, ಪಟ್ಟಪ್ಪನಾಯ್ಕರು, ಶಿದ್ದಮ್ಮ, ಶಿದ್ದಪ್ಪನಾಯ್ಕರು, ಚಿದಂಬರಮ್ಮ, ನಂದಮ್ಮ, ಕನಕಮ್ಮ, (೫)ನೇ

ಪುತ್ರಿ ಶಿದ್ದಮ್ಮನವರನ್ನು ಗುಡೇಕೋಟೆ ಸಂಸ್ಥಾನ ವೆಂಕಟರಾಜರ ಮಕ್ಕಳಾದ ತಾತ್ತೇರಾಜರಿಗೆ ಕೊಟ್ಟಿದೆ. ಸದ್ರಿ ಗುಡೇಕೋಟೆ ಸಂಸ್ಥಾನ ವೆಂಕಟರಾಜರಿಗೆ ಕನಕಗಿರಿ ಸಂಸ್ಥಾನ ತಾತ ಅವಳಪ್ಪನವರ ಮಗಳು ಕಾಟಮ್ಮನವರನ್ನು ಕೊಟ್ಟಿದೆ. ತಾತ್ತೇರಾಜರು-ಚಿನ್ನೇರಾಜರು-ನೀಲಮ್ಮಾಜಿಗಳು ಅಂತು ಇಬ್ಬರು ಗಂಡು ಮಕ್ಕಳು ಒಬ್ಬ ಹೆಣ್ಣುಮಗಳು. ಸದ್ರಿ ನೀಲಮ್ಮಾಜಿಗಳನ್ನು ಹೊಸಕೋಟೆ ಸಂಸ್ಥಾನ ಬಂಗಾರಪ್ಪ ನಾಯ್ಕರಿಗೆ ಕೊಟ್ಟಿದೆ. ಸದ್ರಿ ಬಂಗಾರಪ್ಪ ನಾಯ್ಕರ ಗರ್ಭದಲ್ಲಿ ಜನನವಾದ ವಿರೂಪಾಕ್ಷಮ್ಮನವರನ್ನು ಕನಕಗಿರಿ ಸಂಸ್ಥಾನದ ತಾತ ಅವಳಪ್ಪನವರ ಮೊಮ್ಮಗ ಚಿನ್ನೇರಾಜರಿಗೆ, ಗುಡೇಕೋಟೆ ಸಂಸ್ಥಾನ ಬೊಮ್ಮಂತರಾಜರಿಗೆ ಚಿದಂಬರಮ್ಮನವರ ಅಳಿಯನಾದ ತಾಯಪ್ಪನಾಯ್ಕರ ತಂಗಿ ಬಂಗಾರಮ್ಮನವರನ್ನು ಕೊಟ್ಟಿದೆ. ಸದ್ರಿ ತಯ್ಯಪ್ಪನಾಯ್ಕರ ತಂಗಿಯವರಾದ ತಿಮ್ಮಮ್ಮ, ಹುಚ್ಚಮ್ಮ, ತನ್ನಮ್ಮ ಈ ಮೂವರು ಪೈಕಿ ಜರಿಮಲಿ ಸಂಸ್ಥಾನ ಒರೇಧುರಿ ಶಿದ್ಲಿಂಗಪ್ಪ ನಾಯ್ಕರಿಗೆ ತಿಮ್ಮಮ್ಮನವರನ್ನು ಕೊಟ್ಟಿದೆ. ಸದ್ರಿ ಒರೇಧೋರಿ ಶಿದ್ಲಿಂಗಪ್ಪನಾಯ್ಕರ ತಮ್ಮ ಹೊಂತಾರನಾಯ್ಕರಿಗೆ ತನ್ನಮ್ಮನವರನ್ನು ಕೊಟ್ಟಿದೆ. ಚಿದಂಬರಮ್ಮನವರ ಮಲಮಗನಾದ ರಾಮಪ್ಪನಾಯ್ಕರಿಗೆ ಹುಚ್ಚಮ್ಮನವರನ್ನು ಕೊಟ್ಟಿದೆ. ಚಿದಂಬರಮ್ಮನವರ ಮಲಮಕ್ಕಳಿಂದ ಲಕ್ಷ್ಮಪ್ಪನಾಯ್ಕರಿಗೆ ನಾಯಕನ ಹಟ್ಟಿ ಸಂಸ್ಥಾನ ಕುಲದ ಧೋರಿ ರುದ್ರಪ್ಪನವರ ಮಗಳು ಮಲ್ಲಮ್ಮನವರನ್ನು ಕೊಟ್ಟಿದೆ. ಕನಕಗಿರಿ ಸಂಸ್ಥಾನ ತಾತ ಅವಳಪ್ಪನವರ ಮಗಳು ಕಾದಮ್ಮನವರನ್ನು ಲಗ್ನ ಮಾಡಿಕೊಂಡ ಗುಡೇಕೋಟೆ ಸಂಸ್ಥಾನ ದೊರೆ ವೆಂಕಟರಾಜರ ಅಣ್ಣ ರಾಜರಾಜರಿಗೆ ಚಿತ್ರದುರ್ಗ ಸಂಸ್ಥಾನದ ಮತ್ತಿ ತಿಮ್ಮಣ್ಣನಾಯ್ಕರ ಮಗಳು ಲಕ್ಷ್ಮಮ್ಮ ನಾಗತಿಯನ್ನು ಕೊಟ್ಟಿದೆ. ಸದರಿ ಲಕ್ಷ್ಮಮ್ಮ ನಾಗತಿಯವರ ಗರ್ಭದಲ್ಲಿ ಜನನವಾದವರು ಗುಡೇಕೋಟೆ ಸಂಸ್ಥಾನದ ಜಟಂಗಿ ರಾಜರು. ಬಂಗಾರಮ್ಮ-ಕನಕಮ್ಮ ಈ ಉಭಯ ಹೆಂಣ್ಣುಮಕ್ಕಳನ್ನು ವ್ಯಾಪಲಿ ಸಂಸ್ಥಾನದ ಚಿದಂಬರಮ್ಮನವರ ಅಳಿಯನಾದ ತಯ್ಯಪ್ಪನಾಯ್ಕರ ತಂದೆ ಹೊಸಕೋಟೆ ಸಂಸ್ಥಾನದ ವೆಂಕಪ್ಪನಾಯ್ಕರಿಗೆ ಕೊಟ್ಟಿದೆ. ಸದ್ರಿ ಗುಡೇಕೋಟೆ ಸಂಸ್ಥಾನದ ಜಟಂಗಿರಾಜರಿಗೆ ಹೊಸಕೋಟೆ ಸಂಸ್ಥಾನದ ಬಂಗಾರಪ್ಪನಾಯ್ಕರ ತಂಗಿ ಬಂಗಾರಮ್ಮನವರನ್ನು ಕೊಟ್ಟಿದೆ. ಸದ್ರಿ ಜಟಂಗಿರಾಜರ ಮಗನು ಕ್ಯಾದಿಗೇರಿ ಸಂಸ್ಥಾನದ ವೆಂಕಟಪ್ಪ ನಾಯ್ಕರ ಮಗಳು ಲಕ್ಷ್ಮಮ್ಮನವರನ್ನು ಲಗ್ನಮಾಡಿಕೊಂಡನು. ಗುಡೇಕೋಟೆ ಸಂಸ್ಥಾನಿಕರು-ಜರಿಮಲೆ ಸಂಸ್ಥಾನಿಕರು-ಹೊಸಕೋಟೆ ಸಂಸ್ಥಾನಿಕರು ಈ ಮೂರು ಸಂಸ್ಥಾನಗಳು ಬಂಧತ್ವ ಮಾಡಿಕೊಂಡಿರುವುದಲ್ಲದೆ ವ್ಯಾಪಾಲಿ ಸಂಸ್ಥಾನದಲ್ಲಿ ಕನಕಗಿರಿ ಸಂಸ್ಥಾನದಲ್ಲಿ - ಚಿತ್ರದುರ್ಗ ಸಂಸ್ಥಾನದಲ್ಲಿ - ನಾಯಕನಹಟ್ಟಿ ಸಂಸ್ಥಾನದಲ್ಲಿ ಕ್ಯಾದಿಗೇರಿ ಸಂಸ್ಥಾನದಲ್ಲಿ ಬಂಧುತ್ವ ಮಾಡಿಕೊಂಡಿರುತ್ತಾರೆ. (೫) ಆಯದು ಸಂಸ್ಥಾನಗಳು ವಿನಹ ಪರಂತು ಇನ್ನೊಂದು ಸ್ಥಳಗಳಲ್ಲಿ ಜರಿಮಲೆಯವರು ಗುಡೇಕೋಟೆಯವರು -ಹೊಸಕೋಟೆಯವರು ಅಂತು ಮೂರು ಸಂಸ್ಥಾನಗಳು ಬೇರೆ ಎಲ್ಲಿಯೂ ಬಂಧುತ್ವ ಮಾಡಿಯಿಲ್ಲ. ನಾಯಕನಹಟ್ಟಿ ಸಂಸ್ಥಾನದವರು

ಭರ್ಬಿ ಮನೆಗಳಲ್ಲಿ ಬಂಧತ್ವ ಮಾಡಿಯಿರುತ್ತಾರೆಂದು ವಾರ್ತೆ ಕೇಳಿ ಅವರನ್ನು ಗುಡೇಕೋಟೆಯವರು-ಹೊಸಕೋಟೆಯವರು-ಜರಿಮಲಿಯವರು-ವಿಸರ್ಜನೆ ಮಾಡಿರುತ್ತಾರೆ. ಸದ್ರಿ ವ್ಯಾಪಲಿ ಸಂಸ್ಥಾನದ ಚಿದಂಬರಮ್ಮನವರ ಮಲಮಗನಾದ ಜರಿಮಲಿ ಸಂಸ್ಥಾನದ ಲಕ್ಕಪ್ಪನಾಯ್ಕರ ಮಗಳನ್ನು ಕೋಸಿಗಿ ಸಂಸ್ಥಾನ ಶಿದ್ಧಪ್ಪನಾಯ್ಕರಿಗೆ ಕೊಟ್ಟಿದೆ. ಇತ್ತೀಚೆಗೆ ಜರಿಮಲೆ ಸಂಸ್ಥಾನ ಶಿದ್ಲಿಂಗಪ್ಪನಾಯ್ಕರ ಮಗ ಶಿದ್ಧಪ್ಪನಾಯ್ಕರು ತುಡೇ ಕಲ್ಲುವಳಗೆ ಲಗ್ನ ಮಾಡಿಕೊಂಡಿದ್ದಾರೆ. ತುಡೇ ಕಲ್ಲು ಸಂಸ್ಥಾನದವರ ಮೈಮಾಟ ನಮಗೆ ತಿಳಿಯದು. ಆದ್ದರಿಂದ ಸುಮ್ಮನೆಯಿದ್ದೀವಿ.

ಈ ದಾಖಲೆಯು ವ್ಯಾಪಲಿ ಸಂಸ್ಥಾನ, ಹೊಸಕೋಟೆ ಸಂಸ್ಥಾನ, ಗುಡೇಕೋಟೆ ಸಂಸ್ಥಾನ, ಕನಕಗಿರಿ ಸಂಸ್ಥಾನ, ಜರಿಮಲಿ ಸಂಸ್ಥಾನ, ಚಿತ್ರದುರ್ಗ ಸಂಸ್ಥಾನ, ನಾಯಕನಹಟ್ಟಿ ಸಂಸ್ಥಾನ ಮತ್ತು ಕ್ಯಾಸಗೇರಿ ಸಂಸ್ಥಾನ, ಈ ಎಂಟು ಸಂಸ್ಥಾನಗಳ ವೈವಾಹಿಕ ಸಂಬಂಧವನ್ನು ತಿಳಿಸುತ್ತದೆ. ಇದನ್ನು ಗಮನಿಸಿದಾಗ ಅಂದಿನ ಪಾಳೇಗಾರರ ರಾಜಕೀಯ ಸಂಬಂಧಗಳ ಜೊತೆಗೆ ರಕ್ತಸಂಬಂಧವು ಬಹಳ ಗಟ್ಟಿತನದಿಂದ ಕೂಡಿದ್ದು ಎಲ್ಲರೂ ಒಂದೇ ಕುಟುಂಬದವರಂತೆ ಕಂಡುಬರುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ವೈವಾಹಿಕ ಸಂಬಂಧವನ್ನು ಈ ಕೆಳಗಿನಂತೆ ಸೂಚಿಸಬಹುದಾಗಿದೆ.

ವ್ಯಾಪಲಿ ಸಂಸ್ಥಾನದ ಮುದ್ದಪ್ಪನಾಯಕನ ಮಗಳು ಚಿದಂಬರಮ್ಮ, ಈಕೆಯ ಗಂಡ ಜರಮಲಿ ಸಂಸ್ಥಾನದ ಸಣ್ಣ ಶಿದ್ದಪ್ಪನಾಯಕ, ಮಗಳು ವೆಂಕಮ್ಮ, ಈಕೆಯ ಗಂಡ ಹೊಸಕೋಟೆ ಸಂಸ್ಥಾನದ ತಯ್ಯಪ್ಪನಾಯಕ, ಮಗಳು ಶಿದ್ದಮ್ಮ, ಈಕೆಯ ಗಂಡ ಗುಡೇಕೋಟೆ ಸಂಸ್ಥಾನದ ವೆಂಕಟರಾಜರ ಮಗ ತಾತ್ತೇರಾಜ. ಈ ಮೇಲಿನ ವಿವರಣೆಯು ವ್ಯಾಪಲಿ, ಜರಿಮಲಿ, ಹೊಸಕೋಟೆ, ಗುಡೇಕೋಟೆ ಸಂಸ್ಥಾನದ ರಕ್ತ ಸಂಬಂಧವನ್ನು ತಿಳಿಸುತ್ತದೆ.

ಕನಕಗಿರಿ ಸಂಸ್ಥಾನದ ತಾತ ಅವಳಪ್ಪನವರ ಮಗಳು ಕಾಟಮ್ಮ, ಈಕೆಯ ಗಂಡ ಗುಡೇಕೋಟೆ ಸಂಸ್ಥಾನದ ವೆಂಕಟರಾಜ, ಮಗ ಗುಡೇಕೋಟೆ ಬೊಮ್ಮಂತ ರಾಜ, ಮಗಳು ನೀಲಮ್ಮ, ಈಕೆಯ ಗಂಡ ಹೊಸಕೋಟೆ ಸಂಸ್ಥಾನದ ಬಂಗಾರಪ್ಪ ನಾಯಕ, ಮಗಳು ವಿರುಪಾಕ್ಷಮ್ಮನವರು, ಈಕೆಯ ಗಂಡ ಕನಕಗಿರಿ ಸಂಸ್ಥಾನದ ತಾತ ಅವಳಪ್ಪನವರ ಮೊಮ್ಮಗ ಚಿನ್ನೇರಾಜ. ಈ ಸಂಬಂಧವು ಕನಕಗಿರಿ, ಗುಡೇಕೋಟೆ, ಹೊಸಕೋಟೆ ಪಾಳೇಗಾರರ ಸಂಬಂಧವನ್ನು ತಿಳಿಸುತ್ತದೆ.

ಜರಿಮಲಿ ಸಂಸ್ಥಾನದ ಚಿದಂಬರಮ್ಮನವರ ಅಳಿಯನಾದ ತಯ್ಯಪ್ಪನಾಯಕರ ನಾಲ್ವರು ಸಹೋದರಿಯರಲ್ಲಿ ಬಂಗಾರಮ್ಮನನ್ನು ಗುಡೇಕೋಟೆಯ ಬೊಮ್ಮಂತರಾಜನಿಗೆ, ಜರಿಮಲಿ ಸಂಸ್ಥಾನದಲ್ಲೇ ಇರುವ ಹಿರೇದೊರೆಗಳಾದ ಸಿದ್ಲಿಂಗಪ್ಪನಾಯಕನಿಗೆ ತಿಮ್ಮಮ್ಮನನ್ನು, ಅವನ ತಮ್ಮ ಹೊಂತಾರನಾಯಕನಿಗೆ ತನ್ನಮ್ಮನನ್ನು, ಚಿದಂಬರಮ್ಮನವರ ಮಲಮಗನಾದ ರಾಮಪ್ಪನಿಗೆ ಹುಚ್ಚಮ್ಮ

ಎಂಬುವರನ್ನು ವಿವಾಹ ಮಾಡಿ ಕೊಡುತ್ತಾರೆ. ಮತ್ತೊಬ್ಬ ಮಲಮಗನಾದ ಲಕ್ಷ್ಮಪ್ಪನಾಯಕನಿಗೆ ನಾಯಕನ ಹಟ್ಟಿ ಸಂಸ್ಥಾನದ ದೊರೆ ರುದ್ರಪ್ಪನಾಯಕರ ಮಗಳು ಮಲ್ಲಮ್ಮನೊಡನೆ ವಿವಾಹ ಮಾಡಿ ನಾಯಕನಹಟ್ಟಿಯ ಸಂಬಂಧವನ್ನು ಬೆಳೆಸಿಕೊಳ್ಳುತ್ತಾರೆ.

ಗುಡೇಕೋಟೆಯ ವೆಂಕಟರಾಜರ ಅಣ್ಣ ರಾಜರಾಜರಿಗೆ, ಚಿತ್ರದುರ್ಗ ಪಾಳೆಯಗಾರರಾದ ಮತ್ತಿ ತಿಮ್ಮಣ್ಣನಾಯಕರ ಮಗಳು ಲಕ್ಷ್ಮಮ್ಮನಾಗತಿಯನ್ನು ಕೊಟ್ಟಿದೆ. ಇವರ ಮಕ್ಕಳು ಜಟಂಗಿರಾಜ. ಬಂಗಾರಮ್ಮ, ಕನಕಮ್ಮ ಇಬ್ಬರು ಹೆಣ್ಣುಮಕ್ಕಳನ್ನು ಹೊಸಕೋಟೆ ಸಂಸ್ಥಾನದ ವೆಂಕಟಪ್ಪನಾಯಕರಿಗೆ ಕೊಡುತ್ತಾರೆ. ಅದೇ ಸಂಸ್ಥಾನದ ಭಂಗಾರಪ್ಪ ನಾಯಕರ ತಂಗಿ ಭಂಗಾರಮ್ಮನನ್ನು ಗುಡೇಕೋಟೆಯ ಜಟಂಗಿರಾಜರು ವಿವಾಹವಾಗುತ್ತಾರೆ. ಇವರಿಬ್ಬರಿಗೆ ಹುಟ್ಟಿದ ಪುತ್ರ ವೆಂಕಟರಾಜರಿಗೆ ಕ್ಯಾದಿಗೇರಿ ಸಂಸ್ಥಾನದ ವೆಂಕಟಪ್ಪನಾಯಕರ ಮಗಳು ಲಕ್ಷ್ಮಮ್ಮನನ್ನು ಕೊಡುತ್ತಾರೆ. ಹೀಗೆ ಗುಡೇಕೋಟೆ-ಚಿತ್ರದುರ್ಗ-ಹೊಸಕೋಟೆ-ಕ್ಯಾದಿಗೇರಿ ಸಂಸ್ಥಾನಗಳಲ್ಲೂ ವಿವಾಹ ಸಂಬಂಧವೇರ್ಪಡುತ್ತದೆ. ಇಲ್ಲಿ ಕಾಗದ ಪತ್ರದಲ್ಲಿರುವ ದಾಖಲೆಯೊಂದು ಇಷ್ಟೊಂದು ಮಾಹಿತಿಯನ್ನು ನೀಡುತ್ತದೆ. ಇದನ್ನು ಪುರಸ್ಕರಿಸುವಂತಹ ಇವರ ಚಾರಿತ್ರಿಕ ದಾಖಲೆಗಳು ದೊರೆಯುವುದಿಲ್ಲ. ಅಂತಹ ಆಧಾರಗಳು ದೊರೆತಾದ ಈ ದಾಖಲೆಯನ್ನು ವಸ್ತುನಿಷ್ಠವಾಗಿ, ತೌಲನಿಕವಾಗಿ ಅಧ್ಯಯನ ಮಾಡಿ ಸತ್ಯಾಸತ್ಯತೆಯನ್ನು ನಿರ್ಧರಿಸಬಹುದಾಗಿದೆ. ಒಟ್ಟಾರೆಯಾಗಿ ಕಣ್ಮರೆಯಾಗಿರುವ ಪಾಳೇಗಾರರ ಚರಿತ್ರೆಯ ಮೇಲೆ ಅಸ್ಪಷ್ಟವಾಗಿಯಾದರೂ ಮಾಹಿತಿಯನ್ನು ಒದಗಿಸಿಕೊಡುವ ಈ ದಾಖಲೆಯು ಅತ್ಯಂತ ಮಹತ್ವಪೂರ್ಣವಾಗಿದೆ ಹಾಗೂ ಪಾಳೇಗಾರರ ಚರಿತ್ರೆ ಶೋಧಿಸಿ ಹೊರಡುವ ತಜ್ಞರಿಗೆ ಇದೊಂದು ದಾರಿದೀಪದಂತಿದೆ.

ಟಿಪ್ಪಣಿಗಳು

೦೧. ಚನ್ನಬಸಪ್ಪ ಎಸ್.ಪಾಟೀಲ್, **ಕರ್ನಾಟಕ ಶಾಸನ ಸಂಪುಟ**, ೧೯೯೭, ಪು.೮೧.

೦೨. ಅದೇ, ಪು.೧೬೪.

೦೩. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೬೩.

೦೪. ಚನ್ನಬಸಪ್ಪ ಎಸ್.ಪಾಟೀಲ, ಕರ್ನಾಟಕ ಶಾಸನ ಸಂಪುಟ, ೧೯೯೭, ಪು.೧೬೪.

೦೫. ಅದೇ, ಪು.೧೫೬.

೦೬. ಯೋಗೀಶ್ವರಪ್ಪ ಡಿ.ಎನ್. **ಹಾಗಲವಾಡಿಯ ನಾಯಕರು**, ೧೯೯೯, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪುಟ೧೪೭.

೦೭. ಕಲಬುರ್ಗಿ ಎಂ.ಎಂ.(ಸಂ), **ಕರ್ನಾಟಕದ ಕೈಫಿಯತ್ತುಗಳು**, ೧೯೯೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೫೬೩.

ಅಧ್ಯಾಯ ೫

ಗುಡೇಕೋಟೆಯಲ್ಲಿ ಕಂಡುಬರುವ ಸ್ಮಾರಕಗಳು

ಗುಡೇಕೋಟೆ ಪ್ರಾಚೀನ ಕಾಲದ ಗ್ರಾಮ. ಇದರ ಪ್ರಾಚೀನತೆಯನ್ನು ಕ್ರಿ.ಪೂ.ದಿಂದಲೂ ಗುರುತಿಸಬಹುದು. ಇಲ್ಲಿ ಕಂಡು ಬರುವ ಗುಹಾಚಿತ್ರ. ಆದಿಕಾಲದ ಮಾನವ ನೆಲೆಸಿದ ತಾಣಗಳಲ್ಲದೆ, ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಪ್ರಾಚ್ಯಾವಶೇಷಗಳನ್ನು ಗುರುತಿಸಬಹುದು. ಇವಿಷ್ಟೆ ಅಲ್ಲದೆ ಕೆಲವೊಂದು ಶಿಲಾಶಾಸನಗಳನ್ನು ಬೆಳಕಿಗೆ ತಂದಿರುವುದು ಗಮನಾರ್ಹ.ಪ್ರಜಾಪಾಲಕರಾದ ಅರಸರು ತಮ್ಮ ಪ್ರಜೆಗಳ ಹಿತಕ್ಕಾಗಿ ಸ್ಮಾರಕಗಳಾಗಿ ಉಳಿಯುವ ಲೋಕಕಲ್ಯಾಣ ಕಾರ್ಯಗಳನ್ನು ಮಾಡಿರುವರು. ಜ್ಞಾಪಕಾರ್ಥವಾಗಿ ನೆನಪಿಗಾಗಿ ರಾಜನು ನಿರ್ಮಿಸಿದ ದೇವಾಲಯ, ಕೋಟೆ, ಗುಡಿಗಳಲ್ಲದೆ, ಮನೆ, ಅರಮನೆ, ಕೆರೆಕಟ್ಟೆ, ವೀರಗಲ್ಲು, ಮಾಸ್ತಿಕಲ್ಲು ಶಾಸನ ಮೊದಲಾದವುಗಳನ್ನು ಗಮನಿಸಬಹುದು. ಈ ಹಿನ್ನೆಲೆಯಲ್ಲಿ ಗುಡೇಕೋಟೆ ಪ್ರಾಚ್ಯಾವಶೇಷಗಳನ್ನು (ಸ್ಮಾರಕ) ವಿಶ್ಲೇಷಿಸಲಾಗುವುದು.ಮಾನವನ ವಿವಿಧ ಕಾರ್ಯಚಟುವಟಿಕೆಗಳಲ್ಲಿ ದೇವಾಲಯಗಳ ಪಾತ್ರ ಪ್ರಮುಖವಾದುದು. ಧಾರ್ಮಿಕ ನಂಬಿಕೆ ಹಬ್ಬ ಹರಿದಿನ ಮುಂತಾದವುಗಳ ಕಲ್ಪನೆ ಮತ್ತು ಆಚರಣೆಗಳ ಹಿನ್ನಲೆಯಲ್ಲಿ ವಾಸ್ತು, ಮೂರ್ತಿ, ಶಿಲ್ಪಗಳ ನಿರ್ಮಾಣ ಆರಂಭವಾಯಿತೆನ್ನಬಹುದು. ಈ ದೇವಾಲಯಗಳು ಸಮಾಜದಲ್ಲಿ ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಗಾಢವಾದ ಪರಿಣಾಮ ಬೀರಿದ್ದು, ಪ್ರಾಚೀನ ಕಾಲದಿಂದಲೂ ದೇವಾಲಯಗಳು ಶಿಕ್ಷಣಸಂಸ್ಥೆ ಸಮುದಾಯ ಕೇಂದ್ರ ಹಾಗೂ ನ್ಯಾಯಾಲಗಳಾಗಿ ಕಾರ್ಯನಿರ್ವಹಿಸುತ್ತಾ ಬಂದಿವೆ. ಅದಲ್ಲದೆ ಹಣಕಾಸಿನ ಭಂಡಾರವನ್ನು ಹೊಂದಿದ ಜಮೀನ್ದಾರಿ ವ್ಯವಸ್ಥೆಯ ಪ್ರತೀಕವೆಂಬಂತೆ ದೇವಾಲಯಗಳು ನಿರ್ಣಾಯಕವೆನಿಸಿದ್ದುಂಟು. ಅವುಗಳ ಆಶ್ರಯದಲ್ಲಿ ಸಂಗೀತ ಕೂಟ ನಾಟ್ಯ ಸಂಘಗಳಿದ್ದವು.

ದೇವಾಲಯಗಳಲ್ಲಿ ಅಂಗಭೋಗ ಮತ್ತು ರಂಗಭೋಗಗಳನ್ನು ಈ ಹಿಂದೆ ರೂಢಿಸಿಕೊಂಡಿದ್ದಲ್ಲದೆ. ದೇವರ ಸೇವೆಗೆ ಈ ಬಗೆಯ ಅನೇಕ ಆಚರಣೆಗಳು ಚಾಲ್ತಿಯಲ್ಲಿದ್ದವು.ವಾಸ್ತುಶಿಲ್ಪ ನಿರ್ಮಾಣದಲ್ಲಿ ಸಂಸ್ಕೃತಿಗೆ, ಆಧ್ಯಾತ್ಮಿಕ ಚಿಂತನೆಗೆ ಅಥವಾ ಧಾರ್ಮಿಕ ಮೂಲಕಲ್ಪನೆಗೆ ಅಧಿ ಪ್ರಾಮುಖ್ಯತೆ ಇದ್ದರೂ ಅದಕ್ಕೆ ವಿರುದ್ಧವಾದ ಕಾಮ ಕರ್ಮಾಚರಣೆ ಮತ್ತು ಲೌಕಿಕ ಸುಖಗಳನ್ನು ಅಳವಡಿಸಿಕೊಳ್ಳಲಾಗಿತ್ತು. 'ವಾಸ್ತುಶಿಲ್ಪ' ನಾಗರಿಕತೆಯನ್ನು ರೂಪಿಸುವ ಮಾತೃಕೆಯಾಗಿತ್ತು. ಅಲ್ಲದೆ ಸಂಸ್ಕೃತಿಯ ಉಗಮ ವಿಕಾಸಗಳಿಗೆ ಮೂಲಸ್ಥಾನವಾಗಿದ್ದು ಸತ್ಯ. ಅವುಗಳ ಕಾಲಾನುಕ್ರಮದ ಬೆಳವಣಿಗೆಯನ್ನು ದೇವಾಲಯದ ಮೂರ್ತಿ ಶಿಲ್ಪಗಳು, ಶೈಲ ಸನ್ನಿವೇಶ ಮತ್ತು ಸಂದರ್ಭಗಳನ್ನು ಒಡಮೂಡಿಸರುವುದು ಕಂಡು ಬರುತ್ತದೆ. ಆಧ್ಯಾತ್ಮಿಕ ಸಂಕೇತ ಹಾಗೂ ಸೌಂದರ್ಯಗಳನ್ನು ಲಕ್ಷದಲ್ಲಿಟ್ಟುಕೊಂಡು ಶಿಲ್ಪಿಯು ತನ್ನ ಕಲ್ಪನೆ ಮತ್ತು ಆದರ್ಶ ಭಾವನೆಗಳನ್ನು ಇವುಗಳಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾನೆ. ಇದು ಆಯಾ ಕಾಲಘಟ್ಟದ ಸಾಮಾಜಿಕ ಚಿತ್ರಣವನ್ನು ಬಿಂಬಿಸುತ್ತದೆ.

ಗುಹಗಳಲ್ಲಿ, ಮರದ ಪೊಟರೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವನು ವಾಸಕ್ಕೆ ಅನುಕೂಲವಾದ ಕಟ್ಟಡಗಳನ್ನು ಕಟ್ಟಿಕೊಳ್ಳುವುದನ್ನು ಕಲಿತ. ಇದು ನಾಗರಿಕತೆಯ ಜೀವನದಲ್ಲಿ ಬಹುದೊಡ್ಡ ಹೆಜ್ಜೆಯನ್ನು ಇಟ್ಟಂತಾಯಿತು. ಕ್ರಮೇಣ ಅವನ ಅನುಭವ ಬೆಳೆದಂತೆ ಸನ್ನಿವೇಶಗಳು ಬದಲಾದಂತೆ ಕಟ್ಟಡಗಳ ನಿರ್ಮಾಣದಲ್ಲಿ ಕೇವಲ ಉಪಯುಕ್ತತೆಯ ಜೊತೆಗೆ ಸೌಂದರ್ಯ ದೃಷ್ಟಿಯೂ ಬೆಳೆಯತೊಡಗಿತು. ಜಗತ್ತಿನ ಅತಿ ಪ್ರಾಚೀನವಾದ ನಾಗರಿಕತೆಗಳಲ್ಲಿ (ಉದಾ:ಗ್ರೇಟ್ ರೋಮ್ ಮತ್ತು ಸಿಂಧೂ ಇತ್ಯಾದಿ) ಬೆಳೆದು ಬಂದ ಕಟ್ಟಡಗಳ ನಿರ್ಮಾಣದ ತಂತ್ರಜ್ಞಾನವನ್ನು ನೋಡಬಹುದು. ವಾಸ್ತುಶಿಲ್ಪವು ಆಯಾ ಕಾಲದ ಮತ್ತು ಆಯಾ ಜನಾಂಗದ ಆಂತರಿಕ ಆಕಾಂಕ್ಷೆ ಅನುಭವಗಳಿಗೆ ಕನ್ನಡಿಯನ್ನು ಹಿಡಿಯಬಲ್ಲುದೆಂಬುದನ್ನು (Architecture is the nature of civilization) ಸೂಚಿಸುತ್ತದೆ. ವಾಸ್ತುಶಿಲ್ಪವು ನಾಗರಿಕತೆಯನ್ನು ರೂಪಿಸುವ ಮಾತೃಕೆ. ಅದು ತನ್ನ ಗರ್ಭದಲ್ಲಿ ನಾಗರಿಕತೆಯ ಶಿಶುವನ್ನು ಬೆಳೆಸುತ್ತದೆ.[1] ಮಾನವ ಜನಾಂಗದ ವಿಕಾಸವನ್ನು ಗುರುತಿಸುವ ವಿವಿಧ ಹಂತಗಳನ್ನು ವಾಸ್ತುಶಿಲ್ಪದ ಬೆಳವಣಿಗೆಯಲ್ಲಿ ಕಂಡುಕೊಳ್ಳಬಹುದು. "The State of Civilization of People is Judged by its Architecture"ಎಂದು ಅಲೆಗ್ಸಾಂಡರ್ ಅವರು ಹೇಳುವ ಮಾತು ಸತ್ಯ.[2] ಜನಾಂಗದ ಮೈಲಕ್ಷಣಗಳಿಗೂ ಮತ್ತು ಅದರ ಒಟ್ಟು ಮನೋ ಧರ್ಮಕ್ಕೂ ವಾಸ್ತುಶಿಲ್ಪ ಒಂದು ರೀತಿಯಲ್ಲಿ ಪ್ರತಿನಿಧಿಯಾಗಿ ಪರಿಣಮಿಸುತ್ತದೆನ್ನಬಹುದು. ವಿವಿಧ ದೇಶಗಳ ವಾಸ್ತುಶಿಲ್ಪದ ಚಾರಿತ್ರಿಕವಾದ ಬೆಳವಣಿಗೆಯನ್ನು ಗಮನಿಸಿದರೆ ಆ ಜನಾಂಗಗಳಿಗೆ, ಅನುಗುಣವಾದ ಒಂದು ಮೂಲಭೂತ ಕಲ್ಪನೆ ಅವುಗಳಲ್ಲಿ ವ್ಯಕ್ತವಾಗಿರುವುದು ಕಾಣುತ್ತದೆ.

ವಾಸ್ತುಶಿಲ್ಪಕಲೆಯ ಐತಿಹಾಸಿಕ ಅಧ್ಯಯನಕ್ಕೆ ದೊರಕುವ ವಿಶಿಷ್ಟವಾದ ಸಾಮಗ್ರಿಗಳೆಂದರೆ, ದೇವಾಲಯಗಳು, ಕೋಟೆ, ಮತ್ತು ಸ್ಮಾರಕಗಳು. ಏಕೆಂದರೆ ವಾಸದ ಮನೆಗಳಿಗಿಂತ ಹೆಚ್ಚು ಕಾಲ ಉಳಿಯುವಂತಹ ರೀತಿಯಲ್ಲಿ ಅವುಗಳನ್ನು ಕಟ್ಟಿದರು ಮತ್ತು ಉಳಿಸಿಕೊಂಡು ಬಂದರು. ಅಂದರೆ ವಾಸ್ತುಶಿಲ್ಪ ಪ್ರಧಾನವಾಗಿ ಉಳಿದು ಬೆಳೆದು ಬಂದುದು ಧಾರ್ಮಿಕ ತಳಹದಿಯ ಮೇಲೆನ್ನಬಹುದು. ಇದರ ಜೊತೆಗೆ ಇನ್ನು ಕೆಲವು ಶಕ್ತಿಗಳು ಭೌಗೋಳಿಕ ಸನ್ನಿವೇಶಗಳು ಸಾಮಾಜಿಕ ಮತ್ತು ರಾಜಕೀಯ ಪರಿವರ್ತನೆಗಳು ಐತಿಹಾಸಿಕ ಘಟನೆಗಳು-ಮೊದಲಾದವು ಇವುಗಳಲ್ಲಿ ಮುಖ್ಯವಾದವು. ಇವುಗಳ ಪ್ರಭಾವದಿಂದ ಬದಲಾವಣೆಗೊಂಡ ಅಭಿರುಚಿಗೆ ತಕ್ಕಂತೆ ವಾಸ್ತುಶಿಲ್ಪ ಬೆಳೆದು ಬಂದಿತು.

ವಾಸ್ತುಶಿಲ್ಪದ ಚರಿತ್ರೆಯೆಂದರೆ ಒಂದು ಜನಾಂಗದ ಅಭಿರುಚಿಯ ಚರಿತ್ರೆ. ಇಲ್ಲಿ ಕಾಲಕಾಲಕ್ಕೆ ಆದ ಧಾರ್ಮಿಕ, ಸಾಮಾಜಿಕ, ರಾಜಕೀಯ, ಬದಲಾವಣೆಗೆ ಅನುಗುಣವಾಗಿ ವಾಸ್ತುಶಿಲ್ಪ ಕಲೆಯು ಬೆಳೆದುಬಂದಿದೆ. ಮೂಲಭೂತವಾದ ಆಶಯ ಮತ್ತು ಆದರ್ಶ ಒಂದೇ ಆಗಿದ್ದರೂ ಅದು ಅಭಿವ್ಯಕ್ತಗೊಂಡಿರುವ ರೂಪ ಮತ್ತು ಸ್ವರೂಪಗಳು ಕಾಲಕಾಲಕ್ಕೆ ಬದಲಾಗುತ್ತಾ ಬಂದಿವೆ. ಕ್ರಿ.ಪೂ ೩ನೆಯ ಶತಮಾನದ ಮೌರ್ಯರಿಂದ ಹಿಡಿದು ಮೈಸೂರು ಒಡೆಯರವರೆಗಿನ ಸುದೀರ್ಘವಾದ ಕರ್ನಾಟಕ ಚರಿತ್ರೆಯಲ್ಲಿ ವಾಸ್ತುಶಿಲ್ಪ ಕಲೆಯ ಉಗಮ, ವಿಕಾಸದ ಹೆಜ್ಜೆಗಳನ್ನು ಕಾಣಬಹುದು. ಕದಂಬ,ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ, ಕಲ್ಯಾಣ ಚಾಲುಕ್ಯ, ವಿಜಯನಗರ ಇತರೆ ಪ್ರಸಿದ್ಧ ರಾಜ ಮನೆತನಗಳು ಹಾಗೂ ಪಾಳೆಯಗಾರರು ಸುಭದ್ರವಾದ ರಾಜ್ಯವನ್ನು ಕಟ್ಟಿದ್ದರಲ್ಲದೆ, ಅನೇಕ ದೇವಾಲಯ, ಮಠ, ಬಸದಿಗಳನ್ನು ನಿರ್ಮಿಸಿ, ಅವುಗಳಿಗೆ ಉದಾರವಾದ ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸಿದರು. ಜನಸಾಮಾನ್ಯರು ಕೂಡ ಇವುಗಳನ್ನು ಕಟ್ಟುವುದು ಒಂದು ಪುಣ್ಯಕಾರ್ಯವೆಂದು ಭಾವಿಸಿದ್ದರಿಂದ ವಾಸ್ತುಕಲೆ ಇಲ್ಲಿ ಹೇರಳವಾಗಿ ಬೆಳೆದು ಬರಲು ಕಾರಣವಾಯಿತು. ವಾಸ್ತುಶಿಲ್ಪ ನಿರ್ಮಾಣಕ್ಕಾಗಿ ಆಯಾ ಭಾಗಗಳಲ್ಲಿ ದೊರೆಯುವ ಕಚ್ಚಾ ಸಾಮಗ್ರಿಗಳನ್ನು ಬಳಸಿ ಅಲ್ಲಿಯ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ.[೩]

ಉತ್ತರ ಭಾರತದಲ್ಲಿ ನಾಗರಶೈಲಿ, ದಕ್ಷಿಣದಲ್ಲಿ ದ್ರಾವಿಡ ಶೈಲಿಗಳು ಬೆಳೆದು ಬಂದರೆ ಅವೆರಡನ್ನು ಮೈಗೂಡಿಸಿಕೊಂಡು ತನ್ನದೇ ಆದ ವೇಸರವೆಂಬ ನೂತನ ಶೈಲಿಯನ್ನು ನಿರ್ಮಾಣ ಮಾಡಿ ಅದ್ಭುತವಾಗಿ ಬೆಳೆದ ಕೀರ್ತಿ ಬಾದಾಮಿ ಚಾಲುಕ್ಯರಿಗೆ ಸಲ್ಲುತ್ತದೆ.[೪] ಈ ವೇಸರ ಶೈಲಿ ಬಾದಾಮಿ, ಚಾಲುಕ್ಯರ ಕಾಲದಲ್ಲಿ ಉಗಮಗೊಂಡು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಅವಧಿಯಲ್ಲಿ ಮುಂದುವರೆದು ಹೊಯ್ಸಳರ ಕಾಲಕ್ಕೆ ಅತ್ಯುನ್ನತ ಶಿಖರಕ್ಕೇರಿತು. ನಂತರ ಅಧಿಕಾರಕ್ಕೆ ಬಂದ ವಿಜಯನಗರದ ಅರಸರು ದ್ರಾವಿಡ ಶೈಲಿಯಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡಿದರು.

೫.೧. ದೇವಾಲಯಗಳು

ಚೌಳೇಶ್ವರ ದೇವಾಲಯ : ಈ ದೇವಾಲಯವು ಆಶ್ರಮ ವಸತಿ ಶಾಲೆಯ ಹಿಂಭಾಗದಲ್ಲಿದ್ದು, ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದೆ. ಇದರ ಕಾಲಮಾನವು ೧೩ನೇ ಶತಮಾನದಾಗಿದೆ. ಈ ದೇವಾಲಯಕ್ಕೆ ಎರಡು ಗರ್ಭ ಗೃಹಗಳಿವೆ. ಮುಖ್ಯ ಗರ್ಭಗುಡಿಯಲ್ಲಿ ಕಣ್ಣಲಿಂಗವಿದೆ. ಎಡಭಾಗದಲ್ಲಿರುವ ಇನ್ನೊಂದು ಗರ್ಭಗುಡಿಯಲ್ಲಿ ಯಾವುದೇ ಮೂರ್ತಿಯಿಲ್ಲ. ಸಭಾಮಂಟಪದಲ್ಲಿ ನಂದಿ ಶಿಲ್ಪಗಳಿವೆ. ಈ ದೇವಾಲಯದಲ್ಲಿ ಚಚ್ಚೌಕಕಾರ ಹಾಗೂ ಬಹುಮುಖಗಳಲ್ಲಿ ಕಡೆಯಲಾದ ಕಂಬಗಳಿವೆ. ಗರ್ಭಗುಡಿಯ ಮೇಲೆ ಶಿಖರವಿಲ್ಲ. ಈ ದೇವಾಲಯಕ್ಕೆ ಉಪಯೋಗಿಸುವ ಸಲುವಾಗಿ ಬಲಬದಿಯಲ್ಲಿ ಬಾವಿಯೊಂದನ್ನು ತೋಡಿಸಲಾಗಿದೆ. ಆದರೆ ಇಲ್ಲಿ ಯಾವುದೇ ಧಾರ್ಮಿಕ ಚಟುವಟಿಕೆಗಳು ನಡೆಯುವುದಿಲ್ಲ. ಈ ದೇವಾಲಯವು ಪೂರ್ವಕ್ಕೆ ಅಭಿಮುಖವಾಗಿದ್ದು, ಕನಿಷ್ಟ ಸ್ಥಿತಿಯಲ್ಲಿದೆ.

ಪಂಚಲಿಂಗೇಶ್ವರ ಗುಹಾಲಯ : ಪಂಚಲಿಂಗೇಶ್ವರ ಗುಹಾಲಯವು ಈ ಗ್ರಾಮದ ವಾಯವ್ಯಕ್ಕೆ ಇದೆ. ಈ ಗುಹಾಲಯವು ಸರ್ವೋದಯ ಗ್ರಾಮದ ಹತ್ತಿರದಲ್ಲಿದೆ. ಇದು ಒಂದು ನೈಸರ್ಗಿಕ ಗುಹಾಲಯವಾಗಿದ್ದು ಈ ಗುಹಾಲಯದಲ್ಲಿ ೧೨ನೆಯ ಶತಮಾನದಲ್ಲಿ ಕಂಡುಬರುವ ಕಲ್ಯಾಣ ಚಾಲುಕ್ಯ ಶೈಲಿಯ ಶಿವಲಿಂಗಗಳನ್ನು ಕಾಣಬಹುದು.[೫] ಈ ಗುಹಾಲಯವು ಸುಮಾರು ಒಂದು ನೂರು ಅಡಿಗಳಿಗೂ ಉದ್ದವಾದ ಕಣಶಿಲೆಯ, ವಿಶಾಲ ಬಂಡೆಗಲ್ಲಿನ ಕೆಳಭಾಗದಲ್ಲಿರುವ ಗುಹಾಂತರ ದೇವಾಲಯ. ಬಂಡೆಯ ಕೆಳಭಾಗದಲ್ಲಿ ಅದರ ಉದ್ದಕ್ಕೂ ಇರುವ ಸ್ಥಳಾವಕಾಶವನ್ನು ಬಳಸಿಕೊಂಡು ಐದುಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಅದಕ್ಕಾಗಿ ಇದಕ್ಕೆ ಪಂಚಲಿಂಗೇಶ್ವರ ಗುಹಾಲಯ ಎಂದು ಕರೆಯುತ್ತಾರೆ. ಈ ಗುಹಾಲಯವು ಆದಿಮಾನವ ತಾಣವೂ ಆಗಿದ್ದಿತೆನ್ನುವುದಕ್ಕೆ ಬಂಡೆ ಕೆಳಭಾಗದಲ್ಲಿ ಬಿಳಿವರ್ಣದ ವರ್ಣಚಿತ್ರಗಳಿವೆ. ಇವುಗಳಿಂದ ಪ್ರಾಗಿತಿಹಾಸ ಕಾಲದಲ್ಲಿ ಮಾನವನು ಈ ಗುಹೆಯಲ್ಲಿ ವಾಸವಾಗಿದ್ದನೆಂದು ಹೇಳಬಹುದು. ಪಾಳೆಯಗಾರರ ಕಾಲದಲ್ಲಿ ಬಹುಮುಖ್ಯ ತಾಣವಾಗಿ ಮಾರ್ಪಾಟಾದ ಸಂಗತಿ ತಿಳಿದುಬರುತ್ತದೆ.[೬] ಇಲ್ಲಿಯ ಬೆಟ್ಟದ ತುದಿಯಲ್ಲಿ ನಿಸರ್ಗ ನಿರ್ಮಿತ ವಿವಿಧ ಆಕೃತಿಗಳ ಚಿತ್ರಗಳನ್ನು ಹಾಗೂ ಆನೆಸೊಂಡಿಲಿನಾಕಾರದ ಹೆಬ್ಬಂಡೆಯನ್ನು ನೋಡಬಹುದು. ಈ ಗುಹಾಲಯದಲ್ಲಿ ಕೆಲವೊಂದು ಗುಪ್ತಮಾರ್ಗಗಳಿವೆ. ಸ್ಥಳೀಯರು ಈ ಗುಹಾಲಯದ ಬಗ್ಗೆ ಅನೇಕ ನಿಗೂಢ ಘಟನೆಗಳ ಕಥೆಗಳನ್ನು ಹೇಳುತ್ತಾರೆ. ಸ್ಥಳೀಯರ (ಕೆಲವರ) ಪ್ರಕಾರ ಈ ಗುಹಾಲಯದಲ್ಲಿರುವ ಗುಪ್ತಮಾರ್ಗವು ಶ್ರೀಶೈಲದವರೆಗೂ ಹೋಗಿದೆಯಂತೆ.

ಪಾರ್ವತಿಪರಮೇಶ್ವರ ದೇವಾಲಯ : ಈ ದೇವಾಲಯವು ಗ್ರಾಮದ ಹೊರಗಡೆ ಪಶ್ಚಿಮ ದಿಕ್ಕಿಗಿದ್ದು ಕೂಡ್ಲಿಗಿಗೆ ಹೋಗುವ ರಸ್ತೆಯ ಪಕ್ಕದಲ್ಲಿದೆ. ಈ ದೇವಾಲಯವು ದೊರೆಗಳ ಬೆಟ್ಟದ ಅಭಿಮುಖವಾಗಿದೆ.

ಊರಿಗೆ ಪೂರ್ವಾಭಿಮುಖವಾಗಿ ಪ್ರವೇಶಿಸುವ ಮುನ್ನ ಈ ದೇವಾಲಯ ಕಂಡುಬರುವುದು. ಹಾಗಾಗಿ ಇದು ಆಯಕಟ್ಟಿನ ಜಾಗದಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದ್ದು, ಇದರ ನಿರ್ಮಾಣ ಕಾಲವು ಸುಮಾರು ೧೮ನೇ ಶತಮಾನದ್ದಾಗಿದೆ.

ಈಶ್ವರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಶಿವಲಿಂಗ ಮತ್ತು ನಂದಿಗಳಿರುತ್ತವೆ. ಆದರೆ ಈ ದೇಗುಲದಲ್ಲಿ ಶಿವಪಾರ್ವತಿಯರ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಇಂತಹ ಶಿವಪಾರ್ವತಿಯರ ಏಕಶಿಲಾ ವಿಗ್ರಹವಿರುವ ದೇಗುಲಗಳಿರುವುದು ಕರ್ನಾಟಕದಲ್ಲಿ ತುಂಬಾ ಅಪರೂಪ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಪಾರ್ವತಿಯರ ವಿಗ್ರಹವು ಮಹತ್ವಪೂರ್ವ ಆಕರ್ಷಣೀಯವಲ್ಲದೇ ಮನಮೋಹಕವಾಗಿದೆ. ಈ ವಿಗ್ರಹ ಸುಮಾರು ೩ ಅಡಿ ಎತ್ತರವಿರುವ ಪೀಠದ ಮೇಲೆ ೪ ಅಡಿ ಎತ್ತರದವರೆಗೂ ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ. ಈ ವಿಗ್ರಹದಲ್ಲಿ ಪಾರ್ವತಿಯನ್ನು ತನ್ನ ಎಡತೊಡೆಯ ಮೇಲೆ ಕೂರಿಸಿಕೊಂಡು ಕೈಲಾಸಾರೂಢನಾಗಿರುವ ಶಿವ, ತನ್ನ ಚತುರ್ಭುಜ ಕೈಗಳಲ್ಲಿ, ಮೇಲಿನ ಎರಡು ಕೈಗಳಲ್ಲಿ ಡಮರುಗ ಇನ್ನೊಂದರಲ್ಲಿ ತ್ರಿಶೂಲವನ್ನು ಹಿಡಿದಿದ್ದು, ತ್ರಿಶೂಲದ ತುದಿಯಲ್ಲಿ ಒಂದು ರುಂಡವಿರುವುದು ವಿಶೇಷ, ಕೆಳಗಿನ ಎರಡು ಕೈಗಳಲ್ಲಿ ಒಂದು ಕೈ ಪಾರ್ವತಿಯ ಸೊಂಟವನ್ನು ಬಳಸಿದ್ದು, ಇನ್ನೊಂದು ಕೈ ತೊಡೆಯ ಮೇಲಿದೆ. ಪಾರ್ವತಿಯೂ ಸಣ್ಣ ಆಸರೆಗಾಗಿ ತನ್ನ ಬಲಗೈಯಿಂದ ಶಿವನ ಕೊರಳನ್ನು ಬಳಸಿ ಹಿಡಿದಿದ್ದಾಳೆ. ಎತ್ತರ ಪೀಠ ಹೊಂದಿರುವ ಈ ಶಿಲ್ಪದ ಸುತ್ತಲೂ ಅರೆಗಂಬ, ಹೂಬಳ್ಳಿ, ಕೀರ್ತಿಮುಖಗಳ ಅಲಂಕರಣೆಯಿಂದ ಕೂಡಿದ ಪ್ರಭಾವಳಿ ಇವೆ. ಸಭಾಮಂಟಪದಲ್ಲಿ ಶಿವ-ಪಾರ್ವತಿಯ ವಿಗ್ರಹದ ಎದುರುಗಡೆ ನಂದಿಯ ವಿಗ್ರಹವೂ ಇದೆ. ಈ ವಿಗ್ರಹವು ಸಾಧಾರಣ ಅಲಂಕಾರಗೊಂಡಿದೆ.

ಈ ಸಭಾಮಂಟಪದಲ್ಲಿ ಗರ್ಭಗುಡಿಯ ಪ್ರವೇಶದ್ವಾರದ ಎಡಬಲಗಳಲ್ಲಿ ವಿಘ್ನೇಶ್ವರ ಹಾಗೂ ಮಹಿಷಾಸುರಮರ್ದಿನಿ ವಿಗ್ರಹಗಳು ಇವೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳು ಸರಳವಾಗಿದ್ದು ಚಚ್ಚೌಕವಾಗಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಶಿಖರವಿದೆ. ಇದರಲ್ಲಿ ದೇಗುಲದ ವಾಸ್ತು ಅಲಂಕರಣೆ, ಶಿಖರದ ಅಲಂಕರಣೆ ನಂದಿ, ಕೀರ್ತಿಮುಖ ಮುಂತಾದ ಶಿಲ್ಪಗಳನ್ನು ಗಾರೆಯಲ್ಲಿ ತಯಾರಿಸಲಾಗಿದೆ. ಈ ದೇವಾಲಯದ ಸುತ್ತಲೂ ಆವರಣ ಗೋಡೆಯನ್ನು ನಿರ್ಮಿಸಿದ್ದಾರೆ. ಇದರ ಒಳಗಡೆ ಬಾವಿಯಿದೆ. ಸ್ಥಳೀಯರು ಗುಡೇಕೋಟೆಗೆ ಯಾವುದೇ ದಾರಿದ್ರ್ಯ ಅನಿಷ್ಟ ಬರಬಾರದೆಂದು ಕ್ಷಾಮ ಡಾಮರಗಳು ದೂರವಾಗಲೆಂದು ಹಿಂಸಾತ್ಮಕ ಪ್ರಾಣಿಗಳು ಕೋಟೆಯಿಂದ ನುಸಳಿ ಬಂದರೆ ಪ್ರವೇಶ ದ್ವಾರದಲ್ಲಿ ಶಿವನು, ತಡೆಗಟ್ಟುಸುತ್ತಾನೆಂಬ ನಂಬಿಕೆ ಪ್ರಚಲಿತದಲ್ಲಿದೆ.

[illegible]

ರಾಮಲಿಂಗೇಶ್ವರ ದೇವಾಲಯ :ರಾಮಲಿಂಗೇಶ್ವರ ದೇವಾಲಯವು ಬೇಡರ ಕೇರಿಯಲ್ಲಿದೆ. ಗ್ರಾಮದ ಒಳಗಡೆ ಇದೆ. ಈ ದೇವಾಲಯದ ಕಾಲಮಾನ ೧೮ನೇ ಶತಮಾನವಾಗಿದ್ದು ಪಾಳೇಯಗಾರರ ಆಳ್ವಿಕೆಯಲ್ಲಿ ಕಟ್ಟಲ್ಪಟ್ಟಿದೆ. ಇಂದು ಮುಂಬದಿಯ ಸುತ್ತಲೂ ಗೋಡೆಯನ್ನು ನಿರ್ಮಿಸಿದ್ದಾರೆ. ರಾಮಲಿಂಗೇಶ್ವರ ದೇವಾಲಯವು ಗರ್ಭಗೃಹ ಮತ್ತು ತೆರೆದ ಸಭಾಮಂಟಪ ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗ ಮತ್ತು ಸಭಾಮಂಟಪದಲ್ಲಿ ನಂದಿಶಿಲ್ಪಗಳಿವೆ. ಸಭಾಮಂಟಪದಲ್ಲಿರುವ ಕಂಬಗಳು ಸರಳವಾಗಿದ್ದು, ಚಚ್ಚೌಕವಾಗಿವೆ. ಈ ದೇವಾಲಯದ ಆವರಣದಲ್ಲಿ ಭಿನ್ನವಾದ ನಾಗಕನ್ನೆಯ ವಿಗ್ರಹವಿದೆ. ಈ ದೇವಾಲಯವು ಉತ್ತರ ಅಭಿಮುಖವಾಗಿದ್ದು ಮಧ್ಯಮ ಸ್ಥಿತಿಯಲ್ಲಿದೆ.

ಕಾಳಮ್ಮ ದೇವಾಲಯ : ಈ ದೇವಾಲಯವು ಹರಿಜನ ಕೇರಿಯಲ್ಲಿದ್ದು ಇದು ೧೮ನೇ ಶತಮಾನದಲ್ಲಿ ಕಟ್ಟಲ್ಪಟ್ಟಿ. ಈ ದೇವಾಲಯವು ಉತ್ತರಕ್ಕೆ ಅಭಿಮುಖವಾಗಿದೆ. ಗರ್ಭಗೃಹ ಮಾತ್ರ ಉಳಿದಿರುವ ಈ ದೇಗುಲವನ್ನು ಕಾಳಮ್ಮ ದೇಗುಲವೆಂದೇ ಕರೆಯಲಾಗುತ್ತದೆ. ಗರ್ಭಗೃಹದಲ್ಲಿ ಯಾವುದೇ ಶಿಲ್ಪವಿಲ್ಲ ಬಾಗಿಲುವಾಡದಲ್ಲಿ ದ್ವಾರಪಾಲಕರ ಶಿಲ್ಪಗಳಿವೆ. ಲಲಾಟಬಿಂಬದಲ್ಲಿ ಪದ್ಮವಿದೆ. ಕಣಶಿಲೆಯಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ. ಸಭಾಮಂಟಪ ಬಿದ್ದು ಹೋಗಿದೆ. ಈ ದೇಗುಲದ ಎಡಬದಿಯಲ್ಲಿ ನೀರಿನ ಸೌಕರ್ಯಕ್ಕಾಗಿ ಬಾವಿಯನ್ನು ತೋಡಲಾಗಿದೆ. ಇಂದು ದೇವಾಲಯವು ಪಾಳು ಸ್ಥಿತಿಯಲ್ಲಿದೆ.

ಬಸವಣ್ಣ ದೇವಾಲಯ :ಈ ದೇವಾಲಯ ಗುಡೇಕೋಟೆ ಗ್ರಾಮದ ಪೂರ್ವಕ್ಕೆ ಇದೆ. ಈ ದೇವಾಲಯದ ಕಾಲಮಾನ ೧೮ನೇ ಶತಮಾನದ್ದಾಗಿದ್ದು ಇದು ಇಂದು ಶಿಥಿಲ ಸ್ಥಿತಿಯಲ್ಲಿದೆ. ಈ ದೇವಾಲಯ ಸ್ವಲ್ಪ ಎತ್ತರ ಸ್ಥಾನದಲ್ಲಿದ್ದು ಗುಡ್ಡಕ್ಕೆ ಹೊಂದಿಕೊಂಡಿದೆ. ಈ ದೇಗುಲದಲ್ಲಿ ಗರ್ಭಗೃಹ ಮಾತ್ರವಿದ್ದು ಅದರಲ್ಲಿ ಯಾವುದೇ ವಿಗ್ರಹವಿಲ್ಲ. ಇದರ ಮೇಲ್ಭಾಗದಲ್ಲಿ ಶಿಖರವನ್ನು ಇಟ್ಟಿಗೆ ಗಾರೆಗಳಿಂದ ಕಟ್ಟಲಾಗಿದೆ. ಇದರಲ್ಲಿದ್ದ ಅಲಂಕರಣೆಗಳು ನಶಿಸಿವೆ. ಕಣ ಶಿಲೆಯಿಂದ ಕಟ್ಟಲ್ಪಟ್ಟು ದೇವಾಲಯದ ಉಳಿದ ಭಾಗಗಳು ಕಾಣಸಿಗುವುದಿಲ್ಲ.

ಲಕ್ಷ್ಮೀವೆಂಕಟೇಶ್ವರ ದೇವಾಲಯ : ಈ ದೇವಾಲಯವು ಊರ ಒಳಗೆ ಬಸ್ ನಿಲ್ದಾಣದ ಬಳಿ ಇದೆ. ಈ ದೇವಾಲಯವು ವಿಜಯನಗರೋತ್ತರ ಶೈಲಿಯಲ್ಲಿದ್ದು, ೧೮ನೇ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ತೆರೆದ ಸಭಾಮಂಟಪಗಳಿವೆ. ಮತ್ತು ಪ್ರಾಕಾರ ಗೋಡೆಗಳಿಂದ ಕೂಡಿದೆ. ಈ ಗರ್ಭಗೃಹದಲ್ಲಿ ಇತ್ತೀಚೆಗೆ ಪ್ರತಿಷ್ಠಾಪಿಸಿದ ಲಕ್ಷ್ಮೀ ವೆಂಕಟೇಶ್ವರ ಮತ್ತು ಪದ್ಮಾವತಿಯರ ವಿಗ್ರಹಗಳು ಇವೆ. ಸಭಾಮಂಟಪದಲ್ಲಿರುವ ನಾಲ್ಕು ಕಂಬಗಳು ಸರಳವಾಗಿದ್ದು ಚಚ್ಚೌಕವಾಗಿವೆ. ಸಭಾಮಂಟಪದ ಮುಂದೆ ದೀಪಸ್ತಂಭ ಇವೆ. ಈ ದೇವಾಲಯದ ಸುತ್ತ ಆವರಣ ಇದೆ. ಈ ದೇವಾಲಯ ಉತ್ತಮ ಸ್ಥಿತಿಯಲ್ಲಿದ್ದು ಉತ್ತರಕ್ಕೆ ಅಭಿಮುಖವಾಗಿದೆ.

[illegible]

ಆಂಜನೇಯ ದೇವಾಲಯ : ದಕ್ಷಿಣಕ್ಕೆ ಅಭಿಮುಖವಾಗಿ ಈ ದೇವಾಲಯವು ಬಸ್ ನಿಲ್ದಾಣದ ಬಳಿ ಇದೆ. ಇದು ವಿಜಯನಗರೋತ್ತರ ಕಾಲದಲ್ಲಿ ಕಟ್ಟಲ್ಪಟ್ಟಿದೆ. ಈ ದೇವಾಲಯದಲ್ಲಿ ಗರ್ಭಗೃಹ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ಆಂಜನೇಯನ ಉಬ್ಬು ಕೆತ್ತನೆಯಿದೆ. ಸಭಾಮಂಟಪದಲ್ಲಿರುವ ಕಂಬಗಳು ಚೌಕಾಕಾರವಾಗಿವೆ. ಬಹುಮುಖಗಳಿಂದ ಕೂಡಿದ್ದು ಕಂಬಗಳ ಮೇಲ್ಭಾಗದಲ್ಲಿ ವೃತ್ತಾಕಾರದ ಬೋದಿಗೆಗಳಿವೆ. ಅಲ್ಲದೆ ಕಂಬಗಳಲ್ಲಿ ವಿವಿಧ ಉಬ್ಬು ಶಿಲ್ಪ ಕೆತ್ತನೆಗಳಿವೆ. ದೇವಾಲಯದ ಮುಂಭಾಗದಲ್ಲಿ ಎರಡು ಸಾಮಾನ್ಯ ಕಲ್ಲು ಬಂಡೆಗಳನ್ನು ಹೂಳಿದ್ದಾರೆ. ಇವುಗಳ ತಳಪಾಯ ಎಷ್ಟು ಅಗೆದರೂ ಸಿಕ್ಕಿಲ್ಲದಿರುವುದು ಸೋಜಿಗದ ಸಂಗತಿಯಾಗಿದೆ.

೫.೨. ಮಠಗಳು

ವಿರಕ್ತಮಠ : ಈ ವಿರಕ್ತಮಠವು ಕೊಟ್ಟೂರೇಶ್ವರ ಮಹಾಸಂಸ್ಥಾನ ಮಠದ ಶಾಖಾಮಠವಾಗಿದ್ದು ಇದಕ್ಕೆ ಕೊಟ್ಟೂರುಸ್ವಾಮಿಮಠ ಎಂದು ಸ್ಥಳೀಯರು ಕರೆಯುತ್ತಾರೆ. ಈ ಮಠವು ಗ್ರಾಮದ ಒಳಗೆ ಇದ್ದು ಈ ಮಠವು ಸುಮಾರು ೧೮ನೇ ಶತಮಾನದಲ್ಲಿ ಕಟ್ಟಲ್ಪಟ್ಟಿದೆ. ಈ ಮಠವು ಉತ್ತರಕ್ಕೆ ಅಭಿಮುಖವಾಗಿದೆ. ಈ ವಿರಕ್ತಮಠವು ಗರ್ಭಗೃಹ, ಸಭಾಮಂಟಪ, ಮುಖಮಂಟಪಗಳಿಂದ ಕೂಡಿದೆ. ಇಲ್ಲಿನ ಗರ್ಭಗೃಹವು ಸಭಾಮಂಟಪದಷ್ಟೇ ವಿಶಾಲವಾಗಿದೆ. ಇದು ವಿರಕ್ತಯತಿಗಳು ವಾಸಿಸುವ ಸ್ಥಳವಾಗಿದೆ. ಆದರೆ ಇಂದು ವಿರಕ್ತಯತಿಗಳು ಯಾರೂ ವಾಸಮಾಡುತ್ತಿಲ್ಲ. ಇಂದು ಅವರ ವಂಶಸ್ಥರು ವಾಸಮಾಡುತ್ತಿದ್ದಾರೆ. ಸಭಾಮಂಟಪದಲ್ಲಿರುವ ಉಬ್ಬು ಶಿಲೆಗಳಿಲಂದ ಕೂಡಿದ ಕಂಬಗಳು. ಚಚ್ಚೌಕಾರದ ಹಾಗೂ ಮಧ್ಯಭಾಗದಲ್ಲಿ ಬಹುಮುಖಗಳನ್ನು ಹೊಂದಿವೆ. ಮುಖಮಂಟಪ ದಲ್ಲಿರುವ ಎರಡು ಕಂಬಗಳು ಬಹುಮುಖಗಳಿಂದ ಅಲಂಕರಣೆಗೊಂಡು ವೃತ್ತಾಕಾರವಾಗಿವೆ. ಮೇಲ್ಭಾಗವನ್ನು ಮುಚ್ಚಿದ ಬೋಗುಣಿಯಾಕಾರದಲ್ಲಿ ಕೆತ್ತಲಾಗಿದೆ. ಬೋದಿಗೆಯು ಚಕ್ರಾಕಾರವಾಗಿದ್ದು ಫಲಕಗಳು ಚಚ್ಚೌಕಾರವಾಗಿವೆ. ಮಠದ ಮುಂಭಾಗದಲ್ಲಿ ಶರಣಪ್ಪ ಗದ್ದುಗೆಯಿದೆ. ಇದು ಮಧ್ಯಮ ಸ್ಥಿತಯಲ್ಲಿದೆ.

ಏಣಿ ಈರಪ್ಪ(ಈಶ್ವರ ದೇವಾಲಯ) : ಈ ದೇವಾಲಯವು ಪಾಳೆಯಗಾರರ ಕಾಲದಲ್ಲಿ ಕಟ್ಟಲಾಗಿದ್ದು, ಗ್ರಾಮದ ಹೊರಗಡೆ ಪೂರ್ವ ದಿಕ್ಕಿಗೆ ಇದೆ. ಈ ದೇವಾಲಯ ಬಲಬದಿಯಲ್ಲಿರುವ ಕಟ್ಟಡ ವಿರಕ್ತಮಠವಾಗಿದೆ. ಇದರಲ್ಲಿ ಏಣಿ ಈರಪ್ಪ ಎಂಬ ಸನ್ಯಾಸಿ ವಾಸಮಾಡುತ್ತಿದ್ದ ಕಾರಣ ಈಶ್ವರ ದೇವಾಲಯವಾದ ಇದು ಸ್ಥಳೀಯರಿಂದ ಏಣಿ ಈರಪ್ಪನ ಗುಡಿಯೆಂದೇ ಕರೆಯಲ್ಪಡುತ್ತದೆ.

ಗರ್ಭಗೃಹದಲ್ಲಿದ್ದ ಶಿವಲಿಂಗವನ್ನು ನಿಧಿಚೋರರು ತುಂಡರಿಸಿದ್ದಾರೆ. ಅಂತರಾಳದಲ್ಲಿ ನಯಗೊಳಿಸಿದ ನಂದಿಯ ಶಿಲ್ಪವಿದ್ದು ಇತ್ತೀಚೆಗೆ ಅದನ್ನು ಸಹ ಭಿನ್ನಗೊಳಿಸಿದ್ದಾರೆ. ಮುಂಭಾಗದಲ್ಲಿ

ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಸಭಾಮಂಟಪವು ಎತ್ತರ ಕಟ್ಟೆಯನ್ನು ಹೊಂದಿದೆ. ಈ ದೇಗುಲದಲ್ಲಿರುವ ನಾಲ್ಕು ಕಂಬಗಳಲ್ಲಿ ಎರಡು ಚಚ್ಚೌಕಾರವಾಗಿದ್ದು ಮತ್ತು ಬಹುಮುಖದಲ್ಲಿ ವೃತ್ತಾಕಾರದ ಬೋದಿಗೆ ಮತ್ತು ಚಚ್ಚೌಕವಾದ ಫಲಕಗಳನ್ನು ಹೊಂದಿವೆ. ಕಣಶಿಲೆಯಲ್ಲಿ ಕಟ್ಟಲಾದ ಈ ದೇಗುಲದ ಮುಖ ಮಂಟಪದ ಮೇಲಿರುವ ಕೈಪಿಡಿ ಗೋಡೆಯಲ್ಲಿ ನಂದಿ, ನಾಗ ಶಿಲ್ಪಗಳಿವೆ.

೫.೩. ಉಪ್ಪರಿಗೆ

ಕೂಡ್ಲಿಗಿ ರಸ್ತೆ ಮಾರ್ಗದಿಂದ ಗ್ರಾಮವನ್ನು ಪ್ರವೇಶಿಸುವ ಮುನ್ನ ನೋಡುಗರಿಗೆ ಕಾಣಿಸುವುದು ಈ ಆಕರ್ಷಕ ಸ್ಮಾರಕವಾದ ಉಪ್ಪರಿಗೆ ತಂಗಾಳಿ ಮಹಲು. ಇದು ಇಂದು ಶಿಥಿಲ ವ್ಯವಸ್ಥೆಯಲ್ಲಿದೆ. ಸದ್ಯಕ್ಕೆ ಅರ್ಧಭಾಗ ಸುಂದರವಾಗಿ ಕಂಡುಬಂದರೂ ಹೆಚ್ಚಿನ ಭಾಗ ನಾಶಗೊಂಡಿದ್ದರಿಂದ ತಂಗಾಳಿ ಮಹಲ್ ಬದಲಾಗಿ ಅಂಗವಿಕಲಮಹಲ್ ಆಗಿದೆ. ಇದರಲ್ಲಿರುವ ಮೇಲ್ಭಾಗದ ಭಾವಣೆಯಲ್ಲಿ ಪಾಳೆಯಗಾರರು ಮತ್ತು ರಾಣಿಯರು ತಂಪಾದ ಗಾಳಿಗೆ ಮೈ ಒಡ್ಡಿ ಆಹ್ಲಾದತೆಯನ್ನು ಪಡೆಯುತ್ತಿದ್ದರಂತೆ.[೮] ಉಪ್ಪರಿಗೆಗೆ ಕಲ್ಲು ಇಟ್ಟಿಗೆಗಳನ್ನು ಹೆಚ್ಚಾಗಿ ಬಳಸಿರುವುದರಿಂದ ವಿನಾಶದಂಚಿನಲ್ಲಿದ್ದರೂ ಆಕರ್ಷಣೀಯ ವಾಗಿ ಕಂಡುಬರುತ್ತದೆ. ಕಟ್ಟಡಗಳ ಕಲ್ಲುಗಳನ್ನು ಜನರು ತಮ್ಮ ಕಟ್ಟಡಗಳಿಗೆ ಬಳಸಿ ಇದರ ಪಕ್ಕದಲ್ಲಿಯೇ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ರಾಜರಾಣಿಯರ ವಿಶಾಲ ಮಂದಿರವಾಗಿರುವ ಈ ಉಪ್ಪರಿಗೆಯನ್ನು ನಿರ್ಮಿಸಿದವರು ಯಾರು ಎಂಬುದು ತಿಳಿದುಬಂದಿಲ್ಲ. ಇದು ಇಂಡೋ-ಸಾರ್ಸೆನಿಕ್ ವಾಸ್ತುಶಿಲ್ಪ ಶೈಲಿಯನ್ನು ಹೊಂದಿದ್ದು ಒಂದು ಅಂತಸ್ತುವುಳ್ಳ ಕಟ್ಟಡವಾಗಿದೆ. ಮೊದಲನೇ ಭಾಗವನ್ನು ಕಲ್ಲುಗಳಿಂದ ಕಟ್ಟಿದ್ದು ಮೇಲ್ಮನೆಯನ್ನು ಸುಟ್ಟ ಇಟ್ಟಿಗೆಯಿಂದ ನಿರ್ಮಿಸಿದ್ದಾರೆ. ಬಹುಶಃ ಈ ಉಪ್ಪರಿಗೆಯು ಇಂಡೋ-ಇಸ್ಲಾಮಿಕ್ ವಾಸ್ತುಶೈಲಿಯಲ್ಲಿರುವುದರಿಂದ ವಿಜಯನಗರ ಕಾಲದಲ್ಲಿ ನಿರ್ಮಾಣ ಮಾಡಿರಬಹುದು. ಇದು ಅರಸರ ತಂಗುದಾಣವಾಗಿರಬಹುದು.

೫.೪. ಕೋಟೆ

ಗುಡೇಕೋಟೆಯಲ್ಲಿರುವ ಕೋಟೆಯು ಒಂದು ಗಿರಿದುರ್ಗವಾಗಿದೆ. ಗಿರಿದುರ್ಗ ಎಂದರೆ "ಬೆಟ್ಟದ ಮೇಲಿರುವ ಕೋಟೆ"[೯] ಇಂತಹ ಗಿರಿದುರ್ಗಗಳು ಚರಿತ್ರೆಯಲ್ಲಿ ವಿರಳವಾಗಿ ಕಂಡುಬರುತ್ತವೆ. ಗಿರಿದುರ್ಗವನ್ನು ಕಟ್ಟುವಲ್ಲಿ ಮನುಷ್ಯನ ಪಾತ್ರಕ್ಕಿಂತ ನಿಸರ್ಗದ ಪಾತ್ರ ಹಿರಿದು. ಭೌಗೋಳಿಕವಾಗಿ "ಒಂದು ಪಟ್ಟಣದ ಸುತ್ತ ಗುಡ್ಡಬೆಟ್ಟಗಳಿದ್ದರೆ ಗಿರಿದುರ್ಗಕ್ಕೆ ಪ್ರಶಸ್ಥವಾದ ಸ್ಥಳವೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ" ಈ ಗ್ರಾಮದ ಸುತ್ತ ಗುಡ್ಡಬೆಟ್ಟಗಳಿದ್ದು ಗಿರಿದುರ್ಗಕ್ಕೆ ಸೂಕ್ತವಾದ ಸ್ಥಳವಾಗಿದೆ.

ಗಿರಿದುರ್ಗಗಳು ಕರ್ನಾಟಕದ ಚರಿತ್ರೆಯಲ್ಲಿ ಹಲವಿದ್ದರೂ ಗುಡೇಕೋಟೆ ಕೋಟೆಯು ಹಲವು ಕಾರಣಗಳಿಂದ ವಿಶೇಷಗಳನ್ನು ಹೊಂದಿದೆ. ಕರ್ನಾಟಕದ ಮೊಟ್ಟಮೊದಲು ಗಿರಿದುರ್ಗವನ್ನು ಬಾದಾಮಿ ಚಾಲುಕ್ಯರ ಒಂದನೇ ಪುಲಿಕೇಶಿಯು ನಿರ್ಮಿಸಿರುವುದಕ್ಕೆ ದಾಖಲೆಗಳಿವೆ.[೧೦] ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ವಿವರಿಸಿರುವಂತೆ ಗಿರಿದುರ್ಗಗಳ ನಿರ್ಮಾಣ ನಡೆದಿರುವುದು ವಿಶೇಷ.[೧೧] ಈ ಗಿರಿದುರ್ಗಗಳು ಹೆಚ್ಚು ಸುರಕ್ಷಿತವಾಗಿರುತ್ತವೆ. ಹಾಗೆಯೇ ಕೋಟೆಯನ್ನು ಕಟ್ಟಿದ ಗಿರಿಗಳು ವಿಶಾಲವಾಗಿರುತ್ತವೆ. ಮಹಾದ್ವಾರ ಇಕ್ಕಟ್ಟಾಗಿರುತ್ತದೆ. ವೈರಿಗಳು ಸುಲಭವಾಗಿ ಕೋಟೆಯನ್ನು ಪ್ರವೇಶಿಸಲು ಸಾಧ್ಯವಾಗದು. ಉಳಿದ ಕಡೆಗಳಲ್ಲಿ ಇಂತಹ ಗಿರಿದುರ್ಗಗಳನ್ನು ನಿರ್ಮಿಸಿರುವುದನ್ನು ಚರಿತ್ರೆಯಲ್ಲಿ ಕಾಣಬಹುದು. ಅವುಗಳಲ್ಲಿ ಗುಡೇಕೋಟೆ, ಬಳ್ಳಾರಿ, ರಾಯದುರ್ಗ, ಚಿತ್ರದುರ್ಗ, ಜರಿಮಲೆ, ಇನ್ನೂ ಮುಂತಾದ ಗಿರಿದುರ್ಗಗಳನ್ನು ಹೆಸರಿಸಬಹುದು. ಈ ಗಿರಿದುರ್ಗಗಳು ಬೆಟ್ಟಗುಡ್ಡ ಸಂದುಗೊಂದುಗಳಲ್ಲಿ ಸಮಾನಾಂತರವಾಗಿ ರೂಪಗೊಳ್ಳುತ್ತಿದ್ದವು. ಕೆಲವೆಡೆ ಬೆಟ್ಟದ ಎತ್ತರದವರೆಗೂ ಕಟ್ಟಡಗಳನ್ನು ಕಟ್ಟುತ್ತಿದ್ದರು. ಜೊತೆಗೆ ನಿಸರ್ಗ ನಿರ್ಮಿತ ಬೆಟ್ಟಗಳಿಗೆ ಕಟ್ಟಡಗಳನ್ನು ಹೊಂದಿಸಿ ಕಟ್ಟಲಾಗುತ್ತಿತ್ತು. ಶತ್ರುರಾಜರು ಆ ರಾಜಧಾನಿ ಅಥವಾ ಪಟ್ಟಣಕ್ಕೆ ಮುತ್ತಿಗೆ ಹಾಕಬೇಕು ಎಂದರೆ ನಿಸರ್ಗ ನಿರ್ಮಿತ ಮತ್ತು ಮಾನವ ನಿರ್ಮಿತ, ಗಿರಿದುರ್ಗಗಳನ್ನು ಭೇದಿಸಬೇಕಾಗುತ್ತಿತ್ತು. ಇಂತಹ ಗಿರಿದುರ್ಗ, ಕೋಟೆಗಳು, ಕರ್ನಾಟಕದಲ್ಲಿ ಹಲವಾರು ಇವೆ. ಅದರಲ್ಲಿ ಗುಡೇಕೋಟೆ ಕೋಟೆಯು ಒಂದಾಗಿದೆ.

ವಿಜಯನಗರೋತ್ತರ ಕಾಲದಲ್ಲಿ ಪಾಳೆಪಟ್ಟೆಗಳಲ್ಲೊಂದಾದ ಗುಡೇಕೋಟೆಯು ಪ್ರಸಿದ್ಧಿಗೆ ಬಂದಿದ್ದು ಪಾಳೇಯಗಾರರ ಆಡಳಿತ ಅವಧಿಯಲ್ಲಿ. ಕೋಟೆ, ನಿರ್ಮಾಣವು ಕೂಡ ಇವರ ಕಾಲದಲ್ಲಿ ಆಗಿರಬಹುದು. ಆದರೆ ನಿಜವಾದ ಕರ್ತೃ ಯಾರು ಎಂಬುದು ತಿಳಿದುಬಂದಿಲ್ಲ. ಇಂತಹ ಕೋಟೆಯನ್ನು ಕಟ್ಟುವುದು ಸಣ್ಣಕೆಲಸವಲ್ಲ. ಒಂದು ರಾಜ್ಯವನ್ನು ಕಟ್ಟುವಷ್ಟು ಶಕ್ತಿ ಒಂದು ಕೋಟೆಯನ್ನು ಕಟ್ಟಲು ಬೇಕಾಗುವುದು. ರಾಜ್ಯ ಸಾಮ್ರಾಜ್ಯಗಳು ಹುಟ್ಟುವಾಗಲೇ ಕೋಟೆಕೊತ್ತಲಗಳ ಆಲೋಚನೆಯೂ ಹುಟ್ಟುತ್ತದೆ. ರಾಜಧಾನಿ ಮತ್ತು ಅದರ ಸುರಕ್ಷತೆ ರಾಜಭಂಡಾರದ ಭದ್ರತೆ, ಸೈನ್ಯಶಕ್ತಿಯ ನಿರ್ವಹಣೆ, ಆಡಳಿತಾತ್ಮಕ ಕ್ರಮಗಳು ಈ ಎಲ್ಲಾ ಸಂಗತಿಗಳಿಗೂ, ಕೋಟೆಯ ಅಗತ್ಯವಿರುತ್ತದೆ. ಇದನ್ನು ಮನಗೊಂಡ ನಮ್ಮ ಪೂರ್ವಿಕರು ಕೋಟೆಗಳನ್ನು ನಿರ್ಮಾಣ ಮಾಡಿದ್ದಾರೆ. ಇವು ಪೂರ್ವಿಕರ ಅರ್ಹತೆಗಳನ್ನು ಅವರ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ ವೈರಿಗಳಿಂದ ಸಾಮ್ರಾಜ್ಯದ ರಕ್ಷಣೆ ಜನರ ಯೋಗಕ್ಷೇಮ ಮತ್ತು ಅರಮನೆಯ ಉಸ್ತುವಾರಿಗಳು ಭದ್ರಕೋಟೆಯಿಂದ ಮಾತ್ರ ಸಾಧ್ಯ. ಭದ್ರಕೋಟೆಗೆ ಸಮರ್ಥ ಸೇನೆಯ ಅಗತ್ಯವು ಇರುತ್ತದೆ. ಏಕೆಂದರೆ ''ಶಸ್ತ್ರಾಗಾರವಿಲ್ಲದ ಕೋಟೆ ಕೋಟೆಯೇ ಅಲ್ಲ'' ಕೋಟೆಯಿದ್ದ ಮೇಲೆ ಅದನ್ನು ರಕ್ಷಿಸಲು ಸಮರ್ಥ ಸೇನೆಯ ಅಗತ್ಯವು

ಇರುತ್ತದೆ.[೧೨] ಇದನ್ನು ಮನಗೊಂಡು ಇಲ್ಲಿಯ ಪಾಳೆಯಗಾರರು ಈ ಗ್ರಾಮದಲ್ಲಿ ಕೋಟೆಯನ್ನು ನಿರ್ಮಿಸಿದ್ದಾರೆ.

ಹಬ್ಬಿರುವ ಎರಡು ಬೆಟ್ಟಗಳನ್ನು ಬಳಸಿಕೊಂಡು ಹೊರಕೋಟೆಯನ್ನು ಕಟ್ಟಿದ್ದು ಇದೊಂದು ಗಿರಿದುರ್ಗವಾಗಿದೆ. ಇದನ್ನು ತಳಪಾಯದ ಆಧಾರವಿಲ್ಲದೆ ಹಾಸು ಬಂಡೆಯ ಮೇಲೆ ನಿರ್ಮಿಸಿದಂತಿದೆ. ಬೆಟ್ಟದ ತುದಿಯನ್ನು ತಲುಪಲು ಶತ್ರುಗಳಿಗೆ ಸಾಧ್ಯವಾಗದಂತೆ ಕೋಟೆ ಭದ್ರವಾಗಿದ್ದಿತಾದರೂ ಇಂದು ಶಿಥಿಲ ಸ್ಥಿತಿಯಲ್ಲಿದೆ. ಕೋಟೆಯ ಗೋಡೆಯೂ ಸರಾಸರಿ ೧೦ ಅಡಿ ಎತ್ತರವಾಗಿದೆ. ಕೆಲವು ಕಡೆ ಹೆಚ್ಚು ಕಡಿಮೆ ಇದೆ. ಇದರ ಅಗಲ ಸರಾಸರಿ ೨.೩ ಅಡಿಗಳಾಗಿದ್ದು ಇನ್ನೂ ಕೆಲವೆಡೆ ೫ ಅಡಿಯವರೆಗೂ ಅಗಲವಾಗಿದೆ.

ಕೋಟೆಯ ಗೋಡೆಯ ಕೆಳಭಾಗದಲ್ಲಿ ಆಯತಾಕಾರದ ಕಲ್ಲುಗಳನ್ನು ಬಳಸಿದ್ದು ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಕೋಟೆಯ ಆಯಾಕಟ್ಟಿನ ಸ್ಥಳಗಳಲ್ಲಿ ಕೊತ್ತಲುಗಳು (ಬುರಜ್) ನಿರ್ಮಾಣವಾಗಿವೆ. ಇವುಗಳನ್ನು ಶಸ್ತ್ರಗಳ ಸಹಿತ ಮೇಲೇರಲು ಅನುಕೂಲವಾಗುವಂತೆ ಚೌಕಾಕಾರದ ಮತ್ತು ವೃತ್ತಕಾರದಲ್ಲಿ ನಿರ್ಮಿಸಲ್ಪಟ್ಟಿವೆ. ಶತ್ರುಗಳ ಬರುವಿಕೆಯನ್ನು ಗ್ರಹಿಸುವುದು ಮತ್ತು ಕೋಟೆಯು ರಕ್ಷಣೆ ಮಾಡಿಕೊಳ್ಳುವುದು ಇವುಗಳ ನಿರ್ಮಾಣದ ಮುಖ್ಯ ಉದ್ದೇಶವಾಗಿದೆ. ಈ ಕೋಟೆಗೆ ಪ್ರಮುಖ ಬಾಗಿಲು ಮತ್ತು ಉಪಬಾಗಿಲುಗಳನ್ನು ಹೊಂದಿದೆ. ಕೋಟೆಯ ಒಳಪ್ರವೇಶಿಸಲು ಇರುವುದೇ ಒಂದೇ ಮಾರ್ಗ ಅದು ದೂರದಿಂದ ಗೋಚರಿಸುವುದಿಲ್ಲ.

ಕೋಟೆಯ ಮಹತ್ವ : ಒಂದು ರಾಜ್ಯದ ಅಳಿವು ಉಳಿವಿಗೆ ರಾಜನ ಪಾತ್ರ ಎಷ್ಟು ಮುಖ್ಯವೋ ಅಷ್ಟೇ ಕೋಟೆಗಳ ಪಾತ್ರವು ಮುಖ್ಯವಾದುದು. "ಕೋಟೆ ನೀರನ್ನು ಸಂಗ್ರಹಿಸುವ ಕೊಡ ಇದ್ದ ಹಾಗೆ"[೧೩] ಕೊಡಕ್ಕೆ ತೂತು ಬಿದ್ದರೆ ನೀರು ಉಳಿಯಲಾರದು. ಹಾಗೆಯೇ ಕೋಟೆಯು ಸಡಿಲವಾದರೆ ರಾಜ್ಯ ಉಳಿಯಲಾರದು. ಕೋಟೆಯನ್ನು ಗೆದ್ದುದಾದರೆ ಇಡೀ ರಾಜ್ಯವೇ ಸಿಕ್ಕಂತೆ. ಅಂದು ಕೋಟೆಯನ್ನು ಕಟ್ಟುವುದು ಮತ್ತು ಗೆಲ್ಲುವುದು ಪ್ರತಿಷ್ಠೆಯ ವಿಷಯವಾಗಿತ್ತು.

ಕೋಟೆಯಲ್ಲಿ ನೀರಿನ ಪೂರೈಕೆ : ಕೋಟೆಗಳಲ್ಲಿ ಕುಡಿಯುವ ನೀರಿಗೆ, ಅಂದಿನ ಪಾಳೇಯಗಾರರು ಸಾಕಷ್ಟು ಗಮನಹರಿಸಿರುವುದು ಕಂಡುಬರುತ್ತದೆ. ಕೋಟೆಯನ್ನು ಒಳಗೊಂಡ ಬೆಟ್ಟಗುಡ್ಡಗಳಲ್ಲಿ ಚಿಕ್ಕ ದೊಡ್ಡಬಂಡೆಯ ಸಂದುಗಳಿಗೆ ಗೋಡೆಗಳನ್ನು ಕಟ್ಟಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಇಂತಹ ಮಳೆಯ ನೀರಿನ ಸಂಗ್ರಹದ ಬಾವಿ ಹೊಂಡಗಳನ್ನು ಈಗಲೂ ಕಾಣಬಹುದು. ಈ ಬಾವಿ ಹೊಂಡಗಳ ಹೆಸರುಗಳು ಈ ರೀತಿಯಿವೆ. ತೊಟ್ಟಿಲುಬಾವಿ ತಣ್ಣೀರಿನ ಉಸಕಿನ ಹೊಂಡ, ಅಕ್ಕಮ್ಮ

[illegible]

ಹೊಂಡ ಇನ್ನೂ ಮುಂತಾಗಿ. ತೊಟ್ಟಿಲು ಬಾವಿಯ ಇನ್ನೊಂದು ಹೆಸರು ಬಿಸಿಲು ಬಾವಿ. ಈ ಬಾವಿಯ ಮೇಲ್ಭಾಗದಲ್ಲಿ ಸುತ್ತಲೂ ಹೆಬ್ಬಂಡೆಗಳು ಆವರಿಸಿರುವುದರಿಂದ ಸೂರ್ಯ ಕಿರಣಗಳು ಬಾವಿಯೊಳಗೆ ಬೀಳುವುದು ಕಷ್ಟಕರ. ಈ ಬಾವಿಯ ನೀರು ಬೇಸಿಗೆಯಲ್ಲಿ ತಣ್ಣಗಿರುತ್ತವೆ. ತಣ್ಣೀರಿನ ಉಸುಕಿನ ಹೊಂಡದ ಹತ್ತಿರ ಓಕುಳಿ ಹೊಂಡವೂ ಇದೆ. ಇಲ್ಲಿ ಯುಗಾದಿ ಹಬ್ಬದ ಸಂದರ್ಭದಲ್ಲಿ ಮನರಂಜನಾ ಕ್ರೀಡೆಗಳು ನಡೆಯುತ್ತಿದ್ದವು. ಆದರೀಗ ಈ ಹೊಂಡಗಳು ದನಕರುಗಳು ವಿಶ್ರಾಂತಿಸುವ ಕೊಳಗಳಾಗಿವೆ. ಈ ಹೊಂಡಗಳಲ್ಲಿ ನೀರು ಶಾಶ್ವತವಾಗಿರಲೆಂದು ಮತ್ತು ಅಂತರ್ಜಲದ ಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಇಲ್ಲಿನ ಪಾಳೇಯಗಾರರು ಕೋಟೆಯ ಹೊರಭಾಗದಲ್ಲಿ ಬೊಮ್ಮಲಿಂಗನ ಕೆರೆಯನ್ನು ನಿರ್ಮಾಣ ಮಾಡಿದ್ದರೆಂದು ಕಂಡುಬರುತ್ತದೆ. ಈ ಕೋಟೆಯಲ್ಲಿ ಅರಮನೆಗೆ ಬೇಕಾಗುವಷ್ಟು ನೀರನ್ನು ಬಂಡೆಯ ಸಂದುಗಳಿಗೆ ಗೋಡೆಯನ್ನು ಅಡ್ಡಕಟ್ಟಿ ಅರಮನೆಯ ಆವರಣದಲ್ಲಿ ನೀರನ್ನು ಸಂಗ್ರಹಿಸುತ್ತಿದ್ದರು ಈ ಸಂಗ್ರಹ ತಾಣಗಳು ಹೊಂಡಗಳಾಗಿ ಪರಿವರ್ತನೆಯಾಗಿವೆ. ಈ ಹೊಂಡಗಳಲ್ಲಿ ಹಿಂದಿನ ರಚನೆ ಉಳಿದವುಗಳಿಗಿಂತ ಭಿನ್ನವಾಗಿದೆ. ಇದನ್ನು ಮೆಟ್ಟಲುಗಳಂತೆ ನಿರ್ಮಿಸಿದ್ದಾರೆ. ಇದನ್ನು ಪಾಳೆಯಗಾರರು ಜಲಕ್ರೀಡೆಗಾಗಿ ನಿರ್ಮಿಸಿರಬಹುದೆಂದು ಊಹಿಸಬಹುದಾಗಿದೆ. ಈ ಹೊಂಡಗಳು ಈಗ ಹೂಳು ತುಂಬಿವೆ. ಇಲ್ಲಿ ಹಿರಿಯ ಅಧಿಕಾರಿಯ ಮನೆಗಳು, ಸೈನಿಕರ ವಸತಿ ನಿಲಯಗಳು, ಪಾಳೆಯಗಾರರ ವಾಸಸ್ಥಳವಾಗಿದ್ದುದರಿಂದ ಜನ ನಿಬಿಡ ಪ್ರದೇಶವಾಗಿರುತ್ತಿದ್ದವು. ಈ ಕಾರಣಕ್ಕೆ ಇಲ್ಲಿ ಕುಡಿಯಲು ಹೊಂಡಗಳನ್ನು ನಿರ್ಮಿಸಿದ್ದಾರೆ. ಮತ್ತು ಕೋಟೆ ಒಳಗಿನ ಜನಸಾಮಾನ್ಯರಿಗೆ ನೀರು ಪೂರೈಸುವುದು ಪಾಳೆಯಗಾರನ ಕರ್ತವ್ಯವೆಂದಷ್ಟೇ ಭಾವಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಪಾಳೆಯಗಾರರು ನೀರಿನ ವ್ಯವಸ್ಥೆಯನ್ನು ಮಾಡಿಸಿದ್ದರು.

ಕೋಟೆಯೊಳಗಿನ ಸ್ಮಾರಕಗಳು : ರಾಗಿ ಕಣಜ: ಇದು ಪಾಳೆಯಗಾರ ಕಾಲದಲ್ಲಿ ಆಹಾರ ಸಂಗ್ರಹಣೆ ಗೋಸ್ಕರ ಕಟ್ಟಿಸಿದಂತಹ ಉಗ್ರಾಣವಾಗಿದೆ. ಈ ಉಗ್ರಾಣವನ್ನು ಸುಟ್ಟ ಇಟ್ಟಿಗೆ, ಗಾರೆಗಳಿಂದ ಕಟ್ಟಲಾಗಿದೆ. ಇದು ಸುಮಾರು ೬೦ ಅಡಿ ಉದ್ದ ೨೫ ಅಡಿ ಅಗಲವಾಗಿದೆ. ಈ ಕಣಜವು ಮೂರು ಕೋಣೆಗಳಿಂದ ಕೂಡಿದೆ. ಈ ಉಗ್ರಾಣದೊಳಗೆ ಹೋಗಲು ಮೇಲ್ಭಾಗದಲ್ಲಿ ಕಿಂಡಿಗಳನ್ನು ಬಿಟ್ಟಿದ್ದಾರೆ. ಇದು ಇಂದು ಶಿಥಿಲ ಸ್ಥಿತಿಯಲ್ಲಿದೆ. ಇದರಲ್ಲಿ ಬಹುಶಃ ರಾಗಿಯನ್ನು ಶೇಖರಣೆ ಮಾಡುತ್ತಿದ್ದರಿಂದ ಇದನ್ನು ರಾಗಿ ಕಣಜವೆಂದು ಕರೆದಿರಬಹುದು.

ತುಪ್ಪದ ಕಣಜ : ತುಪ್ಪದ ಕಣಜವನ್ನು ವಿಶಾಲವಾದ ಬಂಡೆಯ ಮೇಲೆ ನಿರ್ಮಿಸಿದ್ದಾರೆ. ಇದು ಶಿಥಿಲ ವ್ಯವಸ್ಥೆಯಲ್ಲಿದ್ದು ಇಂದಿಗೂ ಈ ಕಟ್ಟಡದಲ್ಲಿ ತುಪ್ಪದ ವಾಸನೆ ಬರುತ್ತಿರುವುದನ್ನು ಗಮನಿಸಬಹುದು. ಈ ಕೋಟೆಯ ಬಂಡೆಗಲ್ಲಿನ ಮೇಲೆ ಕೆತ್ತಿದ ಅನೇಕ ಚಿತ್ರಗಳನ್ನು ಕಾಣಬಹುದು. ಈ ಕೋಟೆಯಲ್ಲಿ

ಆಂಜನೇಯ ದೇವಸ್ಥಾನ, ಮಲ್ಲಿಯಮ್ಮ, ಚೌಡಮ್ಮ, ದೇವಸ್ಥಾನಗಳನ್ನು ನೋಡಬಹುದು. ಭಗ್ನಾವಶೇಷಗಳಾಗಿರುವ ಪಾಳೇಗಾರರ ಮನೆ, ಸೈನಿಕರ ನಿವೇಶನಗಳು, ಪ್ರಾಗಿತಿಹಾಸ ಕಾಲಕ್ಕೆ ಸಂಬಂಧಿಸಿದ ವರ್ಣಚಿತ್ರಗಳು, ಅನೇಕ ಗುಪ್ತ ಮಾರ್ಗಗಳು ಇಲ್ಲಿ ಕಂಡುಬರುತ್ತವೆ. ಅದರಲ್ಲೊಂದು ಮಾರ್ಗ ಹಂಪೆಯವರೆಗೂ ಸಾಗಿದೆ ಎನ್ನುತ್ತಾರೆ. ಈ ಮೇಲೆ ವಿವರಿಸಿದ ಕೋಟೆಯಿರುವ ಬೆಟ್ಟವನ್ನು ದೊರೆಗಳ ಬೆಟ್ಟವೆಂದು ಕರೆಯಲಾಗುತ್ತದೆ.

ಕರ್ನಾಟಕದ ಇತಿಹಾಸದ ಪ್ರಸಿದ್ಧ ಕೋಟೆಗಳಲ್ಲಿ ಅವಿಭಾಜ್ಯ ಅಂಗವೆನಿಸಿದ ತುಪ್ಪದ ಕಣಜಗಳ ನಿರ್ಮಾಣಗಳನ್ನು ನೋಡಬಹುದು.[೧೪] ತುಪ್ಪದ ಕೊಳಗಳು ಸಾಮಾನ್ಯವಾಗಿ ನೆಲಮಟ್ಟದಿಂದ ಕೆಳಗೆ ಬಾವಿಯಂತೆ ವರ್ತುಲಾಕಾರವಾಗಿ ನಿರ್ಮಿತವಾಗಿದ್ದು, ಇದರ ಒಳಭಾಗದಲ್ಲಿ ಗಾರೆಯಿಂದ ಗಿಲಾವು ಮಾಡಲಾಗಿದೆ. ನೆಲಮಟ್ಟದಿಂದ ಬಂಡೆಗಳ ಮೇಲಕ್ಕೆ ಚೌಕಾಕಾರದ ಇಟ್ಟಿಗೆ ಗಾರೆಗಳಿಂದ ನಿರ್ಮಿತ ಗೋಡೆಗಳಿವೆ. ಇವುಗಳಿಗೆ ರಕ್ಷಣಾ ವ್ಯವಸ್ಥೆ ಇದ್ದು ಇವುಗಳನ್ನು ತಲುಪುವ ದಾರಿ ಅಸಾಧ್ಯವಾಗಿರುತ್ತದೆ. ಇವುಗಳಲ್ಲಿ ಶೇಖರಿಸಿದ ತುಪ್ಪವನ್ನು ಯುದ್ಧ ಸಮಯದಲ್ಲಿ ತುಪಾಕಿಗಳಿಗೆ, ಫಿರಂಗಿಗಳಿಗೆ, ಕೋವಿಗಳಿಗೆ ಸವರಲು ಹಾಗೂ ಗಾಯಗೊಂಡ ಸೈನಿಕರ ಶಸ್ತ್ರಚಿಕಿತ್ಸೆಯ ಸಮಯದಲ್ಲಿ ಉಪಯೋಗಿಸಲಾಗುತ್ತಿತ್ತು. ಇಂತಹ ತುಪ್ಪದ ಕಣಜಗಳು ಆ ಕಾಲದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದ್ದವು.

ಟಿಪ್ಪಣಿಗಳು

೦೧. ತಿಪ್ಪೇರುದ್ರಸ್ವಾಮಿ ಎಚ್., **ಕರ್ನಾಟಕ ಸಂಸ್ಕೃತಿ ಸಮೀಕ್ಷೆ**, ೧೯೯೭, ಪು.೫೨೭.

೦೨. ಅದೇ ಪು.೫೨೮.

೦೩. ಸುರೇಶ ಕೆ.ಎಂ., **ಕರ್ನಾಟಕದೇವಾಲಯ ಕೋಶ**, ೧೯೯೯, ಕನ್ನಡ ವಿಶ್ವವಿದ್ಯಾಲಯ,ಹಂಪಿ, ಪು.೧೪.

೦೪. ಅದೇ, ಪು.೧೪.

೦೫. ಅದೇ, ಪು.೧೯೭.

೦೬. ಅದೇ, ಪು.೧೯೭.

೦೭. ಅದೇ, ಪು.೧೮೩.

೦೮. ತೇಜೇಶ್ವರ ಎಚ್.(ಸಂ), **ಸಾಧನೆಯ ಸಿರಿಸ್ಮರಣ ಸಂಚಿಕೆ**, ೧೯೯೫, ಪು.೧೧.

೦೯. **ಸಂಕ್ಷಿಪ್ತ ಕನ್ನಡ ನಿಘಂಟು**, ೨೦೦೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.೩೭೮.

೧೦. ಅಶ್ವಥ್ ಡಿ.ಎಸ್., **ಕೊಪ್ಪಳ ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ)**, ೨೦೦೧, ಪು.೧೩೧.

೧೧. ಅದೇ, ಪು.೧೩೧.

೧೨. ಅದೇ, ಪು.೧೫೦.

೧೩. ಕೋಟ್ರೇಶ್ ಎಂ., ಉಚ್ಚಂಗಿದುರ್ಗ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ), ಪು.೮೧.

೧೪. ವಾಸು ಎಂ.ವಿ.(ಸಂ), ದಕ್ಷಿಣ ಕರ್ನಾಟಕದ ಅರಸುಮನೆತನಗಳು, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.೭೩.

ಅಧ್ಯಾಯ ೬

ಸಮಾರೋಪ

ಕರ್ನಾಟಕ ರಾಜಕೀಯ ಚರಿತ್ರೆಯಲ್ಲಿ ಅತ್ಯಂತ ಹಿರಿಮೆಯನ್ನು ಗಳಿಸಿದ ವಿಜಯನಗರವು ತನ್ನ ಸ್ವತಂತ್ರವಾದ ಆಡಳಿತ ಪದ್ಧತಿಯಿಂದ ಹುಟ್ಟು ಹಾಕಿದ ಮಾಂಡಲೀಕ, ಸಾಮಂತ ವ್ಯವಸ್ಥೆಯು ವಿಜಯನಗರದ ಅವನತಿ ನಂತರ ಚಿಕ್ಕ ಚಿಕ್ಕ ಪಾಳೆಯಪಟ್ಟುಗಳಾಗಿ ರಚನೆಗೊಂಡವು. ಇಂದು ಚರಿತ್ರೆಯಲ್ಲಿ ಕಾಣುವ ಅನೇಕ ರಾಜಮನೆತನಗಳ ಜೊತೆಗೆ ಪಾಳೆಯಗಾರರ ಮನೆತನಗಳನ್ನು ಕಾಣಬಹುದಾಗಿದೆ. ಇಂತಹ ಮನೆತನಗಳ ಬಗ್ಗೆ ವಸ್ತುನಿಷ್ಟವಾದ ಅಧ್ಯಯನ ಕೈಗೊಳ್ಳುವಲ್ಲಿ ಹಾಗೂ ಪಾಳೆಯಗಾರರ ಚರಿತ್ರೆಯೊಂದಿಗೆ ಹೊಂದಿಕೊಂಡು ಬರುವ ಪ್ರಮುಖ ಪ್ರದೇಶಗಳಾದ ಚಿತ್ರದುರ್ಗ, ಹರಪನಹಳ್ಳಿ, ಬಸವಪಟ್ಟಣ, ಜರ್ಮಲಿ, ಹಾಗಲವಾಡಿ, ನಾಯಕನಹಟ್ಟಿ, ತರೀಕೆರೆ ಮುಂತಾದ ಹೆಸರುಗಳ ಜೊತೆಗೆ ಬರುವ ಗುಡೇಕೋಟೆ ಎಂಬ ಹೋಬಳಿ ಪ್ರದೇಶವು ಒಂದು.

ಈ ಪ್ರದೇಶವು ಪ್ರಾಚೀನತೆಯ ಕುರುಹುಗಳನ್ನು ಉಳಿಸಿಕೊಂಡು ತನ್ನ ಸ್ವಂತಿಕೆಯ ಸಂಸ್ಕೃತಿಯನ್ನು ಸಾರುತ್ತದೆ. ಬಹುದಿನಗಳಿಂದ ನಮ್ಮ ಚರಿತ್ರೆಯ ಅಧ್ಯಯನಗಳು ದೊರೆತ ಸಾಮಗ್ರಿಗಳ ವಿಶ್ಲೇಷಣೆಯ ಹಂತದಲ್ಲಿ ನೆಲೆನಿಂತಿದೆ. ಆದರೆ ಆಕರಗಳ ಕೊರತೆಯಿಂದಾಗಿ ಇನ್ನೂ ದೊರೆಯದ ಎಷ್ಟೋ ಚರಿತ್ರೆಯು ಕಣ್ಮರೆಯಾಗಿದೆ. ಪ್ರಸ್ತುತ ಗುಡೇಕೋಟೆಯ ಚರಿತ್ರೆಯನ್ನು ಕಟ್ಟುವಲ್ಲಿ ಪಾಳೆಯಗಾರರ ಮನೆತನದವರು ನೀಡಿದ ಕಾಗದ ಪತ್ರಗಳು ನೆರವಾಗುತ್ತವೆ. ಹೀಗಾಗಿ ದೊರೆತ ಮಾಹಿತಗಳನ್ನೇ ಸಾಧ್ಯವಾದಷ್ಟು ವಿಶ್ಲೇಷಣೆಗೆ ಒಳಪಡಿಸಿ ಚರಿತ್ರೆಯನ್ನು ನಿರೂಪಿಸಲಾಗಿದೆ. ಹಾಗೆಯೇ ಅಧ್ಯಯನಕ್ಕೆ ಹಿನ್ನೆಲೆಯಾಗಿ ಅಲ್ಲಿಯ ಭೌಗೋಳಿಕ ಪರಿಸರದ ಪರಿಚಯ ನೀಡಲಾಗಿದೆ.

[illegible]

ಈ ಪ್ರದೇಶವು ಬೆಟ್ಟಗುಡ್ಡಗಳಿಂದ ಸುತ್ತುವರಿದಿದ್ದು ನೈಸರ್ಗಿಕ ಗುಹೆಗಳು ಮಾನವನು ವಾಸವಾಗಲು ಯೋಗ್ಯವಾಗಿದ್ದವು. ಗುಡೇಕೋಟೆ ಸುತ್ತಮುತ್ತಲಿನ ಗ್ರಾಮಗಳಾದ ಬ್ರಹ್ಮಗಿರಿ, ಅಪ್ಪಯ್ಯನಹಳ್ಳಿ, ರಾಮದುರ್ಗ, ಬೆಳಗಟ್ಟ ಮತ್ತು ಜರ್ಮಲಿಗಳಲ್ಲಿ, ಆದಿಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ ಮತ್ತು ಬೃಹತ್ ಶಿಲಾಯುಗಗಳ ಅವಶೇಷಗಳು ದೊರೆತಿವೆ.

ಗುಡೇಕೋಟೆ ಗ್ರಾಮದ ಕೋಟೆಯೊಳಗೆ ಹೊರಗಡೆ ನೂತನ ಶಿಲಾಯುಗದ ವರ್ಣಚಿತ್ರಗಳನ್ನು ಕಾಣಬಹುದು. ಸ್ಥಳೀಯರು ಇದನ್ನು ಬೇಟೆಯಾಡುವ ಮನೆಯೆಂದು ಕರೆಯುತ್ತಾರೆ.

ಗುಡೇಕೋಟೆ ಪ್ರದೇಶದ ರಾಜಕೀಯ ಚರಿತ್ರೆಯನ್ನು ಮೌರ್ಯಸಾಮ್ರಾಜ್ಯದಿಂದ ಗುರುತಿಸಬಹುದಾಗಿದೆ. ದೇವನಾಂಪ್ರಿಯ ಅಶೋಕನ ಶಾಸನಗಳು, ಅವಶೇಷಗಳು ಗುಡೇಕೋಟೆ ಹತ್ತಿರದ ಪ್ರದೇಶಗಳಾದ ಬ್ರಹ್ಮಗಿರಿ, ಜಟ್ಟಂಗಿ ರಾಮೇಶ್ವರ, ಸಿದ್ದಾಪುರಗಳಲ್ಲಿ ದೊರೆತಿವೆ. ಮೌರ್ಯರ ನಂತರ ಬಳ್ಳಾರಿ ಹಾಗೂ ಅನಂತಪುರ ಪ್ರದೇಶಗಳನ್ನು ಒಳಗೊಂಡ ಈ ಭಾಗವು ಶಾತವಾಹನರ ಅಥವಾ ಶಾತವಾಹನ ರಾಷ್ಟ್ರವೆಂದು ಪ್ರಸಿದ್ಧಿ ಪಡೆದಿತ್ತು. ತದನಂತರ ಬನವಾಸಿಯ ಕದಂಬರು ಉಚ್ಚಂಗಿದುರ್ಗದವರೆಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದಾಗ ಸಾಮಂತ ಅರಸರಾದ ೨ನೇ ಪುಲಕೇಶಿ, ಕೀರ್ತಿವರ್ಮರು, ಕುರುಗೋಡು ಪ್ರದೇಶವನ್ನು ಗೆದ್ದುಕೊಂಡಾಗ ಗುಡೇಕೋಟೆಯ ಅವರ ಅಧೀನಕ್ಕೆ ಒಳಪಟ್ಟಿತು. ರಾಷ್ಟ್ರಕೂಟರು ಚಾಲುಕ್ಯರಿಂದ ಈ ಪ್ರದೇಶವನ್ನು ಪಡೆದುಕೊಂಡರು. ೩ನೇ ಗೋವಿಂದನು ನೊಳಂಬವಾಡಿಯನ್ನು ಜಯಿಸಿ ಆಳ್ವಿಕೆ ನಡೆಸಿದ್ದು ಕ್ರಿ.ಶ.೯೪೪-೪೫ರ ಬಾಗಳಿ ಕಲ್ಲೇಶ್ವರ ದೇವಾಲಯದ ಶಾಸನದ ಪ್ರಕಾರ ೩ನೇ ಕೃಷ್ಣನು ಕೋಗಳಿ ೫೦೦ಕ್ಕೆ ಒಡೆಯನಾಗಿದ್ದುದರಿಂದ ಗುಡೇಕೋಟೆ ಪ್ರದೇಶವು ಅವರಿಗೆ ಸೇರಿದ್ದಿತು. ಇವರ ತದನಂತರ ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಒಳಪಟ್ಟಿತು. ಈ ಪ್ರದೇಶದ ಹತ್ತಿರದಲ್ಲಿರುವ ಸಿಡೇಗಲ್ಲು, ಪಂಚಲಿಂಗೇಶ್ವರ ಪ್ರದೇಶಗಳಲ್ಲಿ ಇವರ ಕಾಲದ ದೇವಾಲಯ ಮೂರ್ತಿಗಳು ಕಂಡುಬರುತ್ತವೆ. ಇವರ ಸಾಮಂತರಾದ ಪಾಂಡ್ಯರು ಮಹಾಮಂಡೇಶ್ವರರಾಗಿ ನೊಳಂಬವಾಡಿಯ ೩೨೦೦ನ್ನು ಆಳಿದರು. ಇದರಿಂದ ಈ ಪ್ರದೇಶವು ಕಲ್ಯಾಣ ಚಾಲುಕ್ಯರ ಆಡಳಿತಕ್ಕೆ ಸೇರಿತ್ತು ಎಂದು ಹೇಳಬಹುದು.

ಇದರನಂತರ ಈ ಭಾಗವನ್ನು ಹೊಯ್ಸಳರು ವಶಪಡಿಸಿಕೊಂಡು ಉಚ್ಚಂಗಿದುರ್ಗ ಮತ್ತು ನೊಳಂಬವಾಡಿಯ ೩೨೦೦ನ್ನು ವಶಪಡಿಸಿಕೊಂಡರು. ಕುಮ್ಮಟದುರ್ಗ ಕಂಪಿಲರಾಯನ ಕಾಲದಲ್ಲಿ ಈ ಪ್ರದೇಶವು ಇವರ ಅಧೀನದಲ್ಲಿದ್ದು ಕೈಫಿಯತ್ತಗಳಿಂದ ತಿಳಿದುಬರುತ್ತದೆ. ವಿಜಯನಗರದ ಸಾಮ್ರಾಜ್ಯದಲ್ಲಿ ಗುಡೇಕೋಟೆ ಒಂದು ಕಿರು ಪ್ರಾಂತ್ಯವಾಗಿತ್ತಲ್ಲದೆ. ಅರಸರಿಂದ ನಿಯೋಜಿತ ಪ್ರತಿನಿಧಿ ಇಲ್ಲಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದನು. ರಕ್ಕಸಗಿ-ತಂಗಡಿಗೆ ಯುದ್ಧದ ತರುವಾಯ ಈ

ಪ್ರದೇಶವು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟು, ಅವರ ರಾಜಧಾನಿ ಕೇಂದ್ರವಾಗಿ ಬೆಳಕಿಗೆ ಬಂದಿತ್ತು. ಇಲ್ಲಿನ ಪಾಳೆಯಗಾರರು ಸುಮಾರು ೩೦೦ ವರ್ಷಗಳ ಕಾಲ ಆಳ್ವಿಕೆ ನಡೆಸುವ ಕಾಲದಲ್ಲಿ ಹೈದರಾಲಿಯು ಈ ಭಾಗವನ್ನು ವಶಪಡಿಸಿಕೊಂಡು, ನಾಲ್ಕನೇಯ ಆಂಗ್ಲೊ ಮೈಸೂರು ಯುದ್ಧ ನಂತರ ಈ ಪ್ರದೇಶವು ಬ್ರಿಟಿಷರ ಆಳ್ವಿಕೆ ಒಳಪಟ್ಟಿತು.

ಗುಡೇಕೋಟೆ ಪಾಳೆಯಗಾರರ ಚಾರಿತ್ರಿಕ ಸಂಗತಿಗಳು ಇತಿಹಾಸಕಾರರ ದೃಷ್ಟಿಯಲ್ಲಿ ಅಲಭ್ಯವಾಗಿವೆ. ಕಾರಣ ಈ ಪಾಳೆಯಾಗರಿಕೆಯ ಬಗ್ಗೆ ನಿಖರವಾದ ಮಾಹಿತಿ ನೀಡುವ ಶಾಸನವಾಗಲಿ, ಸಾಹಿತ್ಯಿಕ ಕೃತಿಯಾಗಲಿ ಮತ್ತು ಪ್ರವಾಸಿಗರ ಬರವಣಿಗೆಗಳಾಗಲಿ ದೊರೆಯದಿರುವುದು. ಆದುದರಿಂದ ಇಂದಿನ ಪಾಳೆಯಗಾರರ ವಂಶದವರೆಂದು ಹೇಳಿಕೊಳ್ಳುವ ಮನೆತನದವರು ಒದಗಿಸಿದ ಕೆಲವು ಕಾಗದ ಪತ್ರಗಳಿಂದ ಸುಮಾರು ೩೦೦ ವರ್ಷ ಆಳ್ವಿಕೆ ನಡೆಸಿದ ಪಾಳೆಯಗಾರರ ರಾಜಕೀಯ ಸಂಗತಿಗಳನ್ನು ಈ ಅಧ್ಯಯನದಲ್ಲಿ ಪತ್ತೆ ಹಚ್ಚಲಾಗಿದೆ. ಕುಮಾರ ರಾಮನ ವಂಶಸ್ಥರು ವಿಜಯನಗರದ ಸಾಮಂತರು ಎಂದು ಹೇಳಿಕೊಳ್ಳುವ ಇವರು ಗುಡೇಕೋಟೆಗೆ ಗಡಿಯಾಂಕಭೀಮನ ಸಂಸ್ಥಾನವೆಂದು ಕರೆದುಕೊಳ್ಳುತ್ತಾರೆ. ನಂತರ ಈ ಪ್ರದೇಶಗಳು ಇವರ ಕೈ ತಪ್ಪಿ ಹೋಗಿರುವುದು ತರುವಾಯ ಕೃಷ್ಣದೇವರಾಯನ ಕಾಲದಲ್ಲಿ ಇವರು ಸೈನಾಧಿಕಾರಿಗಳಾಗಿದ್ದು ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿದ್ದಕ್ಕಾಗಿ ತಮ್ಮ ಪೂರ್ವಿಕರ ಪ್ರದೇಶಗಳಾದ ಗುಡೇಕೋಟೆ, ಸಂಡೂರು, ಬಾಂಡ್ರಾವಿ ಇನ್ನೂ ಮೊದಲಾದ ಪ್ರದೇಶಗಳನ್ನು ಬಳುವಳಿಯಾಗಿ ಪಡೆದು ಪಾಳೆಯಗಾರಿಕೆಯನ್ನು ಮರುಸ್ಥಾಪನೆ ಮಾಡುತ್ತಾರೆ. ಈ ಪಾಳೆಯಗಾರರ ಆಳ್ವಿಕೆ ಗಂಡಳನಾಯಕನಿಂದ ಪ್ರಾರಂಭವಾಗುತ್ತದೆ. ಚಿತ್ರದುರ್ಗ ಭರಮಣ್ಣನಾಯಕನ ಕಾಲದಲ್ಲಿ ಈ ಪಾಳೆಯಗಾರರು ಅವರ ಅಧೀನರಾಗಿದ್ದರು. ಇವರು ತಮ್ಮ ಪಾಳೆಯಪಟ್ಟನ್ನು ರಕ್ಷಿಸಿಕೊಳ್ಳಲು ಇತರ ಪಾಳೆಯಗಾರರಿಗೆ ಯುದ್ಧದಲ್ಲಿ ಸಹಾಯ ಮಾಡುವುದರ ಜೊತೆಗೆ ವೈವಾಹಿಕ ಸಂಬಂಧದ ಮೂಲಕ ತಮ್ಮ ಪಾಳೆಯಪಟ್ಟು ಭದ್ರಪಡಿಸಿಕೊಳ್ಳುತ್ತಿದ್ದರು. ಚಿತ್ರದುರ್ಗದ ನಾಯಕರಿಗೆ ಅಧೀನರಾಗಿದ್ದರೂ ಕೂಡ ತಮ್ಮ ಪ್ರದೇಶದಲ್ಲಿ ಸ್ವತಂತ್ರ ಆಡಳಿತವನ್ನು ಹೊಂದಿದ್ದರು. ಈ ಪಾಳೆಯಗಾರರಲ್ಲಿ ಪ್ರಸಿದ್ಧನಾದವನು ಜಟ್ಟಂಗಿರಾಜ. ಇವರು ಪಾಳೆಯಗಾರರು ಎಂದು ಕರೆಯಿಸಿಕೊಳ್ಳದೇ ರಾಜಶ್ರೀ ದೊರೆ ಎಂದು ಮತ್ತು ಪಾಳೆಯಪಟ್ಟನ್ನು ಗಡಿಯಾಂಕ್ ಭೀಮ ಗುಡೇಕೋಟೆ ಸಂಸ್ಥಾನ ಎಂದು ಕರೆದುಕೊಂಡಿದ್ದಾರೆ.

ಪ್ರಸ್ತುತ ಅಧ್ಯಯನದಲ್ಲಿ ಪಾಳೆಯಗಾರರ ಕಾಲದ ಸಾಂಸ್ಕೃತಿಕ ಅಂಶಗಳನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಪಾಳೆಯಗಾರರು ೩೩ ಹಳ್ಳಿಗಳ ಒಡೆಯರಾಗಿದ್ದರು. ಇವರು ಗುಡೇಕೋಟೆ ಸಂಡೂರು ಸೀಮೆಯನ್ನು ಆಳುತ್ತಿದ್ದರು ಎಂಬುದಕ್ಕೆ ಶಾಸನಗಳು ಆಧಾರವಾಗಿವೆ. ಇವರ ಆಡಳಿತ

ಉತ್ತಮವಾಗಿತ್ತು. ಇಮ್ಮಡಿ ರಾಜಪ್ಪನಾಯಕನು ಹೊರ ಸೀಮೆಯನ್ನು ವಶಪಡಿಸಿಕೊಂಡಾಗ ಅಲ್ಲಿ ಜನರಿಗೆ ಒಳ್ಳೆಯ ಆಡಳಿತದ ಬಗ್ಗೆ ಆಶ್ವಾಸನೆ ಕೊಟ್ಟದ್ದನ್ನು ಮತ್ತು ಆ ಪ್ರದೇಶದ ಮೇಲೆ ಜನನ ಮರಣ ತೆರಿಗೆ ವಿನಾಯಿತಿ ಮಾಡಿದ್ದನ್ನು ಕಾಣಬಹುದು. ಇವರು ಎಲ್ಲಾ ಧರ್ಮಗಳ ಬಗ್ಗೆ ಗೌರವ ಹೊಂದಿದ್ದರು. ಇದಕ್ಕೆ ಒಳ್ಳೆಯ ನಿರ್ದಶನವೆಂದರೆ ಕುದರಡುವು ಗ್ರಾಮವನ್ನು ಶೃಂಗೇರಿ ಮಠದ ವಿದ್ಯಾಭವನ ಶಂಕರ ಭಾರತಿಸ್ವಾಮಿಗೆ ಚಿನ್ನಯ ರಾಜನು ದಾನವನ್ನು ನೀಡಿದ್ದು, ಸಂಡೂರು ಕುಮಾರ ಸ್ವಾಮಿ ಬೆಟ್ಟದಲ್ಲಿ ಪುಷ್ಕರಣಿಯನ್ನು ಕಟ್ಟಿಸಿದ್ದು ಮತ್ತು ಮಠಗಳು ದೇವಾಲಯಗಳನ್ನು ಕಟ್ಟಿಸಿದ್ದನ್ನು ನೋಡಬಹುದು. ಇತರೆ ಪಾಳೆಯಗಾರರಂತೆ ಈ ಪಾಳೆಯಗಾರರು ಗ್ರಾಮವನ್ನು ನಿರ್ಮಾಣ ಮಾಡಿದ್ದಾರೆ. ಕೆರೆಬಾವಿಗಳಿಂದ ಕೃಷಿಯನ್ನು ಅಭಿವೃದ್ಧಿಪಡಿಸಿದ್ದಾರೆ.

ಗುಡೇಕೋಟೆ ಗ್ರಾಮದಲ್ಲಿದಲ್ಲಿ ಕಂಡುಬರುವ ದೇವಾಲಯಗಳು ಸ್ಮಾರಕಗಳು ಹಾಗೂ ಕೋಟೆ ಕೊತ್ತಲುಗಳ ವಿವರಣೆಯನ್ನು ನೀಡಲಾಗಿದೆ. ಆದರೆ ಆಕರಗಳ ಕೊರತೆಯಿಂದಾಗಿ ಇವುಗಳ ಸಮಗ್ರ ಚಿತ್ರಣ ನೀಡುವಲ್ಲಿ ಸಮಸ್ಯೆ ಎದುರಾಗದೆ ಚೌಳೇಶ್ವರ ದೇವಾಲಯವು ಕಲ್ಯಾಣ ಚಾಲುಕ್ಯ ಶೈಲಿಯಲ್ಲಿದ್ದು ಈ ದೇವಾಲಯವು ಕಲ್ಯಾಣ ಚಾಲುಕ್ಯರ ಆಡಳಿತದ ಅವಧಿಯಲ್ಲಿ ಕಟ್ಟಿರಬಹುದು. ಇನ್ನೂಳಿದ ದೇವಾಲಯ, ಮಠಗಳು ವಿಜಯನಗರೋತ್ತರ ಶೈಲಿಯಲ್ಲಿದ್ದರಿಂದ ದೇವಾಲಯಗಳು ಪಾಳೆಯಗಾರರ ಆಡಳಿತ ಅವಧಿಯಲ್ಲಿ ಕಟ್ಟಿದ್ದಾರೆಂದು ತಿಳಿಯಬಹುದು. ಕೋಟೆಯ ಅವಶ್ಯಕತೆಯನ್ನು ಮನಗೊಂಡು ಪಾಳೆಯಗಾರರು, ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿಸಿದ್ದಾರೆ. ಕೋಟೆಯೊಳಗೆ ನೀರಿನ ಸೌಕರ್ಯವನ್ನು ಮಾಡಿಸಿದ್ದಾರೆ. ಕೋಟೆಯ ಒಳಗೆ ತುಪ್ಪದ ಕಣಜವನ್ನು ಕಾಣಬಹುದು. ಈ ಕಣಜದಲ್ಲಿ ಶೇಖರಿಸಿದ ತುಪ್ಪವನ್ನು ಯುದ್ಧ ಸಮಯದಲ್ಲಿ ಇದನ್ನು ಉಪಯೋಗಿಸಲಾಗುತ್ತಿತ್ತು. ಇದರಿಂದ ತುಪ್ಪದ ಕಣಜದ ಮಹತ್ವವನ್ನು ಆರಿಯಬಹುದಾಗಿದೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಗುಡೇಕೋಟೆ ಪ್ರದೇಶಕ್ಕೆ ಚಾರಿತ್ರಿಕ ಮಹತ್ವವನ್ನು ಒದಗಿಸಿಕೊಟ್ಟ ಅಂಶಗಳ ಮೇಲೆ ಬೆಳಕು ಚೆಲ್ಲುವ ಕಾರ್ಯವನ್ನು ಕೈಗೊಳ್ಳಲಾಗಿದೆ ಅಲ್ಲದೆ ಇಲ್ಲಿಯ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಅಂಶಗಳತ್ತ ಗಮನಹರಿಸಲಾಗಿದೆ.

ಅನುಬಂಧಗಳು

೧. ಗ್ರಂಥಋಣ

೨. ಛಾಯಾಚಿತ್ರಗಳು

೩. ದಾಖಲಾತಿ ಪತ್ರಗಳು

೪. ಜನಪದ ಗೀತೆ

೫. ಕೋಲಿನ ಪದ

೬. ಬ್ರಿಟಿಷರಿಂದ ವಿಶ್ರಾಂತಿ ವೇತನ ತೆಗೆದುಕೊಂಡ ಪಾಳೆಯಗಾರರ ಮನೆತನದವರ ಹೆಸರುಗಳು

೭. ನಕ್ಷೆಗಳು

೧. ಗ್ರಂಥ ಋಣ

೦೧. ಕಲಬುರ್ಗಿ ಎಂ.ಎಂ.(ಸಂ), ಕರ್ನಾಟಕ ಕೈಫಿಯತ್ತುಗಳು, ೧೯೯೪, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೦೨. ಕೃಷ್ಣ ಎಂ.ಎಚ್., ಕನ್ನಡ ನಾಡಿನ ಚರಿತ್ರೆ, ಭಾಗ ೩, ೧೯೫೦, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೦೩. ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ(ಸಂ)., ಕರ್ನಾಟಕ ಇತಿಹಾಸ ದರ್ಶನ, ೧೯೭೦, ಬೆಂಗಳೂರು.

೦೪. ಚಂದ್ರಶೇಖರಯ್ಯ ಎಂ., ಕೂಡ್ಲಿಗಿ ತಾಲೂಕು ದರ್ಶನ, ೧೯೮೭, ಐಬಿಎಚ್.ಪ್ರಕಾಶನ, ಬೆಂಗಳೂರು.

೦೫. ಚನ್ನಬಸಪ್ಪ ಪಾಟೀಲ(ಸಂ)., ಬಳ್ಳಾರಿ ಜಿಲ್ಲೆಯ ಶಾಸನಗಳು, ಭಾಗ ೨, ೧೯೯೭, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೦೬. ಚನ್ನಬಸವೇಶ್ವರ., ಬಳ್ಳಾರಿ ಜಿಲ್ಲೆ ದರ್ಶನ, ೧೯೭೮, ಐಬಿಎಚ್ ಪ್ರಕಾಶನ, ಬೆಂಗಳೂರು.

೦೭. ತಿಪ್ಪೇರುದ್ರಸ್ವಾಮಿ ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೧೯೯೭, ಡಿ.ವಿ.ಕೆ.ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು.

೦೮. ದಿವಾಕರ ರಂ.ರಾ.(ಸಂ), ಕರ್ನಾಟಕ ಪರಂಪರೆ, ಭಾಗ ೧, ೧೯೭೦, ಬೆಂಗಳೂರು.

೦೯. ನಾಗರಾಜ ಎಂ.ಜಿ. ಮತ್ತು ಕೃಷ್ಣಮೂರ್ತಿ ಪಿ.ವಿ.(ಸಂ), ಇತಿಹಾಸ ದರ್ಶನ ಸಂಪುಟ ೧೬, ೨೦೦೧, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೧೦. ದೇವರಕೊಂಡಾರೆಡ್ಡಿ(ಸಂ)., ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧, ೧೯೯೮, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೧೧. ಯೋಗೀಶ್ವರಪ್ಪ ಡಿ.ಎನ್., ಹಾಗಲವಾಡಿಯ ನಾಯಕರು, ೧೯೯೯, ಕನ್ನಡ ವಿಶ್ವವಿದ್ಯಾಲಯ,ಹಂಪಿ

೧೨. ರವಿಕುಮಾರ ಎನ್.ಎಂ ಮತ್ತು ವೃಷಬೇಂದ್ರಚಾರ್ ಎ.(ಸಂ), ಮುನ್ನೆಡೆಯ ಕೂಡ್ಲಿಗಿ, ೧೯೯೮, ಹೇಮಂತ ಪ್ರಕಾಶನ, ಎಂ.ಬಿ.ಐಯ್ಯನಹಳ್ಳಿ.

೧೩. ವರದರಾಜರಾವ್ ಜಿ., ಕುಮ್ಮಟದುರ್ಗ, ೧೯೮೫, ಐಬಿಎಚ್ ಪ್ರಕಾಶನ, ಬೆಂಗಳೂರು.

೧೪. ಶಿವತಾರಕ್ ಕೆ.ಬಿ., ಕರ್ನಾಟಕ ಪುರಾತತ್ವ ನೆಲೆಗಳು, ೨೦೦೧, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ಶಿವಣ್ಣ ಕೆ.ಎಸ್.(ಸಂ), ಕರ್ನಾಟಕ ಚರಿತ್ರೆ ಸಂಪುಟ ೩, ೧೯೯೭, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಶೀಲಾಕಾಂತ ಪತ್ತಾರ., ಬಾದಾಮಿ ಸಾಂಸ್ಕೃತಿಕ ಅಧ್ಯಯನ, ೨೦೦೦, ಕನ್ನಡ ವಿಶ್ವವಿದ್ಯಾಲಯ,ಹಂಪಿ

೧೭. ಶೇಷಾದ್ರಿ ಬಿ. ಮತ್ತು ಚಂದ್ರಶೇಖರ ಟಿ.ಆರ್.(ಸಂ), ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟ, ೧೯೯೮, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಶ್ರೀನಿವಾಸ ಎಂ.ವಿ. ಮತ್ತು ಲಕ್ಷ್ಮಣ್ ತೆಲಗಾವಿ(ಸಂ), ಚಂದ್ರವಳ್ಳಿ, ೧೯೭೬, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ.

೧೯. ಸದಾಶಿವಪ್ಪ ಕುಂ.ಬಾ., ಹರಪನಹಳ್ಳಿ ಪಾಳೆಯಗಾರರು, ೧೯೯೬, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೦. ಸದಾಶಿವಪ್ಪ ಕುಂ.ಬಾ., ಜಿಲ್ಲಾ ಸಾಂಸ್ಕೃತಿಕ ದರ್ಶನ ಸಂಶೋಧಿತ ಲೇಖನಗಳು, ೧೯೯೦, ಶ್ರೀ ಮಾಂತೇಶ ಪ್ರಕಾಶನ, ಕುಂಚೂರು.

೨೧. ಸಿವೆಲ್ ರಾಬರ್ಟ್, ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ, ಸದಾನಂದ ಕನವಳ್ಳಿ (ಅನು), ೧೯೯೨, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೨೨. ಸೂರ್ಯನಾಥ್ ಯು.ಕಾಮತ್(ಸಂ)., ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ ೩, ೧೯೮೬, ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೨೩. ಸುರೇಶ ಕೆ.ಎಂ.(ಸಂ), ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ, ೧೯೯೯, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೨೪. ಸುಂದರ ಅ.(ಸಂ), ಕರ್ನಾಟಕ ಚರಿತ್ರೆ ಸಂಪುಟ ೧, ೧೯೯೭, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೨೫. ಸುರೇಂದ್ರರಾವ್ ಬಿ.ಸಂ., ಅದೇ ಸಂಪುಟ ೭, ೧೯೯೭, ಕನ್ನಡ ವಿಶ್ವವಿದ್ಯಾಲಯ,ಹಂಪಿ.

೨೬. ಸೂರ್ಯನಾರಾಯಣರಾವ್ ಬಿ., ಮರೆಯಲಾಗದ ಮಹಾಸಾಮ್ರಾಜ್ಯ, ಬಾಲಸುಬ್ರಹ್ಮಣ್ಯ (ಅನು), ೨೦೦೦, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಇಂಗ್ಲಿಶ್ ಪುಸ್ತಕಗಳು

1. Abhishankar, K.(Ed), **Mysore State Bellary District,**1972, Govt Press, Bangalore.

02. Francis W.(Ed), **Madras District Gazetter, Bellary Vol.V,** Govt Press, Madras.

03. Hayavadana Rao C., **A History of Mysore Vo.III,** 1943, Bangalore.

04. Kelshall J., **Madras District Gazetter, Bellary Vol.V,** 1842, Govt Press, Madras.

05. Maclean C.D(Ed)., **Manual of Administration, Madras Presidency Vol.1,** 1987, Arian Education Services, New Delhi.

Reports

1. Bellary District Gazetter, Vol.III, 1863, Govt Press, Madras.

2. MAR., 1936, Govt Press, Bangalore.

3. Hand Book of The Revenue Records of the Ceded Districts, 1932, Govt. Press, Madras.

4. History of Gudekote Estate., Period-1828, File-110 .

ಸ್ಮರಣ ಸಂಚಿಕೆಗಳು

೦೧. ತೇಜೇಶ್ವರ ಎಚ್.(ಸಂ), ಸಾಧನೆಯ ಸಿರಿ, ೧೯೯೫, ವಿಕ್ರಮ ಪ್ರಿಂಟರ್ಸ್, ಗದಗ.

೦೨. ಲಕ್ಷ್ಮಣ್ ತೆಲಗಾವಿ(ಸಂ), ದವನ ಸಿಸಿ, ೧೯೯೨.

೦೩. ಶೇಷನವರತ್ನ(ಸಂ), ಕರ್ಮಭೂಮಿ, ೧೯೯೯, ರೇಣುಕ ಪ್ರಿಂಟರ್ಸ್, ಬೆಂಗಳೂರು.

೦೪. ನೀರಾವರಿ(ಪ್ರ.ಸಂ.), ಭಗೀರಥಿ ಸಂಕಲ್ಪ, ೧೯೯೯, ಲಕ್ಷ್ಮಿ ಮುದ್ರಣಾಲಯ, ಬೆಂಗಳೂರು.

ದಾಖಲೆಯ ಪತ್ರಗಳು

೧. ಗುಡೇಕೋಟೆ ಪಾಳೆಯಗಾರರ ಮೂಲದ ದಾಖಲೆ ಪತ್ರ


೨. ಗುಡೇಕೋಟೆ ಪಾಳೆಯಗಾರರ ಆಳ್ವಿಕೆಯ ವರ್ಷಗಳನ್ನು ತಿಳಿಸುವ ದಾಖಲೆ ಪತ್ರ


೩. ವಂಶಾವಳಿ ಚಿತ್ರಗಳು

೪. ಇತರ ಪಾಳೆಯಗಾರರೊಂದಿಗೆ ಹೊಂದಿರುವ ಸಂಬಂಧಿ ತಿಳಿಸುವ ದಾಖಲೆ ಪತ್ರ



ಗುಡೇಕೋಟೆ ಗ್ರಾಮದ ವಿಹಂಗಮ ನೋಟ





ಗ್ರಾಮದಲ್ಲಿ ಕಂಡುಬರುವ ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು





ಬೃಹತ್ ಶಿಲಾಗೋರಿ
(ಸ್ಥಳೀಯರು ಬೇಟೆಯಾಡುವ ಮನೆ ಎಂದು ಕರೆಯುತ್ತಾರೆ)




ಶಿವಪಾರ್ವತಿಯರ ವಿಗ್ರಹ





ಪಂಚಲಿಂಗೇಶ್ವರ ಗುಹಾಲಯ



ಉಪ್ಪರಿಗೆ (ತಂಗಾಳಿ ಮಹಲ್)







ನಾಗಕನ್ಯೆಯರ ಮೂರ್ತಿ ಶಿಲ್ಪಗಳು



ವಿಣೆ ಈರಪ್ಪ ಮಠ



ಗುಹೆಯಲ್ಲಿ ಕಂಡುಬರುವ ಕಾಲಭೈರವ ವಿಗ್ರಹ



ಗುಡೇಕೋಟೆಯಲ್ಲಿ ಕಂಡುಬರುವ ಶಾಸನ







ಕೋಟೆಯೊಳಗೆ ಹೋಗುವ ಗುಪ್ತ ಮಾರ್ಗ




ಕೋಟೆಯೊಳಗಿನ ದ್ವಾರ








ರಾಗಿ ಕಣಜ



ತುಪ್ಪದ ಕಣಜ








ಬಿಸಿಲು ಬಾವಿ (ತೊಟ್ಟಿಲು ಬಾವಿ)




ಓಕುಳಿ ಹೊಂಡ








ಬೊಮ್ಮಲಿಂಗನ ಕೆರೆ




ಗುಡೇಕೋಟೆ ಪಾಳೆಗಾರರ ಮೂಲದ ದಾಖಲೆ ಪತ್ರ (ಮುಂಭಾಗ)



ಗುಡೇಕೋಟೆ ಪಾಳೆಗಾರರ ಮೂಲದ ದಾಖಲೆ ಪತ್ರ (ಹಿಂಭಾಗ)

ಕೃಪೆ : ಕೃಷ್ಣವರ್ಮರಾಜ


[illegible]

[illegible]

[illegible]

ದಳನಾಯಕರು [illegible] ವರುಷ ರಾಜ್ಯ

ನ್ನು ಪ್ರಭುತ್ವ ಇದ್ದರು.

[illegible]

[illegible] ೦ ವರುಷ ರಾಜ್ಯ ಆಳಿದರು..

[illegible] ನಾಯಕರ ಮಕ್ಕಳು [illegible] ನಾಯಕರು

೧೭ ವರುಷ ರಾಜ್ಯವನ್ನಾಳಿದರು

[illegible] ನಾಯಕರ ಮಕ್ಕಳು [illegible]

[illegible] ಗಳು ರಾಜ್ಯವನ್ನಾಳಿದರು

[illegible]

[illegible] ರಾಜ್ಯ ಆಳಿದರು

ರಾಮಪ್ಪ ನಾಯಕರ ಮಕ್ಕಳು [illegible]

ರು [illegible] ವರುಷ ರಾಜ್ಯವಾಳಿದರು

[illegible] ರ ಮಕ್ಕಳು [illegible]

[illegible] ವರುಷ ರಾಜ್ಯ ಆಳಿದರು.

[illegible] ರಾಜರ ಮಕ್ಕಳು [illegible]

[illegible] ವರುಷ ರಾಜ್ಯ ಆಳಿದರು.


[illegible] ರಾಜರ ಮಕ್ಕಳು ರಾಮಪ್ಪ ನಾಯಕರ ಮ

ಕ್ಕಳು [illegible] ವರುಷ ರಾಜ್ಯ ಆಳಿದರು.

ಶ್ರೀ [illegible] ಚಿತ್ರದುರ್ಗದ [illegible]


ಗುಡೇಕೋಟೆ ಪಾಳೆಯಗಾರರ ಆಳ್ವಿಕೆಯ ವರ್ಷಗಳನ್ನು ತಿಳಿಸುವ ದಾಖಲೆ ಪತ್ರ

ಕೃಪೆ: ಕೃಷ್ಣವರ್ಮರಾಜ




ವಂಶಾವಳಿ ೧

ಕೃಪೆ: ಕೃಷ್ಣವರ್ಮರಾಜ



ವಂಶಾವಳಿ ೨

ಕೃಪೆ: ಕೃಷ್ಣವರ್ಮರಾಜ



ಇತರೆ ಪಾಳೆಯಗಾರರೊಂದಿಗೆ ಹೊಂದಿರುವ ಸಂಬಂಧ ತಿಳಿಸುವ ದಾಖಲೆ ಪತ್ರ

ಕೃಪೆ: ಕೃಷ್ಣವರ್ಮರಾಜ

[illegible]

೪. ಜನಪದ ಗೀತೆ

ಜಟ್ಟಂಗಿ ರಾಜರ ಬಗ್ಗೆ ಇರುವ (ಕೋಲಿನ ಪದ)

ಗುಡಿಯೆ ಕೋಟೆಂಬುದು ಕರಿಯಕಲ್ಲಿನ ಮೇಲೆ
ಸಿಂಬೆ ಸುತ್ತಾಯ್ತೆ ಚೀಗಿನ ಪಳೆಯ,
ಚೆನ್ನಾನಿಗೌಡನೆಂತ ಲೋಲುಗಾರನೋ
ಜಟಿಂಗರಾಜನೆಂತಾ ಮೋಜುಗಾರನೋ ||ಪ||

ವಾರೇ ಮುಂಡಾಸದವನು ಗೀರಗಂಧದವರು
ಬಂಟರಿರುವುದೇ, ಜರಿಮಲೆ!
ಚೆನ್ನಾನಿಗೌಡನೆಂತ ಲೋಲುಗಾರನೇ,
ಜಟಿಂಗರಾಜನೆಂತ ಮೋಜುಗಾರನೇ

ಕಾರೆಕಕ್ಕೆ ಕಾಯಿ ಬಾರೆ ಬಿಕ್ಕೆಕಾಯಿ
ಬಡವರು ಬದವುಕದೇ ವುಡೇವೋ?
ಚೆನ್ನಾನಿಗೌಡನೆಂತ ಲೋಲುಗಾರನೇ,
ಜಂಟಿಗರಾಜನೆಂತ ಮೋಜುಗಾರನೇ

ತಗ್ಗಿನಾಗಳ ಕಾರ್ನಾರಹಟ್ಟಿ
ಗಬ್ಬದ ಕುರಿ ಕಡಿಸರಣ್ಣ
ಅದುರಾಗೆ ಪಾಲು ಮಾಡಿದ ಬುದ್ದಿವಂತ
ಚೆನ್ನಾನಿಗೌಡನೆಂತ ಲೋಲುಗಾರನೇ
ಜಟಿಂಗರಾಜನೆಂತ ಮೋಜುಗಾರನೇ

ಕೃಪೆ: ಡಾ. ವಿರೂಪಾಕ್ಷಿ ಪೂಜಾರಹಳ್ಳಿ

೫. ಕೋಲಿನ ಪದ

ಗುಡೇಕೋಟೆ ಪಾಳೆಯಗಾರರ ಹೆಣ್ಣು ಮಕ್ಕಳಾದ ನೀಲಮ್ಮಾಜಿ ಬಸಮ್ಮಾಜಿ(ಹರಪನಹಳ್ಳಿ ಎರಡನೇ ಸೋಮಶೇಖರ ಅರಸನ ಮಡದಿಯರು)ಯವರ ಬಗ್ಗೆ ಇರುವ ಕೋಲಿನ ಪದ

ನೀಲಮ್ಮಾಜಿ, ಬಸಮ್ಮಾಜಿ ಕೂಡ್ಯಾರೆ| ಬಾವಿನೀರಿಗ್ಹೋದಾರೆ ಕೋಲು| ಕೋಲೆ
ಬಾವಿ ನೀರಿಗ್ಹೋದಾರೆ| ಹಕ್ಕಿಪಕ್ಕಿ ಸುಳವಿಲ್ಲ| ಕೋಲು ಕೋಲೆ
ಹಕಿಪಕ್ಕಿ ಸುಳವಿಲ್ಲ| ಮರಗಳಾಗಿ ನಿಂತರೇ| ಕೋಲು| ಕೋಲೆ
ಮರಗಳಾಗಿ ನಿಂತರೇ| ಬಡಿಗೇರಣ್ಣಾ ಬಂದಾನೆ| ಕೋಲು| ಕೋಲೆ
ಬಡಿಗೇರಣ್ಣಾ ಬಂದಾನೆ| ಕಡಿದು ತುಂಡು ಮಾಡ್ಯಾನೆ| ಕೋಲು ಕೋಲೆ
ಕಡಿದು ತುಂಡು ಮಾಡ್ಯಾನೆ| ಕೆತ್ತಿ ತೊಟ್ಟಿಲು ಮಾಡ್ಯಾನೆ| ಕೋಲು ಕೋಲೆ
ಕೆತ್ತಿ ತೊಟ್ಟಿಲು ಮಾಡ್ಯಾನೆ| ಚಾರಿ ಬೈಲಾಗಿಟ್ಟಾನೆ| ಕೋಲು| ಕೋಲೆ
ಚಾರಿ ಬೈಲಾಗಿಟ್ಟಾನೆ| ಮಕ್ಕಳಿದ್ದವರು ಬಂದಾರೆ| ಕೋಲು ಕೋಲೆ
ಮಕ್ಕಳಿದ್ದವರು ಬಂದಾರೆ| ಖರೀದಿ ಮಾಡಿ ಒಯ್ದಾರೆ| ಕೋಲು ಕೋಲೆ
ಖರೀದಿ ಮಾಡಿ ಒಯ್ದಾರೆ| ಪಡಸಲ್ಯಾಗ ಕಟ್ಯಾರೆ| ಕೋಲು ಕೋಲೆ
ಪಡಸಾಲ್ಯಾಗೆ ಕಟ್ಯಾರೆ| ಜೋಗಂ ಜೋಗಂ ಪಾಡ್ಯಾರೆ ಕೋಲು ಕೋಲೆ

ಕೃಪೆ: ಹುಂ.ಬಾ.ಸದಾಶಿವಪ್ಪ

[illegible]
[illegible]


[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible]

[illegible]

೬. ಬ್ರಿಟಿಷರಿಂದ ವಿಶ್ರಾಂತಿ ವೇತನ ತೆಗೆದುಕೊಂಡ ಗುಡೇಕೋಟೆ ಪಾಳೆಯಗಾರರ ಮನೆತನದವರ ಹೆಸರುಗಳು

ಕ್ರ. ಸಂ.	ವಿಶ್ರಾಂತಿ ವೇತನ ತೆಗುದುಕೊಂಡ ಪಾಳೆಯಗಾರರ ಮನೆತನದವರ	ತೆಗುದುಕೊಂಡ ವರ್ಷ	ತೆಗುದುಕೊಂಡ ವಾರ್ಷಿಕ ಹಣದ ಮೊತ್ತ
೦೧.	ಜಟ್ಟಂಗಿ ರಾಜ	೧೮೫೯-೬೦	೭೪.೯ ಪೈಸೆ
೦೨.	ಬೊಮ್ಮಂತ ರಾಜ	೧೮೬೦	೭೪.೯ ಪೈಸೆ
೦೩.	ಪಂಪಾಪತಿ ರಾಜ	೧೮೬೯-೭೦	೯೩.೩೪ ಪೈಸೆ
೦೪.	ವೆಂಕಟಮ್ಮ ನಾಗತಿ ಮತ್ತು ಕೇಶವಮ್ಮ ನಾಗತಿ	೧೮೮೯-೯೦	೯೩.೩೪ ಪೈಸೆ
೦೫	ಕೇಶವಮ್ಮ ನಾಗತಿ	೧೯೨೯	೧೩೯.೧೩೦ ಪೈಸೆ

ಕೃಪೆ : *ಪ್ರೊ. ಲಕ್ಷ್ಮಣ್ ತೆಲಗಾವಿ (ಅವರ ದಾಖಲೆ ಸಂಗ್ರಹದಿಂದ)*



ಬಳ್ಳಾರಿ ಜಿಲ್ಲೆಯ ನಕ್ಷೆ



ಕೂಡ್ಲಿಗಿ ತಾಲೂಕಿನಲ್ಲಿರುವ ಗುಡೇಕೋಟೆ ಹೋಬಳಿ ಪ್ರದೇಶ



ಕೃಪೆ: ಸರ್ವೇ ಇಲಾಖೆ, ಕೂಡ್ಲಿಗಿ